# ಶ್ರೀಗುರುಸಾರ್ವಭೌಮ

ಸಾಂಸ್ಕೃತಿಕ ಕನ್ನಡ ಮಾಸಪತ್ರಿಕೆ

ಗುರುರಾದ್ಯಃ ಸ್ವಸಿದ್ಧಾಂತಪ್ರತಿಷ್ಠಾಪನಪಂಡಿತಮ್ । ಶ್ರುತ್ವಾಯಂ ವ್ಯಾಸನಿಕಟೇ ನಿಶ್ಚಿಂತ ಇವ ವರ್ತತೇ ॥

**ಸಂಪುಟ : 34 ಕಾರ್ತೀಕ – November-December 2007 ಸಂಚಿಕೆ : 09**

| | | |
|---|---|---|
| ಸಂಸ್ಥಾಪನಾ ಪೋಷಕರು | : | **ಪ್ರಾತಃಸ್ಮರಣೀಯ ಶ್ರೀಸುಜಯೀಂದ್ರತೀರ್ಥಶ್ರೀಪಾದಂಗಳವರು** |
| ಸಾಮ್ರಾಟ್ ಪೋಷಕರು | : | **ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರು**<br>ಪೀಠಾಧೀಶ್ವರರು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ<br>ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ<br>ಹಾಗೂ<br>**ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರು**<br>ಉತ್ತರಾಧಿಕಾರಿಗಳು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ<br>ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ |
| ಪ್ರಧಾನ ಸಂಪಾದಕರು | : | **ರಾಜಾ. ಎಸ್. ರಾಜಗೋಪಾಲಾಚಾರ್ಯ**<br>ಶ್ರೀಪಾದಂಗಳವರ ಆಪ್ತ ಕಾರ್ಯದರ್ಶಿಗಳು<br>ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ |
| ಕಾರ್ಯನಿರ್ವಾಹಕ ಸಂಪಾದಕರು | : | **ರಾಜಾ. ಎಲ್. ಸೂರೀಂದ್ರಾಚಾರ್ಯ** |
| ಸಂಪಾದಕರು | : | **ಕಡಪ ರಾಘವೇಂದ್ರಾಚಾರ್ಯ** |
| ಉಪ-ಸಂಪಾದಕರು | : | **ಪಿ.ವಿ. ಹರಿನಾಥ್** |
| ಸಂಪಾದಕ ಮಂಡಳಿ | : | **ವಿದ್ವಾನ್ ಶ್ರೀ ಕುರುಡಿ. ಸುಶೀಲೇಂದ್ರಾಚಾರ್ಯ**<br>**ಡಾ. ಹೆಚ್.ಜಿ. ವೇಂಕಟರಾಘವೇಂದ್ರಾಚಾರ್ಯ**<br>**ವಿದ್ವಾನ್ ಶ್ರೀ ಪುರಾಣಿಕ. ಸುಬ್ರಹ್ಮಣ್ಯಾಚಾರ್ಯ**<br>**ಶ್ರೀ ಬಿ.ಎ. ಪಾಟೀಲ್** |

ಪ್ರಧಾನ ಕಛೇರಿ :
**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಅಡ್ಮಿನಿಸ್ಟ್ರೇಟಿವ್ ಆಫೀಸ್, ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಮಂತ್ರಾಲಯ – 518 345, ಜಿಲ್ಲಾ : ಕರ್ನೂಲ್
**ದೂರವಾಣಿ ಸಂಖ್ಯೆ – 08512-279887 — ಮೊಬೈಲ್ – 099857-03033**

ಬೆಂಗಳೂರು ಶಾಖಾ ಕಛೇರಿ :
**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ನಂ. 4, ಸೀತಾಪತಿ ಅಗ್ರಹಾರ
ಹೊಸ ತರಗುಪೇಟೆ, ಬೆಂಗಳೂರು – 560 002
**ಬೆಂಗಳೂರು ಕಛೇರಿಯ ದೂರವಾಣಿ ಸಂಖ್ಯೆ :**
**080-41146081, 9341387714, 9342651516**

## ವಿಷಯಸೂಚೀ

| | | |
|---|---|---|
| ಮಂಗಳಾಚರಣೆ | | ೦೩ |
| ಸಂಪಾದಕೀಯ | | ೦೪ |
| **ಲೇಖನಮಾಲಾ** | | |
| ಹರಿಕಥಾಮೃತಸಾರದಲ್ಲಿ ವೇದವ್ಯಾಸರ ಚಿಂತನೆ | ಕೆ. ಸತ್ಯನಾರಾಯಣಾಚಾರ್ಯ | ೦೫ |
| ತಾತ್ಪರ್ಯನಿರ್ಣಯದ ವೈಶಿಷ್ಟ್ಯ | ಕಡಪ. ರಾಘವೇಂದ್ರಾಚಾರ್ಯ | ೧೦ |
| ಸಮರ್ಪಣೆ | ರಾಮಚಂದ್ರಾಚಾರ್ಯ ಪುರೋಹಿತ್ | ೧೩ |
| ಅಪೂರ್ವ ಯೋಗಸಿದ್ಧಿಗಳು ಮತ್ತು ಚತುಷಷ್ಠಿಕಲಾವಿದ್ಯೆಗಳು | ಕೆ.ಎಲ್. ಪುಷ್ಕರಾಚಾರ್ಯ | ೨೦ |
| ಇಣುಕುನೋಟ | ಕೃಷ್ಣಮೂರ್ತಿ ಕೌಶಿಕ್ | ೨೫ |
| ಜೀವನಸಂಗ್ರಾಮದಲ್ಲಿ ಶ್ರುತಿ-ಸ್ಮೃತಿ ಮಾರ್ಗದರ್ಶನ | ಕೋಟೇಶ್ವರ ಸೂರ್ಯನಾರಾಯಣರಾವ್ | ೨೯ |
| ಹಿರಿಯರು ಹಾಕುವ ಹಾದಿ | ಜಯರಾಮ ಗರಗ | ೩೧ |
| ಧರ್ಮರಾಜನ ಧರ್ಮಪ್ರಜ್ಞೆ | ಪಾಂಡುರಂಗ ಜೋರಾಪುರ | ೩೩ |
| ಗೋಮಾತೆಯ ವೈಶಿಷ್ಟ್ಯ | ಕಡಪ. ಶ್ರೀಕಾಂತ | ೩೮ |
| ಜ್ಞಾನ ಮತ್ತು ಭಕ್ತಿ | ಹೆಚ್.ಜಿ. ಬದರೀನಾಥಾಚಾರ್ಯ | ೪೦ |
| ತಮಿಳುನಾಡಿನ ನವಗ್ರಹ ದೇವಾಲಯಗಳು-೯ | ಸಂಗ್ರಹ : ಸೂರೀಂದ್ರ | ೪೫ |
| ಪರ್ಯಟನೆ | | ೪೮ |

[ ಪತ್ರಿಕೆಯಲ್ಲಿ ಪ್ರಕಟವಾದ ವಿಚಾರಗಳಿಗೆ ಆಯಾ ಲೇಖನದ ಲೇಖಕರೇ ಜವಾಬ್ದಾರರು ]

## ಶ್ರೀಗುರುಸಾರ್ವಭೌಮಕ್ಕೆ SMS

ಪ್ರಿಯ ಓದುಗರೇ,

ಅಂಚೆವೆಚ್ಚ ಅಧಿಕವಾಗಿರುವ ಈ ದಿನಗಳಲ್ಲಿ ಓದುಗರ ಮತ್ತು ಪತ್ರಿಕೆಯ ನಡುವಿನ ಸಂಬಂಧವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಇನ್ನು ಮುಂದೆ ನಿಮ್ಮ ಶ್ರೀಗುರುಸಾರ್ವಭೌಮಕ್ಕೆ ನಿಮ್ಮ ಅಭಿಪ್ರಾಯಗಳನ್ನು ಎಸ್.ಎಂ.ಎಸ್. ಮೂಲಕವಾಗಿ ತಿಳಿಸಬಹುದಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳು, ಸುದ್ದಿಗಳು ಹಾಗೂ ಇನ್ನಿತರೇ ವಿಷಯಗಳು ನಿಮಗೆ ಇಷ್ಟವಾದಲ್ಲಿ, ಇಷ್ಟವಾಗದಿದ್ದಲ್ಲಿ ನೀವು ನೇರ ಎಸ್.ಎಂ.ಎಸ್. ಮೂಲಕ ನಮ್ಮನ್ನು ಅಭಿನಂದಿಸಬಹುದು, ನಮಗೆ ಸಲಹೆಯನ್ನೂ ನೀಡಬಹುದು. ಆಯ್ದ ಎಸ್.ಎಂ.ಎಸ್.ಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಯೋಜನೆಯನ್ನೂ ಕೂಡ ಸಂಪಾದಕಮಂಡಲಿ ಹೊಂದಿದೆ. ಎಸ್.ಎಂ.ಎಸ್.ಗಳನ್ನು ಕಳುಹಿಸುವಾಗ ಎಲ್.ಎಂ. ನಂಬರನ್ನು ತಪ್ಪದೇ ನಮೂದಿಸಿ.

**ಈ ಸಂಖ್ಯೆಗೆ ಎಸ್.ಎಂ.ಎಸ್. ಮಾಡಿ**

**9341387714**

## ಮಂಗಳಾಚರಣೆ

ಪೂರ್ಣಪ್ರಜ್ಞಕೃತಂ ಭಾಷ್ಯಮಾದೌ ತದ್ಭಾವಪೂರ್ವಕಮ್ ।
ಯೋ ವ್ಯಾಕರೋನ್ನಮಸ್ತಸ್ಮೈ ಪದ್ಮನಾಭಾಖ್ಯಯೋಗಿನೇ ॥

- ಶ್ರೀನರಹರಿತೀರ್ಥರು

ಯೋ ಭಾರತೇನ ಸತತಂ ಹಿ ಪರಿವ್ರಜಂತಿ
ಭಾಷಾಸು ರೀತಿಶತಕೇ ಚತುರಾ ಅನಂತಮ್ ।
ತತ್ಪಾದಪಂಕಜನವಾಯುಕೃತೋರುಮಾರ್ಗಾಃ
ತಾನ್ ಪದ್ಮನಾಭವರತೀರ್ಥಗುರೂನ್ನಮಾಮಿ ॥

- ಶ್ರೀನರಹರಿತೀರ್ಥರು

ಪರೈರಪಹೃತಾಮೂಲರಾಮಾರ್ಚಾ ಗುರ್ವನುಗ್ರಹಾತ್ ।
ಯೇನಾನೀತಾ ನಮಸ್ತಸ್ಮೈ ರಘುನಂದನಭಿಕ್ಷವೇ ॥

- ಶ್ರೀಸುರೇಂದ್ರತೀರ್ಥರು

ಅಜ್ಞಾನತಿಮಿರಚ್ಛೇದಂ ಬುದ್ಧಿಸಂಪತ್ಪ್ರದಾಯಕಮ್ ।
ವಿಜ್ಞಾನವಿಮಲಂ ಶಾಂತಂ ವಿಜಯಾಖ್ಯಗುರುಂ ಭಜೇ ॥

## ಶ್ರೀಸುಶಮೀಂದ್ರವಾಣಿ

ನಮ್ಮ ಇಂದ್ರಿಯಗಳು ನಮ್ಮ ಸ್ವಾಧೀನದಲ್ಲಿರಬೇಕು. ಹಾಗಾದರೇನೇ ನಮ್ಮ ಗೌರವ ನಮಗೆ ಸಿಗುತ್ತದೆ. ಹಾಗೆ ನಿಗ್ರಹಿಸದಿದ್ದರೆ, ಮಧ್ಯದವರ ಆಧಿಪತ್ಯ ಹೆಚ್ಚಾಗುತ್ತದೆ. ಉದಾ : ಹಸಿವಿನ ಬಾಧೆಯಿಂದ ಆಹಾರವನ್ನಪೇಕ್ಷಿಸುವುದು ಹಿರಿಯ, ಹೊಟ್ಟೆಯೇ ಆದರೂ ಹೊಟ್ಟೆಗೆ ಏನನ್ನು ತಿನ್ನಬೇಕೆಂದು ನಿರ್ದೇಶಿಸುವುದು ಕಿರಿಯ, ನಾಲಿಗೆ. ಈ ನಾಲಿಗೆಯು ತಿಂದದ್ದನ್ನು ಮತ್ತೊಮ್ಮೆ ತಿನ್ನಲೂ ಬಿಡುವುದಿಲ್ಲ. ಬೇರೆಯೇ ರುಚಿಕರವಾದ ಆಹಾರವನ್ನೇ ಬಯಸುತ್ತದೆ. ಹೊಟ್ಟೆಯೇನೂ ತಿಂದದ್ದನ್ನು ಬೇಡವೆನ್ನುವುದಿಲ್ಲ. ಆದರೆ ಮಧ್ಯೆ ಪಾರುಪತ್ಯವನ್ನು ಮಾಡಲು ನಾಲಿಗೆಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟ ಈ ನಾಲಿಗೆಯಿಂದಲೇ ಮಾನವನು ಅಪಹಾಸ್ಯಕ್ಕೀಡಾಗುತ್ತಾನೆ. ಆದ್ದರಿಂದಲೇ ನಾಲಿಗೆ ಬಹಳ ಕೆಟ್ಟದ್ದು. ಅದನ್ನು ನಿಗ್ರಹದಲ್ಲಿಡತಕ್ಕದ್ದು.





## ಸಂಪಾದಕೀಯ

ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಧಾರಾವಾಹಿ 'ಅಪೂರ್ವ ಯೋಗಸಿದ್ಧಿಗಳು ಮತ್ತು ಚತುಷಷ್ಠಿಕಲಾವಿದ್ಯೆಗಳು' ಲೇಖನವನ್ನು ತಾವು ಓದುತ್ತಿದ್ದೀರಿ. ಇದನ್ನು ಓದಿದಾಗ ನಮ್ಮ ಪ್ರಾಚೀನರಲ್ಲಿ ಎಷ್ಟೊಂದು ಶಕ್ತಿಯುತ ಪ್ರತಿಭೆಗಳಿದ್ದವು ಎಂಬುದರ ಪರಿಚಯವಾಗುತ್ತಿದೆ. ಹಳೆಯ ಕಾಲದ ಪೌರಾಣಿಕ ಕಥೆಗಳಲ್ಲಿ (೧) ಮಹರ್ಷಿಯ ಎದುರು ಒಬ್ಬನು ಸುಳ್ಳು ಹೇಳುವುದು, ಮಹರ್ಷಿಯು ಅವನನ್ನು ನಂಬದೇ ಕಣ್ಣುಮುಚ್ಚಿ ಧ್ಯಾನಿಸಿ ಅವನು ಹೇಳಿದ್ದು ಸುಳ್ಳೆಂದು ತಿಳಿದು ಶಾಪ ಕೊಡುವುದು. (೨) ಯಾವನೋ ಒಬ್ಬ ತನ್ನ ದೇಹ ಬಿಟ್ಟು ಹಕ್ಕಿಯ ದೇಹದಲ್ಲಿ ಪ್ರವೇಶಿಸಿ ಹಾರುತ್ತಾ ಎಲ್ಲಿಗೋ ಹೋಗಿ ಮತ್ತೆ ಬಂದು ತನ್ನ ದೇಹದೊಳಗೆ ಸೇರುತ್ತಾನೆ. (೩) ಇದ್ದಕ್ಕಿದ್ದಂತೆ ದೇವತೆಗಳು, ಋಷಿಗಳು ಮಾಯವಾಗುವುದು. ಈ ಎಲ್ಲ ಸನ್ನಿವೇಶಗಳು ರಾತ್ರಿ ಮೊಮ್ಮಕ್ಕಳು ಮಲಗಲೆಂದು ಅಜ್ಜಿಯಂದಿರು ಹೇಳುವ ಕಥೆಗಳಾಗಿದ್ದವು. ಈ ಘಟನೆಗಳನ್ನು 'ಚಂದಾಮಾಮ ಕಥೆ' ಎನ್ನುತ್ತಿದ್ದರು. ಆದರೆ ಈ ಕಥಾಭಾಗದ ಸನ್ನಿವೇಶಗಳು ಮಕ್ಕಳ ಮನೋರಂಜನೆಯ ಕಥಾಭಾಗವಾಗದೆ ಆಧುನಿಕ ವಿಜ್ಞಾನಿ ಭಗೀರಥರ ತಲೆಯ ಮೇಲೆ ಹೆಬ್ಬಂಡೆಗಳಾಗಿ ಕುಳಿತಿವೆ. ಹಿಂದೆ ಇದರ ಬಗ್ಗೆ ತಲೆಕೆಡಿಸಿಕೊಳ್ಳದ ಈಗಿನ ವಿಜ್ಞಾನಿಗಳು ಬೃಹದೇಶ್ವರ ದೇವಾಲಯದ ನಿರ್ಮಾಣದ ವಿಧಾನವನ್ನು, ಹಂಪೆಯ ಗೋಪುರದ ನೆರಳು ತಲೆಕೆಳಗಾಗಿ ಬೀಳುವುದನ್ನು ಆಲೋಚಿಸಿ ತಲೆಕೆಡಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣವಿದೆ. **ಈಗಿನ ವಿಜ್ಞಾನಿಗಳು ಇನ್ನೂ ನಮ್ಮ ಋಷಿ-ಮುನಿಗಳ ಮಟ್ಟವನ್ನು ವೈಜ್ಞಾನಿಕವಾಗಿ ಮುಟ್ಟದಿರುವುದು.** ಹೀಗೆಂದು ಹೇಳಿದರೆ ಆಶ್ಚರ್ಯವಾಗಬಹುದು. ಮೇಲೆ ಹೇಳಿದ ಮೂರು ಘಟನೆಗಳು (೧) ದೂರಸ್ಥಸಿದ್ಧಿ, (೨) ಪರಕಾಯಪ್ರವೇಶಸಿದ್ಧಿ, (೩) ಅಂತರ್ಧಾನಸಿದ್ಧಿ ಎಂಬ ಕಲೆಗಳನ್ನು ವಶಮಾಡಿ-ಕೊಂಡವರ ಕಥೆ (ಹಿಂದಿನ ಸಂಚಿಕೆಯಲ್ಲಿ ಇವುಗಳ ಬಗ್ಗೆ ನೋಡಿ). ಅಂದಿನವರಲ್ಲಿ ಅರವತ್ತನಾಲ್ಕು ಕಲೆಗಳು ಕರಗತವಾಗಿದ್ದವು. 'ಅಂತರ್ಧಾನಸಿದ್ಧಿ'ಯನ್ನು ಕರಗತ ಮಾಡಿಕೊಂಡು ಅಂದಿನವರು ಬೇಕೆಂದಾಗ ಅದೃಶ್ಯರಾಗುತ್ತಿದ್ದರು. (ಅಂತರ್ಧಾನವಾಗುವುದರ ಬಗ್ಗೆ ಅಮೆರಿಕದಲ್ಲಿ ಸಂಶೋಧನೆ ನಡೆದಿದೆ). ದೂರಪ್ರದೇಶದ ವಿಷಯಗಳನ್ನು ಶಬ್ದತರಂಗ ಸಾಧನಗಳ ಮೂಲಕ (ವೈರ್‌ಲೆಸ್) ಇಂದು ತಿಳಿದರೆ, ಅಂದಿನವರು ತರಂಗಗಳನ್ನು ನೇರವಾಗಿ ಮಿದುಳಿಗೆ ಸಂಯೋಜಿಸಿ ತಿಳಿಯುತ್ತಿದ್ದರು. ಅವರ ತಲೆಯೇ 'ವೈರ್‌ಲೆಸ್' ಆಗಿತ್ತು. ''ವಿಮಾನವನ್ನು ಹತ್ತಿಸಿದಷ್ಟು (ಟೇಕಾಫ್)ಸುಲಭ ಇಳಿಸುವಾಗ (ಲ್ಯಾಂಡ್) ಇರುವುದಿಲ್ಲ. ಅಪಘಾತಗಳ ಅವಕಾಶ ಹೆಚ್ಚು'' ಎಂದು ಹೇಳಿದ್ದು ಯಾರು ಗೊತ್ತೆ? ಚಕಿತರಾಗಬೇಡಿ, **ಭಾರದ್ವಾಜ ಮಹರ್ಷಿಗಳು.** ಶೌನಕ ಮಹರ್ಷಿಯ 'ವ್ಯೋಮಯಾನ ತಂತ್ರ', ಗರ್ಗ ನ 'ಯಂತ್ರಕಲ್ಪ', ನಾರಾಯಣನ 'ವಿಮಾನಚಂದ್ರಿಕಾ' ಈ ಗ್ರಂಥಗಳೆಲ್ಲವೂ 'ವೈಮಾನಿಕಶಾಸ್ತ್ರ'ಕ್ಕೆ ಸಂಬಂಧಿಸಿದವುಗಳು. ಇವುಗಳನ್ನು ಅಧ್ಯಯನಮಾಡಿ ಅಂದಿನ ಮಹರ್ಷಿಗಳು **ಮನೋವೇಗದ ವಿಮಾನಗಳನ್ನು ಸೃಷ್ಟಿಸಿದರು.** (ಪ್ರಾಚೀನ ಪುರಾಣಕಥೆಗಳಲ್ಲಿ ಈ ವೃತ್ತಾಂತಗಳನ್ನು ಗಮನಿಸಿರುತ್ತೀರಿ). ಈಗಿನ ವಿಜ್ಞಾನಿಗಳು ಇದನ್ನೇ ಅಜ್ಜಿಯ ಕಥೆಯೆಂದು ಅಪಹಾಸ್ಯ ಮಾಡಿದರು. ಇವರಿನ್ನೂ ಶಬ್ದವೇಗದ ವಿಮಾನಗಳನ್ನು (ಕಾಂಕಾರ್ಡ್) ಸೃಷ್ಟಿಸಿ, ಮೂರು ಬಾರಿ ಮೇಲಿಂದ ಕೆಳಗೆ ಬೀಳಿಸಿ ಒಳಗಿದ್ದವರನ್ನು ಅಲ್ಲಿಂದಲೇ ಇನ್ನೂ ಮೇಲಕ್ಕೆ ಕಳುಹಿಸಿದರು. ಹೀಗಾದರೆ ಮನೋವೇಗದ ವಿಮಾನವನ್ನು ಇವರು ಯಾವಾಗ ಸೃಷ್ಟಿಸುವುದು? ಅಂದಿನವರು ಇಂತಹ ವಿಮಾನದಲ್ಲಿ ವಿಹರಿಸಿದ ನೂರಾರು ಘಟನೆಗಳಿವೆ. ಆದ್ದರಿಂದಲೇ ಸತ್ಯವನ್ನು ಸತ್ಯವೆಂದು ಒಪ್ಪುವ ಮಹಾನ್ ವಿಜ್ಞಾನಿ ಶ್ರೀ ಅಬ್ದುಲ್ ಕಲಾಂ ರವರು ''ಅಥರ್ವಣವೇದದಲ್ಲಿ **ಈಗಿನ ವಿಜ್ಞಾನವನ್ನು ಮೀರಿದ** ಇನ್ನೂ ಏನೇನೋ ಇವೆ. ಅದನ್ನು ಅಧ್ಯಯನ ಮಾಡಬೇಕು'' ಎಂದು ಕರೆಕೊಟ್ಟಿದ್ದರು (ತುಂಬಿದ ಕೊಡವಲ್ಲವೆ?). ಇದೊಂದು ಕಲೆಗೇ ಹೀಗಾದರೆ, ಅರವತ್ತನಾಲ್ಕು ಕಲೆಗಳನ್ನು ಕೈವಶ ಮಾಡಿಕೊಂಡಿದ್ದ ರಾಯರ ಪರಮಗುರುಗಳಾದ ಶ್ರೀವಿಜಯೀಂದ್ರರು ಹೇಗಿರಬೇಡ? ಯೋಗವನ್ನು ಮೊದಲು ಹೀಯಾಳಿಸಿದ ಆಧುನಿಕರು ಈ ಯೋಗಶಾಸ್ತ್ರವನ್ನು ಈಗ ಒಪ್ಪುತ್ತಿರುವುದರಿಂದ **"ಯೋಗಬಲದಿಂದ ಕೂಡಿದ್ದ ಅರವತ್ತನಾಲ್ಕು ಕಲೆಗಳೂ ಅಂದಿನವರಲ್ಲಿ ಇದ್ದವು"** ಎಂದು ಇಂದಲ್ಲ ನಾಳೆ ಅಥವಾ ನಾಡಿದ್ದು ಒಪ್ಪಲೇಬೇಕಾದ ಪರಿಸ್ಥಿತಿ ಬರುತ್ತದೆ. ಇಂದು ಒಪ್ಪುತ್ತಿಲ್ಲ. ಏಕೆಂದರೆ, **ಪ್ರಾಚೀನರಿಗಿಂತ ಇವರಿನ್ನೂ ವೈಜ್ಞಾನಿಕವಾಗಿ ತೀರಾ ಹಿಂದುಳಿದವರು.**

**ಲೇಖನಾಂಕ**

# ಹರಿಕಥಾಮೃತಸಾರದಲ್ಲಿ ವೇದವ್ಯಾಸರ ಚಿಂತನೆ

■ ವಿದ್ವಾನ್ ಶ್ರೀ ಕೆ. ಸತ್ಯನಾರಾಯಣಾಚಾರ್ಯ
ಬೆಂಗಳೂರು

**ವೇದಪೀಠ ವಿರಂಚಿ ಭವಶ ।**
**ಕ್ರಾದಿ ಸುರ ವಿಜ್ಞಾನದಾಯಕ ।**
**ಮೋದ ಚಿನ್ಮಯ ಗಾತ್ರ ಲೋಕ ಪವಿತ್ರ ಸುಚರಿತ್ರ ॥**
**ಛೇದ ಭೇದ ವಿಷಾದ ಕುಟಿಲಾಂ ।**
**ತಾದಿ ಮಧ್ಯ ವಿದೂರನಾದಾ ।**
**ನಾದಿಕಾರಣ ಬಾದರಾಯಣ ಪಾಹಿ ಸತ್ರಾಣ ॥**

ಶ್ರೀಜಗನ್ನಾಥದಾಸರು ಈ ಮೇಲಿನ ಪದ್ಯದಲ್ಲಿ ಸಂಪೂರ್ಣ ಮಹಾಭಾರತದ ಸಾರವನ್ನೇ ಕ್ರೋಢೀಕರಿಸಿದ್ದಾರೆ. ಒಂದೊಂದು ಪದವನ್ನು ಚಿಂತನೆ ಮಾಡಿದರೆ ಶ್ರೀವೇದವ್ಯಾಸರ ಮಹಿಮೆ ತಿಳಿಯುವುದು.

**ವೇದಪೀಠ :** ಅನಂತ ವೇದರಾಶಿಗಳನ್ನು ಲೋಕದ ಜನರಿಗೆ ಎಟಕುವಂತೆ ನಾಲ್ಕು ಭಾಗವನ್ನಾಗಿ ಮಾಡಿ, ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದಗಳೆಂದು ವಿಂಗಡಿಸಿ ತಮ್ಮ ನಾಲ್ಕು ಜನ ಶಿಷ್ಯರಾದ ಪೈಲ, ವೈಶಂಪಾಯನ, ಜೈಮಿನಿ, ಸುಮಂತು ಮೂಲಕ ಪ್ರಸಾರ ಮಾಡಿದರು. ಈ ನಾಲ್ಕು ಪೀಠಗಳೇ ಚತುರಾಮ್ನಾಯಪೀಠ, ವೇದವ್ಯಾಸರಿಂದ ಸ್ಥಾಪಿಸಿದ್ದು.

**ವಿರಂಚಿ, ಭವ........ ವಿಜ್ಞಾನದಾಯಕ :** ದ್ವಾಪರದಲ್ಲಿ ಗೌತಮರ ಶಾಪದಿಂದ ನಷ್ಟ ಜ್ಞಾನ ಹೊಂದಿದ ಭೂಸುರರು, ಬ್ರಹ್ಮ ಶಕ್ರಾದಿಗಳ ಪ್ರಾರ್ಥನೆಯಂತೆ, ಪರಾಶರರ ತಪಸ್ಸಿಗೆ ಮೆಚ್ಚುಗೆ ವ್ಯಕ್ತಪಡಿಸಿ ಸತ್ಯವತೀ ಸುತನಾಗಿ ಶುಕ್ಲಶೋಣಿತ ಸಂಬಂಧ ಇಲ್ಲದೆ ಪ್ರಾದುರ್ಭೂತರಾದರು. ಇದನ್ನೇ ಶ್ರೀವಾದಿರಾಜರು, ದ್ವಾಪರದಲ್ಲಿ ಒಬ್ಬ ಮುನಿಪ, ತನ್ನ ಕೋಪದಿಂದ ಕೊಟ್ಟ ಶಾಪ ಶಾಪಿಸಲು ಜ್ಞಾನಲೋಪವಾಗೆ, ಆ ಪರತತ್ತ್ವ ಸ್ವರೂಪ, ಶ್ರೀಪತಿಯೇ ಕಾಯೆಂದು ಮೊರೆಯಿಡೆ ಪಾಪವಿರಹಿತಳಾದ ಯಮುನೆಯ ದ್ವೀಪದಲ್ಲಿ ಅಂಬಿಗರ ಪೆಣ್ಣಿನ ರೂಪಕೊಲಿದವಳಲ್ಲಿ ಜನಿಸಿದೆ..... ಇತ್ಯಾದಿ. ಪ್ರಾದುರ್ಭೂತರಾದ ಏಳನೇ ದಿವಸಕ್ಕೆ ಉಪನಯನ ಸಂಸ್ಕಾರ ಮಾಡಿಸಿಕೊಂಡು ಮೇರುಪರ್ವತದಲ್ಲಿ ವಿರಂಚಿ, ಶಕ್ರಾದಿಗಳಿಗೆ ಬ್ರಹ್ಮಸೂತ್ರಗಳ ಮೊದಲನೇ ಉಪದೇಶ. ಇದನ್ನೇ ಅನುವ್ಯಾಖ್ಯಾನದಲ್ಲಿ ಶ್ರೀಭಗವತ್ಪಾದರು –



**ಗುರುರ್ಗುರುಣಾಂ ಪ್ರಭವಃ ಶಾಸ್ತ್ರಾಣಾಂ ಬಾದರಾಯಣಃ ।**
**ಯದಸ್ತುದಿತಂ ಮಾನಮ್ ಅಜಾದಿಭ್ಯಸ್ತದರ್ಥತಃ ॥**

ಹೀಗೆ ಬ್ರಹ್ಮಸೂತ್ರ, ಪುರಾಣಗಳನ್ನು ರಚಿಸಿ, ವಿರಿಂಚಾದಿಗಳಿಗೆ ವಿಜ್ಞಾನ ದಾಯಕರಾದರು ಮತ್ತು ತಂತ್ರಸಾರದಲ್ಲಿ ''**ವಿಧಿಶರ್ವಪೂರ್ವಗೀರ್ವಾಣ ವಿಜ್ಞಾನದ ಮಾನತೋಸ್ಮಿ**'' ಎಂದು ವೇದವ್ಯಾಸರನ್ನು ಸ್ತುತಿಸಿದ್ದಾರೆ.

**ಮೋದಚಿನ್ಮಯಗಾತ್ರ :** ಶುಕ್ಲಶೋಣಿತ ಸಂಬಂಧವಿಲ್ಲದೆ ಕೇವಲ ಜ್ಞಾನಾನಂದ ಸ್ವರೂಪ, ಆನಂದಮಯ ''ವಿಜ್ಞಾನಂ ಬ್ರಹ್ಮಚೇದ್ವೇದ'' ಎಂದು ಶ್ರುತಿ.

**ಲೋಕಪವಿತ್ರ :** ೧) ವೇದಾದಿ ಅನಧಿಕಾರಿಗಳಾದ ಸ್ತ್ರೀಶೂದ್ರ ಬ್ರಹ್ಮಬಂಧುಗಳಿಗೆ, ಭಾರತ, ಭಾಗವತ, ಅಷ್ಟಾದಶ ಪುರಾಣಗಳು ರಚಿಸಿ ಕೇವಲ ಪಠನ, ಶ್ರವಣದಿಂದಲೇ ಲೋಕವನ್ನು ಪವಿತ್ರ ಮಾಡಿಸಿದರು.

೨) ಲೋಕ = ಜಗತ್ತನ್ನು, ಪ = ಪಾಲಿಸುವ ಬ್ರಹ್ಮಾದಿಗಳನ್ನು, ವಿ= ವಿಶೇಷವಾಗಿ, ತ್ರ = ರಕ್ಷಿಸುವರು.

**ಸುಚರಿತ್ರ :** ವೇದವ್ಯಾಸರ ಚರಿತ್ರೆ ಬಹಳ ಅದ್ಭುತ - ೧) ಒಂದು ಕ್ರಿಮಿಯಿಂದ ರಾಜ್ಯವಾಳಿಸಿದರು. ೨) ಸು = ಸಮ್ಯಕ್, ಚರಂ = ಜ್ಞಾನ, ಇ = ಭಗವದಿಚ್ಛೆ ಇವುಗಳುಳ್ಳವರನ್ನು ತ್ರ = ರಕ್ಷಿಸುವರು = ಭಗವದ್ಭಕ್ತರನ್ನು ರಕ್ಷಿಸುವವರು ಎಂದು.

**ಛೇದ, ಭೇದ, ವಿಷಾದ, ಕುಟಿಲಾಂತಾದಿ ಮಧ್ಯವಿದೂರ :** ಜ್ಞಾನಾನಂದ-ಮಯನಾದ ಚಿನ್ಮಯಮೂರ್ತಿಗೆ ಛೇದವುಂಟೆ ? ಉಂಟು ಎಂದು ಕೆಲವರ ಅಭಿಪ್ರಾಯ. ಹೇಗೆಂದರೆ, ಭವಿಷ್ಯೋತ್ತರ ಪುರಾಣದಲ್ಲಿ ಶ್ರೀಶ್ರೀನಿವಾಸದೇವರಿಗೆ ಚೋಳದೇಶದ ಗೋಪಾಲಕನ ಕೊಡಲಿ ಪೆಟ್ಟಿಗೆ ಏಳು ತಾಳೆಯ ಮರದ ಎತ್ತರಕ್ಕೆ ರಕ್ತ ಚಿಮ್ಮಿತು, ಹಾಗೆಯೇ ವೇದವ್ಯಾಸದೇವರು –

**ಸತ್ಯಂ ಸತ್ಯಂ ಪುನಃ ಸತ್ಯಮ್ ಉಧೃತ್ಯ ಭುಜಮುಚ್ಯತೇ ।**
**ವೇದಶಾಸ್ತ್ರಾತ್ ಪರಂ ನಾಸ್ತಿ, ನ ದೈವಾತ್ ಕೇಶವಾತ್ಪರಮ್ ॥**

ಎಂದು ಎರಡು ಭುಜಗಳನ್ನು ಮೇಲಕ್ಕೆತ್ತಿ ಸಾಗುವಾಗ ತೋಳುಗಳು ಕತ್ತರಿಸಿಬಿದ್ದುವು ಎಂದು ಶೈವಶಾಸ್ತ್ರದಲ್ಲಿ ಹೇಳಿದೆ. ಆ ತೋಳನ್ನೇ ಶೈವರು ತಮ್ಮ ನಂದೀಕೋಲಿಗೆ ಕಟ್ಟಿ ಶಿವಸಾರ್ವಸ್ವವನ್ನು ಹೇಳುವರು, ಇದರಿಂದ ಛೇದವನ್ನು ಹೇಳಿದಂತಾಯಿತು ಎಂದರೆ – ನಿರ್ದೋಷ, ಗುಣಪೂರ್ಣನಾದ ಬ್ರಹ್ಮಶಬ್ದವಾಚ್ಯನಾದ ನಾರಾಯಣಾಭಿನ್ನ ವೇದವ್ಯಾಸದೇವರಿಗೆ, ಪ್ರಾಕೃತ ಶರೀರವೇ ಇಲ್ಲದ, ಕೇವಲ ಜ್ಞಾನಾನಂದ ಶರೀರಕ್ಕೆ ಛೇದ ಎಲ್ಲಿಯದು ?

**ಭೇದ :** ಶ್ರೀಹರಿಯ ಅವತಾರಗಳಲ್ಲಿ ಭೇದಚಿಂತನೆ ತಮಸ್ಸಿಗೆ ಕಾರಣ, ಆದರೂ ರಾಮ, ಕೃಷ್ಣ, ವೇದವ್ಯಾಸಾವತಾರಗಳಲ್ಲಿ ಭೇದ ಕಂಡಿದೆ. ಎಂದರೆ, ಶ್ರೀಹರಿಯಲ್ಲಿ 'ಸವಿಶೇಷಾಭೇದ' ಅಂದರೆ ಮೂಲರೂಪಕ್ಕೂ ಅವತಾರರೂಪಗಳಿಗೆ ಅಭೇದವಿದ್ದರೂ ಭೇದಕಾರ್ಯನಿರ್ವಾಹ ಮಾಡುವ ವಿಶೇಷದಿಂದ ಕೂಡಿದ ಭೇದ. ಇದನ್ನು ಕಾಠಕೋಪನಿಷತ್ತಿನಲ್ಲಿ ''ನೇಹನಾನಾಸ್ತಿಕಿಂಚನ'' ಎಂದು ಶ್ರುತಿಯು ದೃಢಪಡಿಸುತ್ತದೆ.

**ವಿಷಾದ :** ವೇದವ್ಯಾಸರಿಗೆ ಶಮಾಪ್ರಾಸದಲ್ಲಿ ಏಕಾಂಗಿಯಾಗಿ ಖಿನ್ನಮನಸ್ಕರಾಗಿ-ದ್ದಾಗ, ನಾರದರು ಕಾರಣ ಕೇಳಿದಾಗ ಅಷ್ಟಾದಶಪುರಾಣ, ಮಹಾಭಾರತ ರಚನೆ ಮಾಡಿದ್ದರೂ, ಯಾಕೋ ಮನಸ್ಸು ಇನ್ನೂ ಪ್ರಸನ್ನತೆಯನ್ನು ಹೊಂದಿಲ್ಲ. ಇದರ ಪರಿಹಾರ ಏನು ಎಂದು ಕೇಳಿದಾಗ, ನಾರದರು **''ಅಖಿಲಬಂಧಮುಕ್ತಯೇ ಉರುಕ್ರಮಸ್ಯ ವಿಚೇಷ್ಟಿತಂ ಸಮಾಧಿನಾ ಅನುಸ್ಮರ''** ''ಸಜ್ಜನರ ಸಂಸಾರಬಂಧನ-ದಿಂದ ಮುಕ್ತಿಗಾಗಿ ಶ್ರೀಹರಿಯ ವಿವಿಧ ರೀತಿಗಳನ್ನು ಸಮಾಧಿ ಭಾಷೆ (ಇದ್ದುದ್ದಿದ್ದಂತೆಯೇ ತಿಳಿಸುವ ಭಾಷೆ)ಯಲ್ಲಿ ಶ್ರೀಮದ್ಭಾಗವತವನ್ನು ರಚನೆ ಮಾಡಿರಿ, ಆಗ ನಿಮಗೆ ತೃಪ್ತಿಯುಂಟಾಗುವುದು'' ಎಂದು ಹೇಳಿದರು. ಇದರಿಂದ ವೇದವ್ಯಾಸರಿಗೆ ವಿಷಾದ ತಿಳಿಸುತ್ತದೆಂದರೆ ಇದಕ್ಕೆ ಸಮಾಧಾನ ಪಾದ್ಮಪುರಾಣದಂತೆ.

**ಜ್ಞಾನಶಕ್ತಿ ಸ್ವರೂಪೋಽಪಿ ಹ್ಯಜ್ಞಾಶಕ್ತಿಂ ವದೇದ್ಧರಿಃ ।**
**ಅಜ್ಞಾನಾಂ ಮೋಹನಾಯೇಶಃ ತೇನ ಮುಹ್ಯಂತಿ ಮೋಹಿತಾಃ ॥**

ವ್ಯಾಸರ ಜ್ಞಾನ, ಸಾಗರದಂತೆ ಅಪಾರ, ಅವರಲ್ಲಿ ಅಜ್ಞಾನವಾಗಲಿ, ಶೋಕ-ಮೋಹಗಳಾಗಲಿ ಇಲ್ಲವೆಂದು, ಕೇವಲ ಅಜ್ಞಜನರ ಮೋಹಕ್ಕೆ ಈ ವ್ಯಾಪಾರಗಳೆಂದು ತಿಳಿಯಬೇಕು.

**ಕುಟಿಲಾಂತಾದಿ ಮಧ್ಯವಿದೂರ :** ಕುಟಿಲ = ಕುತ್ಸಿತವಾದ ಶಾಸ್ತ್ರಗಳ, ಅಂತ = ನಿರ್ಣಯಗಳ, ಆದಿ = ಮೊದಲಾದವುಗಳನ್ನು ಮೋಹಕವಾಗಿ ರಚಿಸಿದ ಶಾಸ್ತ್ರಗಳ ನಿರ್ಣಯಗಳ, ಮಧ್ಯ = ಸ್ಥಿತಿಗಳ, ವಿದೂರರಹಿತನಾಗಿರುವ ಅಂದರೆ ಕುಶಾಸ್ತ್ರಗಳಿಂದ ದೂರರಾದ ವೇದವ್ಯಾಸರು.

**ಆದಾನಾದಿ ಕಾರಣ :** ಚರಾಚರ ಜಗತ್ತನ್ನು ತನ್ನ ಉದರಲ್ಲಿ ಇಟ್ಟುಕೊಳ್ಳುವುದು (ಸ್ವೀಕರಿಸುವುದು), ಜಗತ್ತನ್ನೇ ಪುನಃ ಹೊರಗೆ ಹಾಕುವವ, ಜನ್ಮ (ಆದಿ), ಆದಾನ ಎಂದರೆ ಮತ್ತೊಂದು ಅರ್ಥ ಸ್ಥಾಪನೆ ಮಾಡುವುದು. ಇದಕ್ಕೆ ಆದಿಕಾರಣರು ಶ್ರೀವೇದವ್ಯಾಸರು. ಇದನ್ನೇ ಶ್ರೀಜಗನ್ನಾಥದಾಸರು ಮಹಾಭಾರತ ತಾತ್ಪರ್ಯ ನಿರ್ಣಯಗಳನ್ನನುಸರಿಸಿ ಈ ಪದಪ್ರಯೋಗ ಮಾಡಿದ್ದಾರೆ. ಹೇಗೆಂದರೆ -





೧. ವೇದವ್ಯಾಸರು ಆದಾನ ಮಾಡಿದ್ದು - ಪಾಂಡುರಾಜ ಮೃತನಾದ ಮೇಲೆ, ಪಾಂಡವರನ್ನು ದುರ್ಯೋಧನ ಹಸ್ತಿನಾವತಿಗೆ ಸೇರಿಸಲಿಲ್ಲ. ಪಾಂಡವರು ಪಾಂಡುರಾಜನ ಮಕ್ಕಳಲ್ಲ, ಇತರೆ ದೇವತೆಗಳಿಂದ ಹುಟ್ಟಿದವರು. ಆದ್ದರಿಂದ ರಾಜ್ಯಕ್ಕೆ ಅನರ್ಹರು ಎಂದಾಗ ಅಶರೀರವಾಣಿಯಿಂದಲೂ ಹಾಗೂ ವೇದವ್ಯಾಸರು, ಧೃತರಾಷ್ಟ್ರನನ್ನು ಕರೆಸಿ ಅರ್ಧ ರಾಜ್ಯ ಕೊಡಿಸಿದರು.

೨. ಭೀಮಸೇನದೇವರು ಹಿಡಿಂಬಿಯನ್ನು ಲಗ್ನವಾಗಲು ನಿರಾಕರಿಸಿದಾಗ ವೇದವ್ಯಾಸರ ಆಜ್ಞೆಯಂತೆ ಮದುವೆಯಾಗಿದ್ದು.

೩. ದ್ರೌಪದೀ ಸ್ವಯಂವರದಲ್ಲಿ ದ್ರುಪದ ರಾಜನು ಐವರಿಗೆ ದ್ರೌಪದಿಯನ್ನು ಕೊಡಲು ನಿರಾಕರಿಸಿದಾಗ ದ್ರೌಪದಿದೇವಿಯಲ್ಲಿ ಇರತಕ್ಕ ಶಚೀ, ಶಾಮಲಾ, ಉಷಾ ಹಾಗೂ ಉಮಾದೇವಿಯರ ದರ್ಶನ ಮಾಡಿಸಿದ್ದು.

೪. ಅಂಬಿಕಾ, ಅಂಬಾಲಿಕೆಯಲ್ಲಿ ಸತ್ಯವತೀದೇವಿಯ ಪ್ರಾರ್ಥನೆಯಂತೆ ಧೃತರಾಷ್ಟ್ರ, ಪಾಂಡುರಾಜ ಹಾಗೂ ಭಗವದ್ಭಕ್ತನಾದ ವಿದುರನನ್ನು ಆದಾನ ಮಾಡಿದರು.

೫. ಕುರುಕ್ಷೇತ್ರ ಯುದ್ಧದಲ್ಲಿ ಸಂಜಯನಿಗೆ ಪೂರ್ಣಯುದ್ಧ ಮಾಹಿತಿ ನೀಡಲು ದರ್ಶನ, ಶ್ರಾವ್ಯಗಳನ್ನು ಆದಾನ ಮಾಡಿದರು.

೬. ಗಾಂಧಾರಿಗೆ ಅತಿಪ್ರಬಲ ಪತಿವ್ರತಾಶಕ್ತಿಯನ್ನು ಕಡಿಮೆ ಮಾಡಲು ಮಡಿದ ನೂರು ಜನ ಮಕ್ಕಳನ್ನು ತೋರಿಸಿ, ಕೃಷ್ಣನಿಗೆ ಶಾಪ ಕೊಡುವಂತೆ ಮಾಡಿದರು.

೭. ಗಾಂಧಾರಿಯ ಗರ್ಭದಿಂದ ಕೌರವರ ಪಿಂಡಾಂಡಗಳನ್ನು ತುಪ್ಪದ ಗಡಿಗೆಯಲ್ಲಿ ಬೆಳೆಸಿ ಆದಾನ ಮಾಡಿದರು.

೮. ಪಾಂಡವರ ಹದಿನೈದು ಅಶ್ವಮೇಧಯಾಗಕ್ಕೆ ಹಿಮವತ್ಪರ್ವತದಲ್ಲಿನ ದ್ರವ್ಯವನ್ನು ಆದಾನ ಮಾಡಿ ಅತಿಶಯವಾಗಿ ಯಜ್ಞ ಮಾಡಿಸಿದರು.

೯. ಪಾಂಡವರು ಸರ್ವಸ್ವವನ್ನೂ ಅಶ್ವಮೇಧಯಾಗದಲ್ಲಿ ಶ್ರೀವೇದವ್ಯಾಸರಿಗೆ ಕೃಷ್ಣಾರ್ಪಣೆ ಮಾಡಿದ ಮೇಲೆ, ಪುನಃ ರಾಜ್ಯವನ್ನು ಪಾಂಡವರಿಗೇ ಆದಾನ ಮಾಡಿದರು.

೧೦. ಸ್ವರ್ಗಾರೋಹಣವಾದ ಮೇಲೆ ಧರ್ಮರಾಜನಿಗೆ ಯುದ್ಧದಲ್ಲಿ ಮಡಿದ ತನ್ನವರೆಲ್ಲರನ್ನೂ ತೋರಿಸಿ, ಕುಂತಿಗೆ ಕರ್ಣ ಜನನವಾದಾಗಲೂ, ನಂತರವೂ ಅನಾಥನನ್ನಾಗಿ ಮಾಡಿದ ಪಾಪವನ್ನು ಕಳೆದಿದ್ದರು.

೧೧. ಅಶ್ವತ್ಥಾಮಾಚಾರ್ಯರು ತಂದೆಯಾದ ದ್ರೋಣಾಚಾರ್ಯರು ಮಡಿದ ಮೇಲೆ ಶಸ್ತ್ರ ಸನ್ಯಾಸ ಮಾಡಿದ್ದಾಗ ಭೂಭಾರಹರಣಕ್ಕಾಗಿ ಪುನಃ ಶಸ್ತ್ರಸಂಧಾನ ಮಾಡಿಸಿದರು.

೧೨. ಶ್ರೀಮನ್ಮಹಾಭಾರತ, ಶ್ರೀಮದ್ಭಾಗವತ, ಅಷ್ಟಾದಶಪುರಾಣಗಳು ಹಾಗೂ ಬ್ರಹ್ಮಸೂತ್ರಗಳನ್ನು ಆದಾನ ಮಾಡಿ ಸಜ್ಜನರ ದುಃಖವನ್ನು ನೀಗಿದರು.

ಹೀಗೆ ಇನ್ನೂ ಅನೇಕ ಆದಾನದ ಕಾರಣಗಳನ್ನು ತಿಳಿಸಿ ಶ್ರೀವೇದವ್ಯಾಸದೇವರನ್ನು ಶ್ರೀಹರಿಯ ಅವತಾರವೇ ಹೊರತು, **"ವ್ಯಾಸೋ ಕಶ್ಚನ ಋಷಿಃ" ಎಂಬ ಆಪಾದನೆಯನ್ನು ಖಂಡಿಸಿದ್ದಾರೆ, ಶ್ರೀಜಗನ್ನಾಥದಾಸರು ಈ ಪದ್ಯದಲ್ಲಿ.**

**ಬಾದರಾಯಣ :** ೧) ವೇದವಾದರತಾನಾಂ ವಾದಿನಾಮ್ ಆಶ್ರಯತ್ವಾತ್ ಬಾದರಾಯಣಃ.

೨) ವಾಣೇರತಾನಾಂ ಅಯನಃ ಬಾದರಾಯಣಃ, ವ ಬಯೋರಭೇದಃ ವೇದವಾದಿಗಳಾಗಿ, ಸಚ್ಛಾಸ್ತ್ರಾದಿಗಳಲ್ಲಿ ರತರಾದವರಿಗೆ ಆಶ್ರಯರಾದವರು ಬಾದರಾಯಣರು. ವ ಕಾರಕ್ಕೂ ಬ ಕಾರಕ್ಕೂ ಅಭೇದ.

೩) ಬದರಾಣಾಂ ಸಂಬಂಧಿ ಯತ್ ಬಾದರಂ ತತ್ ಅಯನಂ ಸ್ಥಾನಂ ಯಸ್ಯ ಸಃ ಬಾದರಾಯಣಃ. ಬೋರೇಗಿಡದ ಸಂಬಂಧ ಅಥವಾ ಆಶ್ರಯಿಸಿರುವುದರಿಂದ ಬಾದರಾಯಣರು ವ್ಯಾಸರೂಪಿ ಶ್ರೀಹರಿಯೇ.

**ಸತ್ರಾಣ :** ಸಮಸ್ತ ಜೀವ ಜಡ ಬ್ರಹ್ಮಾಂಡ ಪಿಂಡಾಂಡವಾದ ಜಗತ್ತಿಗೆ 'ತ್ರಾಣ' ಅಂದರೆ ಸತ್ತಾಪ್ರದರಾದ ಶ್ರೀವೇದವ್ಯಾಸರೇ.

**ಪಾಹಿ :** ಸಂರಕ್ಷಿಸಿ ಎಂದು ಪ್ರಾರ್ಥಿಸುತ್ತಾರೆ.

ಹೀಗೆ ಶ್ರೀಜಗನ್ನಾಥದಾಸರು ಶಾಸ್ತ್ರಪ್ರಮೇಯಗಳಿಂದ ರಚಿತವಾದ ಈ 'ಹರಿಕಥಾಮೃತಸಾರ' ಬಿಡಿಸಿದಷ್ಟೂ ಅರ್ಥಗರ್ಭಿತವಾಗಿರುವುದರಿಂದ ಇಷ್ಟಕ್ಕೇ ಉಪಸಂಹಾರ ಮಾಡುತ್ತೇನೆ.

❑❑

**ಭಕ್ತರು ದಯವಿಟ್ಟು ಡಿ.ಡಿ. ಹಾಗೂ ಎಂ.ಓ. ಮುಖಾಂತರ ಮಂತ್ರಾಲಯ, ಬೆಂಗಳೂರು ಕಾರ್ಯಾಲಯಕ್ಕೆ ಹಣ ಕಳುಹಿಸಬೇಕು. ಚೆಕ್ಕನ್ನು ಸ್ವೀಕರಿಸಲಾಗುವುದಿಲ್ಲ.**





**ಲೇಖನಾಂಕ**

# ತಾತ್ಪರ್ಯನಿರ್ಣಯದ ವೈಶಿಷ್ಟ್ಯ

■ **ವಿದ್ವಾನ್ ಕಡಪ. ರಾಘವೇಂದ್ರಾಚಾರ್ಯ**
ಪ್ರಾಂಶುಪಾಲರು, ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ

**ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಮ್ಮಿತಮ್ ।**
**ಅಧೀತವಾನ್ ದ್ವಾಪರಾದೌ ಪಿತುರ್ದ್ವೈಪಾಯನಾದಹಮ್ ॥**

– ಭಾಗವತ ೨–೧–೮

ವೇದವ್ಯಾಖ್ಯಾನರೂಪವಾದ್ದರಿಂದ ವೇದಕ್ಕೆ ಸಮಾನವಾದ ಈ ಭಾಗವತ ಪುರಾಣವನ್ನು ದ್ವಾಪರದ ಆದಿಯಲ್ಲಿ ತಂದೆಯಾದ ವೇದವ್ಯಾಸರಿಂದ ನಾನು ಅಧ್ಯಯನ ಮಾಡಿದ್ದೇನೆಂದು ಶುಕಾಚಾರ್ಯರು ಹೇಳುವ ಮಾತಿದು. ದ್ವಾಪರಾದೌ ಎಂಬ ಪದಕ್ಕೆ ಈರೀತಿ ಅರ್ಥ ಹೇಳಿದರೆ ತಪ್ಪಾಗುತ್ತದೆ. ಏಕೆಂದರೆ ದ್ವಾಪರದ ಆದಿಯಲ್ಲಿ ವೇದವ್ಯಾಸರ ಅವತಾರವೇ ಆಗಿಲ್ಲ. ದ್ವಾಪರಯುಗದ ೮ ಲಕ್ಷದ ೬೩ ಸಾವಿರವರ್ಷ ಕಳೆದ ಮೇಲೆ ಕೊನೆಯ ಸಾವಿರ ವರ್ಷದಲ್ಲಿ ಅವರ ಅವತಾರವಾಗಿದೆ.ಆದಕಾರಣ 'ದ್ವಾಪರಾದೌ' ಎಂಬ ಪದಕ್ಕೆ 'ಕೃಷ್ಣಾವತಾರಕ್ಕಿಂತ ಪೂರ್ವದಲ್ಲಿ, ದ್ವಾಪರದಲ್ಲಿ' ಎಂದು ಅರ್ಥ ಮಾಡಬೇಕೇ ಹೊರತು 'ದ್ವಾಪರಯುಗದ ಆದಿಯಲ್ಲಿ' ಎಂದು ಅರ್ಥ ಹೇಳಬಾರದು.

**ಇದಕ್ಕೆ ಪ್ರಮಾಣ :–** ಆರುನೂರು ವರ್ಷದ ವೇದವ್ಯಾಸದೇವರು ಧೃತರಾಷ್ಟ್ರ–ನನ್ನು ಪಡೆದರು ಎಂದು ಮಹಾಭಾರತದಲ್ಲಿರುವುದರಿಂದ ಭಾರತದ ಕಥೆಯು ದ್ವಾಪರಾಂತ್ಯದಲ್ಲಿ ನಡೆದಿರುವುದರಿಂದ ಅವರ ಅವತಾರ ದ್ವಾಪರದ ಕೊನೆಯಲ್ಲೇ ಆಗಿದೆ ಎಂದು ನಿರ್ಣಯಿಸಬಹುದು.

**ಇದಕ್ಕೆ ಮೂಲ :–** ಬ್ರಹ್ಮಸಮ್ಮಿತಂ = ವೇದಸಮಮ್ (ತದರ್ಥವ್ಯಾಖ್ಯಾನ–ರೂಪತ್ವಾತ್) ದ್ವಾಪರಾದೌ = ಕೃಷ್ಣಾವತಾರಾಪೇಕ್ಷಯಾ ದ್ವಾಪರೇ ಆದೌ ಚ ನ ತು ದ್ವಾಪರಸ್ಯಾದಾವಿತಿ । ವ್ಯಾಸಃ ಷಟ್‌ಶತವರ್ಷೀಯಃ ಧೃತರಾಷ್ಟ್ರಮಜೀಜನತ್ ಇತಿ ವಚನಾತ್ ದ್ವಾಪರಾಂತೇ ಭಾರತಕಥಾಪ್ರವೃತ್ತಿಕಥನಾಚ್ಚ ।

ಮತ್ತೊಂದು ದೃಷ್ಟಾಂತ :–

**ತದ್ವೈ ಧನುಸ್ತ ಇಷವೋ ಸ ರಥೋ ಹಯಾಸ್ತೇ**
**ಸೋಽಹಂ ರಥೀ ನೃಪತಯೋ ಯತ ಆನಮಂತಿ ।**

**ಸರ್ವಂ ಕ್ಷಣೇನ ತದಭೂದಸದೀಶರಿಕ್ತಂ**
**ಭಸ್ಮನ್ ಹುತಂ ಕುಹಕರಾದ್ಧಮಿವೋಪ್ತಮೂಷೇ ॥**

– ಭಾಗವತ ೧–೧೪–೨೧

ಅರ್ಜುನನು ಧರ್ಮರಾಜನ ಮುಂದೆ ಹೇಳುವ ಶ್ಲೋಕವಿದು. ಈ ಶ್ಲೋಕಕ್ಕೆ ಹಿನ್ನಲೆ ಈ ರೀತಿಯಾಗಿದೆ. ಶ್ರೀಕೃಷ್ಣ ಪರಂಧಾಮಕ್ಕೆ ಹೋಗುವ ಮುನ್ನ ಅರ್ಜುನನಿಗೆ 'ಬಾ' ಎಂದು ಹೇಳಿಕಳಿಸಿದ. ಅರ್ಜುನ ದ್ವಾರಕಾಕ್ಕೆ ಹೋದ. ಕೆಲವು ದಿನಗಳ ನಂತರ ಶ್ರೀಕೃಷ್ಣ ಪರಂಧಾಮಕ್ಕೆ ಹೋದ. ನಂತರ ಅಲ್ಲಿರುವ ಯಾದವರೆಲ್ಲರೂ ಪರಸ್ಪರ ಬಡಿದಾಡಿಕೊಂಡು ಪುರುಷರೆಲ್ಲರೂ ಸಾಯಲು, ಸ್ತ್ರೀಯರನ್ನು ಕರೆದುಕೊಂಡು ಅರ್ಜುನನು ಹಿಂತಿರುಗಲು ದಾರಿಯಲ್ಲಿ ಕಳ್ಳರು, ಡಕಾಯಿತರು ಬಂದು ಅರ್ಜುನನ ಜೊತೆ ಹೋರಾಡಿ ಅರ್ಜುನನ್ನು ಸೋಲಿಸಿ ಸ್ತ್ರೀಯರನ್ನು, ಅವನಲ್ಲಿರುವ ಸಂಪತ್ತನ್ನು ದೋಚಿಕೊಂಡು ಹೋದರು. ನಂತರ ಬಂದು ಹೇಳುವ ಶ್ಲೋಕವಿದು.

ಅದೇ ಬಿಲ್ಲು, ಅದೇ ಬಾಣ, ಅದೇ ರಥ, ಅವೇ ಕುದುರೆ, ಅದೇ ಅರ್ಜುನ ಅಂದರೆ ಮಹಾಭಾರತದ ಯುದ್ಧದಲ್ಲಿ ಯಾವನು ಮಹಾರಥಿಕನಾಗಿದ್ದನೋ, ಎಲ್ಲ ರಾಜರು ಯಾವ ಅರ್ಜುನನಿಗೆ ತಲೆ ಬಾಗುತ್ತಿದ್ದರೋ ಅಂತಹ ಅರ್ಜುನ ಇಂದು ಸೋತು ಹೋದ. ಏಕೆಂದರೆ, ಅಂದು ಮಹಾಭಾರತಯುದ್ಧದಲ್ಲಿ ಶ್ರೀಕೃಷ್ಣ ಸಾರಥಿಯಾಗಿದ್ದ. ಆದಕಾರಣ ನನ್ನ ಆಟವೆಲ್ಲ ನಡೆಯಿತು. ಇಂದು ಶ್ರೀಕೃಷ್ಣ ಪರಂಧಾಮಕ್ಕೆ ಹೋಗಿರೋಣದರಿಂದ ನನ್ನ ಪೌರುಷವೆಲ್ಲ ವ್ಯರ್ಥವಾಯಿತು. ಅದು ಹೇಗೆಂದರೆ, ಬೂದಿಯಲ್ಲಿ ಹೋಮ ಮಾಡಿದರೆ, ಮರುಭೂಮಿಯಲ್ಲಿ ಬೀಜ ಬಿತ್ತಿದರೆ, ಐಂದ್ರಜಾಲಿಕನು ಪದಾರ್ಥಗಳನ್ನು ಸೃಷ್ಟಿಸಿದರೆ, ಈ ಮೂರೂ ಹೇಗೆ ವ್ಯರ್ಥವಾದವುಗಳೋ ಹಾಗೆ. ಶ್ರೀಮದ್ಭಾಗವತವನ್ನು ಓದುವಾಗ ಯಾವ ಸಂದೇಹವೂ ಈ ಸಂದರ್ಭದಲ್ಲಿ ಬರುವುದಿಲ್ಲ. ಆದರೆ ಮಹಾಭಾರತ ನೋಡಿದಾಗ ಪರಸ್ಪರ ವಿರುದ್ಧವಿರುವಂತೆ ಕಂಡುಬರುತ್ತದೆ. ಮಹಾಭಾರತದಲ್ಲಿ ಬಂದ ಸಂದರ್ಭ – ಯುದ್ಧದ ಕೊನೆಯಲ್ಲಿ ಅಶ್ವತ್ಥಾಮಾಚಾರ್ಯರು ಅರ್ಜುನನ ಮೇಲೆ ನಾರಾಯಣಾಸ್ತ್ರವನ್ನು ಪ್ರಯೊಗ ಮಾಡಿದರು. ಶ್ರೀಕೃಷ್ಣ ರಥದಲ್ಲಿ ಸಾರಥಿಯಾಗಿ ಕುಳಿತಿರುವುದರಿಂದ ಅದರ ಪ್ರಭಾವ ಏನೂ ಬೀರಲಿಲ್ಲ. ಅಸ್ತ್ರಗಳಿಂದ ರಕ್ಷಣೆಯಾಯಿತು.ರಥದಿಂದ ಕೆಳಗಿಳಿಯುವ ಸಂದರ್ಭ – ಪ್ರತಿನಿತ್ಯ ಯುದ್ಧವಾದ ಮೇಲೆ ಶ್ರೀಕೃಷ್ಣನೇ ಮೊದಲು ರಥದಿಂದಿಳಿಯುತ್ತಿರುತ್ತಾನೆ. ಆದರೆ ಕೊನೆಯ ದಿವಸ ಯುದ್ಧವಾದ ಮೇಲೆ ಅರ್ಜುನನ್ನು ಇಳಿಯಲು ಹೇಳುತ್ತಾನೆ. "ನೀನು ಇಳಿ, ನೀನು ಇಳಿ" ಎಂದು ಇಬ್ಬರ ನಡುವೆ ಪರಸ್ಪರ ವಾದವಾಗುತ್ತದೆ. ನಂತರ ಅರ್ಜುನನ್ನು ಇಳಿಸಿ ತಾನು ಇಳಿಯುತ್ತಾನೆ. ಶ್ರೀಕೃಷ್ಣ ಇಳಿದ ಕೂಡಲೆ ರಥ ಮತ್ತು ಕುದುರೆಗಳು ಭಸ್ಮವಾದವೆಂದು ಮಹಾಭಾರತದಲ್ಲಿ ಶ್ರೀವೇದವ್ಯಾಸರು ಬರೆದಿರುತ್ತಾರೆ.





ಇಲ್ಲಿ ಶ್ರೀಮದ್ಭಾಗವತಕ್ಕೆ ಮತ್ತು ಮಹಾಭಾರತಕ್ಕೆ ಪರಸ್ಪರ ವಿರೋಧವಿದ್ದಂತೆ ಕಂಡು ಬರುತ್ತದೆ. ಶ್ರೀಮದಾನಂದತೀರ್ಥರು ಸುಲಭವಾಗಿ ಆ ವಿರೋಧವನ್ನು ಪರಿಹರಿಸಿದ್ದಾರೆ. **ಸ ರಥೋ ಹಯಾಸ್ತೇ ಇತಿ ತಾದೃಶಾ ಇತ್ಯರ್ಥಃ** ಎಂದು. ಅದೇ ರಥ ಅವೇ ಕುದುರೆಗಳು ಎಂದರೆ ಅಂಥಾದ್ದೇ ಎಂದು ಹೇಳಿ ವಿರೋಧ ಪರಿಹರಿಸಿದ್ದಾರೆ. ಅಂಥಾದ್ದೇ ವಸ್ತುವಿಗೆ ಅದೇ ಎಂದು ಹೇಳುವ ರೂಢಿ ಲೋಕ–ದಲ್ಲಿರೋಣದರಿಂದ.

ಈ ರೀತಿಯಾಗಿ ಶ್ರೀಮದಾಚಾರ್ಯರು ತಾತ್ಪರ್ಯನಿರ್ಣಯಗಳನ್ನು ಬರೆಯದೇ ಹೋಗಿದ್ದರೆ ನಿಜವಾದ ಅರ್ಥ ಜನರಿಗೆ ಸುಲಭವಾಗಿ ಅರ್ಥವಾಗುತ್ತಿರಲಿಲ್ಲ. ಸರ್ವಮೂಲಗ್ರಂಥಗಳನ್ನು ರಚಿಸಿ ಸಜ್ಜನಸಮೂಹಕ್ಕೆ ಮಹದುಪಕಾರ ಮಾಡಿದ **ಸರ್ವಜ್ಞರನ್ನು** ಎಷ್ಟು ನೆನೆದರೂ ಸಾಲದು.

**"ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮಜನ್ಮನಿ".**

❑❑

## ಶ್ರೀನವರತ್ನ ಸುದರ್ಶನಾಚಾರ್ಯರಿಂದ ಪ್ರಾಯೋಜಿತವಾದ ಮಾನವೀಯ ಕಳಕಳಿಯ ನೂತನ ಯೋಜನೆ

**"ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ"**

ಎಂಬ ಗೀತಾಚಾರ್ಯನ ವಾಕ್ಯದಂತೆ ಈ ಮಾನವ ಶರೀರವು ಅನಿತ್ಯ. ಈ ಚರಾಚರ ಜಗತ್ತಿನಲ್ಲಿ ಹುಟ್ಟು-ಸಾವುಗಳು ಸತ್ಯ. ಈ ಕಾರಣದಿಂದಾಗಿ ಈ ಶರೀರವನ್ನು ಹೊಂದಿದ ಜೀವಿಗೆ ಈ ಜಗತ್ತಿನಲ್ಲಿ ಇರುವ ತನಕ ಶುಭಕರ್ಮಗಳೂ, ಮೃತಿ ಹೊಂದಿದ ನಂತರ ಅಪರಕರ್ಮಗಳು ಶಾಸ್ತ್ರೋಕ್ತವಾಗಿ ನಡೆಯಬೇಕೆಂದು ಸೃಷ್ಟಿ ನಿಯಮ.

ನಮ್ಮ ಸಮಾಜದಲ್ಲಿ ಬಹಳ ಜನರು ಇತರರಿಗೆ ಇರುವಂತೆ ಬಂಧು-ಬಾಂಧವರನ್ನು ಹೊಂದಿರುವುದಿಲ್ಲ. ವಯಸ್ಸಾದ ನಂತರದಲ್ಲಿ ಆ ವ್ಯಕ್ತಿಯ ಮನಸ್ಸಿನಲ್ಲಿ "ನಾನು ಮೃತಿ ಹೊಂದಿದ ಮೇಲೆ ನನ್ನ ಅಪರಕರ್ಮಗಳನ್ನು ಮಾಡುವವರು ಯಾರೂ ಇಲ್ಲ" ಎಂಬ ಚಿಂತೆಯು ಬಹಳವಾಗಿ ಕಾಡುತ್ತಿರುತ್ತದೆ. ಈ ರೀತಿಯಾಗಿ ಏಕಾಂಗಿಗಳಾದ ಜೀವಿಗಳಿಗೆ ಅವರ ಚಿಂತೆಯನ್ನು ದೂರಮಾಡಿ, ಅವರ ನಿಧನದ ನಂತರದಲ್ಲಿ ಶಾಸ್ತ್ರೋಕ್ತವಾಗಿ ಅವರ ಅಪರಕರ್ಮಗಳನ್ನು ಮಾಡುವ ಒಂದು ಅತ್ಯಂತ ಪವಿತ್ರವಾದ ಮಾನವೀಯ ಅನುಕಂಪದ ಯೋಜನೆಯನ್ನು ಅಪರಕರ್ಮ ಧುರೀಣರಾದ ಶ್ರೀನವರತ್ನ ಸುದರ್ಶನಾಚಾರ್ಯರು ರೂಪಿಸಿರುತ್ತಾರೆ. ಈ ಯೋಜನೆಯ ಅನ್ವಯ ಬಂಧು-ಬಾಂಧವರಿಲ್ಲದ ಏಕಾಂಗಿ ವ್ಯಕ್ತಿಗಳು ಈ ಯೋಜನೆಯಲ್ಲಿ ತಮ್ಮ ಹೆಸರು - ವಿಳಾಸಗಳನ್ನು ನೋಂದಾಯಿಸಿ ನಿಶ್ಚಿಂತರಾಗಿ ತಮ್ಮ ಸ್ವಸ್ವಯೋಗ್ಯ ಕರ್ಮನಿರತರಾಗಿ ಸಾಧನೆ ಮಾಡಿಕೊಳ್ಳಬಹುದು. ಈ ಒಂದು ಸಾಮಾಜಿಕ ಕಳಕಳಿಯ ಯೋಜನೆಗೆ ಆಸಕ್ತಿಯುಳ್ಳ ಉದಾರ ಹೃದಯಿಗಳು ದೇಣಿಗೆಯನ್ನು ನೀಡಲು ಅವಕಾಶವಿರುತ್ತದೆ. ಈ ಯೋಜನೆಯ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ

**ಶ್ರೀನವರತ್ನ ಸುದರ್ಶನಾಚಾರ್ಯ**
ಶ್ರೀಪವಮಾನ ಮಂದಿರ ಧಾರ್ಮಿಕ ಕೇಂದ್ರ, ಶ್ರೀಗುರು ರಾಘವೇಂದ್ರ ಸೇವಾ ಸಮಿತಿ (ರಿ.)
ತ್ಯಾಗರಾಜನಗರ, ಬೆಂಗಳೂರು - 560 028
ದೂರವಾಣಿ ಸಂಖ್ಯೆ : 080-26766711, 26768662, 55391173, ಮೊಬೈಲ್ ಸಂಖ್ಯೆ : 98801-10281

ಲೇಖನಾಂಕ

# ಸಮರ್ಪಣೆ

■ ವಿದ್ವಾನ್. ರಾಮಚಂದ್ರಾಚಾರ್ಯ ಪುರೋಹಿತ್
ಸಂಸ್ಕೃತ ಪ್ರಾಧ್ಯಾಪಕರು, ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ (ದ.ಕ.) - ೫೭೪ ೨೪೦

**ಯಸ್ಮಿನ್ ಸರ್ವಾಣಿ ಕರ್ಮಾಣಿ ಸನ್ಯಸ್ಯಾಧ್ಯಾತ್ಮಚೇತಸಾ ।**
**ನಿರಾಶೀರ್ನಿರ್ಮಮೋ ಯಾತಿ ಪರಂ ಜಯತಿ ಸೋಽಚ್ಯುತಃ ॥**

ಎಂದು ಆಚಾರ್ಯ ಶ್ರೀಮದ್ವರು ಸದಾಚಾರಸ್ಮೃತಿಯಲ್ಲಿ ಅಪ್ಪಣೆ ಕೊಡಿಸಿದಂತೆ, ಸಜ್ಜನ ಸಮುದಾಯವು ತನ್ನ ಶರೀರದಲ್ಲಿ ನಿಯಾಮಕನಾಗಿರುವ ಸರ್ವೋತ್ತಮನಾದ ಶ್ರೀಹರಿಯಲ್ಲಿ ಮನವನ್ನು ನೆಲೆಗೊಳಿಸಿ ಅಹಂಕಾರ - ಮಮಕಾರಗಳನ್ನು ಮತ್ತು ನಿಷಿದ್ಧಕಾಮನೆಗಳನ್ನು ತೊರೆದು ಸಕಲವಿಧ ಕರ್ಮಗಳನ್ನು ಶ್ರೀಹರಿಯ ಪೂಜಾರೂಪವಾಗಿ ನಡೆಸಿ, ಅರ್ಪಿಸಿ, ಶುದ್ಧವಾದ ಜ್ಞಾನದ ಮೂಲಕ ಪರಮಾತ್ಮನನ್ನು ಪಡೆಯಬೇಕು. ''ಯದೇವ ವಿದ್ಯಯಾ ಕರೋತಿ ಶ್ರದ್ಧಯಾ ಉಪನಿಷದಾ ತದೇವ ವೀರ್ಯವತ್ತರಂ ಭವತಿ'' ಎಂಬ ವಚನದಂತೆ ಯಾವುದೇ ಕರ್ಮವನ್ನು ಮಾಡುವಾಗ ಶ್ರದ್ಧೆ ಹಾಗೂ ಮಾಡಿಸುವ ಭಗವದ್ರೂಪಗಳ ಅನುಸಂಧಾನವು ಕರ್ಮದ ಪೂರ್ಣತೆಗೆ ಕಾರಣವಾಗುತ್ತದೆ.

ಜೀವರಿಗೆ ಪುಣ್ಯ-ಪಾಪಾತ್ಮಕವಾದ ಕರ್ಮ ಅನಾದಿಕಾಲದಿಂದ ಇರುವಂಥದ್ದು. ಪ್ರತಿ ಸೃಷ್ಟಿಯ ಆರಂಭದಲ್ಲಿ ಅನಿರುದ್ಧರೂಪಿಯಾದ ಪರಮಾತ್ಮನು ತನ್ನ ಸಾಮರ್ಥ್ಯದಿಂದ ಸ್ತ್ರೀನಿರಪೇಕ್ಷವಾದ ಶುದ್ಧವಾದ ಪ್ರಕೃತ್ಯಂಶದಿಂದ ನಿರ್ಮಿತವಾದ ಸೂಕ್ಷ್ಮವಾದ ದೇಹವನ್ನು ತನ್ನ ದೇಹದೊಳಗಿರುವ ಜೀವರಾಶಿಗಳಿಗೆ ಕರುಣಿಸುವನೆಂದು **"ಅನಂತಾನಂತ ಜೀವಾನಾಂ ಸ್ವಶಕ್ತ್ಯೈವ ಸ್ತ್ರೀನಿರಪೇಕ್ಷಾಂ ಶುದ್ಧ ಪ್ರಕೃತ್ಯಂಶ ನಿರ್ಮಿತ ಲಿಂಗದೇಹಮಾತ್ರವರಕಸೂಕ್ಷ್ಮದೇಹರೂಪಾಂ ಸೃಷ್ಟಿಂ ಸ್ವದೇಹಾಂತರೇವ ಕರೋತಿ"** ಇತ್ಯಾದಿ **'ಮಹಾಭಾರತತಾತ್ಪರ್ಯನಿರ್ಣಯಭಾವಪ್ರಕಾಶಿಕಾ'** ಮೊದಲಾದ ಕೃತಿಗಳ ಮಾತಿನಿಂದ ತಿಳಿದುಬರುತ್ತದೆ. ಹೀಗೆ ದೇಹವನ್ನು ಪಡೆದ ಜೀವಿಗಳು ಪರಮಾತ್ಮನಿಂದ ಕೊಡಲ್ಪಟ್ಟ ವಾಯ್ವಾಹಾರದಿಂದ ತೃಪ್ತರಾಗಿ ಯೋಗ್ಯತೆಗೆ ಅನುಗುಣವಾಗಿ ಕರ್ಮವನ್ನು ಪ್ರತಿ ಬ್ರಹ್ಮಕಲ್ಪದಲ್ಲಿಯೂ ಮನಸ್ಸಿನಿಂದ ಮಾಡುತ್ತಲೇ ಇರುವರು. ಹೀಗೆ ಜೀವರು ಸದಾ ಕಾಲ ಕ್ರಿಯಾಶೀಲರಾಗಿಯೇ ಇರುತ್ತಾರೆ. ಜ್ಞಾನೇಚ್ಛಾಪ್ರಯತ್ನವಿಲ್ಲದ ಜೀವನನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದ ಹಿನ್ನೆಲೆಯಲ್ಲಿ ಜೀವನಲ್ಲಿ ಎಲ್ಲ ಕಾಲದಲ್ಲಿಯೂ





ಕ್ರಿಯೆಯನ್ನು ಒಪ್ಪುವುದು ಅನಿವಾರ್ಯವಾಗಿದೆ. ಯಾವ ಕಲ್ಪದಲ್ಲಿ ಜೀವನಿಗೆ ಸ್ಥೂಲ ಶರೀರವನ್ನು ಪಡೆಯುವ ಯೋಗ್ಯತೆಯು ಬರುವುದೋ ಅವನು ಆಯಾ ಬ್ರಹ್ಮಕಲ್ಪದಲ್ಲಿ ಸ್ಥೂಲ ಶರೀರವನ್ನು ಪಡೆದುಕೊಳ್ಳುತ್ತಾನೆ. ಹೀಗೆ ಕರ್ಮವು ಅನಾದಿಯಾಗಿರುವುದು.

ಎಲ್ಲ ಕರ್ಮಗಳನ್ನು ನಡೆಸುವಾಗಲೂ ಹರಿಯು ಸ್ವತಂತ್ರನಾಗಿದ್ದಾನೆ. ಅವನೇ ಪ್ರಧಾನಕರ್ತೃವೂ ಆಗಿದ್ದಾನೆಂಬ ಎಚ್ಚರ ಅತ್ಯಂತ ಆವಶ್ಯಕವಾಗಿದೆ.

**"ಶ್ರುತಿಸ್ಮೃತ್ಯರ್ಥವ ತಿಳಿದಹಂ ।**
**ಮತಿವಿಶಿಷ್ಟನು ಕರ್ಮಮಾಡಲು ।**
**ಪ್ರತಿಗ್ರಹಿಸು ಪಾಪಗಳ ಕೊಡುತಿಪ್ಪ ನಿತ್ಯ ಹರಿ ॥**

**ಪುಸ್ತಕಗಳವಲೋಕಿಸುತ ಮಂ ।**
**ತ್ರಸ್ತುತಿಗಳೆನಲೇನ ರವಿಯುದ- ।**
**ಯಸ್ತಮನ ಪರಿಯಂತ ಜಪ ತಪ ಮಾಡಿ ಫಲವೇನು ॥**

**ಹೃತ್‌ಸ್ಥ ಪರಮಾತ್ಮನೇ ಸಮಸ್ತಾ- ।**
**ವಸ್ಥೆಗಳೊಳಗಿದ್ದೆಲ್ಲರೊಳಗೆ ನಿ- ।**
**ರಸ್ತಕಾಮನು ಮಾಡಿ ಮಾಡಿಪನೆಂದು ತಿಳಿಯದವ ॥"**

ಶ್ರೀಹರಿಕಥಾಮೃತಸಾರದ ಮಾತಿನಂತೆ ಜೀವನ ಎಲ್ಲ ವ್ಯಾಪಾರಗಳಲ್ಲೂ, ಆಚರಣೆಗಳಲ್ಲೂ ಶ್ರೀಹರಿಯೇ ಸ್ವತಂತ್ರ, ಪ್ರೇರಕ, ಅಂತರ್ಯಾಮಿ ಎಂಬ ಅನುಸಂಧಾನವಿರಬೇಕು.

ಅಹಂಕಾರ - ಮಮಕಾರಗಳಿಂದ ಮೆರೆಯುತ್ತ ಮಾಡುವ ಕರ್ಮ ಬರಿದೆ ಆಯಾಸವೆಂದು ಶ್ರೀಜಗನ್ನಾಥದಾಸರು ಶ್ರೀಹರಿಕಥಾಮೃತಸಾರದಲ್ಲಿ -

**"ಕೆಸರಘಟಗಳ ಮಾಡಿ ಬೇಸಿಗೆ ।**
**ಬಿಸಿಲೊಳಗಿಟ್ಟೊಣಗಿಸಿದರದು ಘನ-**
**ರಸವ ತುಂಬಲುಬಹುದೆ ಸರ್ವಸ್ವತಂತ್ರ ತಾನೆಂಬ ॥"**

**ಪಶುಪನರನೇನೇನು ಮಾಳ್ಪಾ ।**
**ನಶನದಾನ ಸ್ನಾನಕರ್ಮಗಳೊಸರಿ ।**
**ಪೋಪುವು ಬರಿದೆ ದೇಹಾಯಾಸವನೆ ಕೊಟ್ಟು ॥"**

(ದತ್ತಸ್ವಾತಂತ್ರ್ಯಸಂಧಿ - ೧೬-೧೬)

ಮಾರ್ಮಿಕವಾಗಿ ಎಚ್ಚರಿಸಿದ್ದಾರೆ.

ನಾವು ಮಾಡುವ ಕರ್ಮಗಳನ್ನು ಮೂರು ಬಗೆಯಾಗಿ ವಿಂಗಡಣೆ ಮಾಡಲಾಗಿದೆ. ನಿತ್ಯನೈಮಿತ್ತಿಕ ಹಾಗೂ ಕಾಮ್ಯ ಎಂಬುದಾಗಿ. ಪ್ರತಿನಿತ್ಯ ಮಾಡುವ ಸ್ನಾನ, ಸಂಧ್ಯಾವಂದನೆ, ದೇವತಾರ್ಚನೆ, ಬ್ರಹ್ಮಯಜ್ಞ ಮತ್ತು ಅಗ್ನ್ಯಾರಾಧನೆ ಮೊದಲಾದವು ನಿತ್ಯಕರ್ಮಗಳು. ನೈಮಿತ್ತಿಕ ಕರ್ಮಗಳೆಂದರೆ ಗ್ರಹಣ, ಪರ್ವದಿನಗಳಲ್ಲಿ ನಡೆಸುವ ಜಪ, ತಪ, ದಾನಾದಿಗಳು. ಕಾಮ್ಯಕರ್ಮಗಳೆಂದರೆ ಯಾವುದೋ ಸದಿಚ್ಛೆಯಿಂದ ಉತ್ಕೃಷ್ಟವಾದುದನ್ನು ಬಯಸಿ ಅದಕ್ಕೋಸ್ಕರ ನಡೆಸುವ ವೈದಿಕ ಕಾರ್ಯಗಳು. ಈ ಮೂರು ಕರ್ಮಗಳನ್ನು ಶ್ರೀರಾಘವೇಂದ್ರ ಗುರುಸಾರ್ವಭೌಮರು ಹೇಗೆ ಆಚರಿಸಬೇಕೆಂದು ಪ್ರಾತಃಸಂಕಲ್ಪಗದ್ಯದಲ್ಲಿ ನಿರೂಪಿಸಿದ್ದಾರೆ.

ನಾವು ಕರ್ಮಾಚರಣೆಯಲ್ಲಿ ಸ್ವತಂತ್ರರಲ್ಲ. ಅನಾದಿ ಯೋಗ್ಯತೆ, ಪ್ರಾರಬ್ಧ ಕರ್ಮಗಳಿಗೆ ಅನುಗುಣವಾಗಿ ನಮ್ಮ ದೇಹದಲ್ಲಿರುವ ತತ್ತ್ವಾಭಿಮಾನಿದೇವತೆಗಳು, ಅವರಲ್ಲಿಯೂ ನಿಯಾಮಕರಾಗಿ ಪ್ರಾಣದೇವರು ನಿಂತು ನಮ್ಮಿಂದ ಎಲ್ಲ ಶುಭಾಶುಭ ಕರ್ಮಗಳನ್ನು ಮಾಡಿಸುವರು. ಅವರನ್ನು ಉಪನಿಷತ್ತು ಅಖಣಾಶ್ಮ, ಬ್ರಹ್ಮಧಾಮ ಎಂಬುದಾಗಿ ಬಣ್ಣಿಸಿ, ಅಜ್ಞಾನವಿದೂರರಾದ ಅವರ ಮೂಲಕ ಅರ್ಪಿತವಾದ ಕರ್ಮವು ಶ್ರೀಹರಿಗೆ ಪ್ರೀತಿಕರವಾದುದು. ''ತಸ್ಮಿನ್ನಪೋ ಮಾತರಿಶ್ವಾ ದದಾತಿ'' ಎಂಬ ಮಾತಿನಂತೆ ಪ್ರತಿಯೊಬ್ಬ ಜೀವರು, ಮಾಡುವ ಕರ್ಮಗಳನ್ನು ಭಗವಂತನಿಗೆ ಅರ್ಪಿಸುವವರು. ವಾಯುದೇವರು ಸಕಲವೇದಪ್ರತಿಪಾದ್ಯರು, ಅನಂತಗುಣೋಪಾಸನೆಯನ್ನು ಮಾಡುವವರು, ಸರ್ವಜ್ಞಶಿಖಾಮಣಿಗಳು, ಭಕ್ತವತ್ಸಲರು, ಭಕ್ತಾಪರಾಧಸಹಿಷ್ಣುಗಳು. ಇಂತಹ ವಾಯುದೇವರ ಹೃದಯಕಮಲವಾಸಿಯಾದ ನಮ್ಮ ಬಿಂಬಮೂರ್ತಿಯ ಪೂಜಾರೂಪವಾಗಿ ನಾವು ಕರ್ಮಗಳನ್ನು ಆಚರಿಸಬೇಕೆಂದು ''ತತ್ಪ್ರೇರಿತೇನ, ಮುಖ್ಯಪ್ರಾಣೇನ ತತ್ತ್ವಾಭಿಮಾನಿ-ದೇವತಾದ್ವಾರಾ ಅನುಕಾರಿತಾವಸ್ಥಾತ್ರಯನಿಯಾಮಕಾನುಭವಕಾಲಘಟಿತ ಶ್ರೀವಿಷ್ಣು-ಸ್ವಾತಂತ್ರ್ಯಸ್ಮೃತಿಪ್ರಧಾನಕ ನಿತ್ಯನೈಮಿತ್ತಿಕಕಾಮ್ಯಭೇದೇನ ತ್ರಿವಿಧ ವಿದ್ಯಾಶ್ರಿತ ಸ್ವವರ್ಣಾ-ಶ್ರಮೋಚಿತ ಸಂಕಲ್ಪಿತ ಭಗವತ್ಪೂಜಾತ್ಮಕಶುಭಕರ್ಮಜನ್ಯಫಲೇನ ಅಪರೋಕ್ಷಜ್ಞಾನಾತ್ ಪೂರ್ವಂ ಅಂತಃಕರಣಶುದ್ಧಿದ್ವಾರಾ'' ಎಂದು ಶ್ರೀರಾಯರು ಸರ್ವಸಮರ್ಪಣ ಗದ್ಯದಲ್ಲಿ ನಿರೂಪಿಸಿರುವರು. ಹೀಗೆ ಕರ್ಮಾಚರಣೆ ಮಾಡಿದಾಗ ನಮ್ಮ ಮನಸ್ಸು ಕೊಳೆಯನ್ನು ಕಳೆದುಕೊಳ್ಳುತ್ತದೆ. **ಬಿತ್ತನೆ ನಡೆಸುವ ಭೂಮಿಯಲ್ಲಿ ಕಳೆ ಕಿತ್ತು ಹಸನುಗೊಳಿಸಿದಾಗ ಬಿತ್ತಿದ ಬೀಜಗಳು ಹೆಮ್ಮರವಾಗಿ ಬೆಳೆಯುವಂತೆ ವೇದೋಕ್ತ ನಿತ್ಯಕರ್ಮಾನುಷ್ಠಾನದಿಂದ ನಿರ್ಮಲಗೊಂಡ ಮನಸ್ಸಿನಲ್ಲಿ ಗುರುಗಳು ಉಪದೇಶಿಸುವ ಜ್ಞಾನವು ದೃಢವಾಗುವುದು.**





ಜೀವಿಗಳು ಬೆಳಗಿನ ಜಾವದಿಂದ ಆರಂಭಿಸಿ ಮರುದಿನ ಬೆಳಗಿನವರೆಗೆ ಯಾವ ಯಾವ ಕರ್ಮಗಳನ್ನು ಮಾಡುವರೋ, ಅದರಲ್ಲಿ ಶ್ರೀಹರಿಯ ಅನುಗ್ರಹ ಪಡೆದ ರಮೆ, ಮುಖ್ಯಪ್ರಾಣ ಹಾಗೂ ತತ್ತ್ವಾಭಿಮಾನಿದೇವತೆಗಳನ್ನು ತನ್ನ ಪೂಜಾ ರೂಪವಾಗಿ ತೊಡಗಿಸಿಕೊಂಡು ಅವರಿಗೆ ಸೇವಾಕಾರ್ಯದಿಂದ ಮಹಾಪುಣ್ಯವನ್ನು ಕರುಣಿಸುವನು. ಈ ಜ್ಞಾನದೊಂದಿಗೆ ಕರ್ಮಾನುಷ್ಠಾನ ಮಾಡುವ ಸಾತ್ವಿಕ ಜೀವನಿಗೆ ಆಯಾ ಕರ್ಮದಿಂದ ಅವರವರ ಯೋಗ್ಯತಾನುಸಾರವಾಗಿ ಪುಣ್ಯ ದೊರಕುವಂತೆ ಮಾಡುವನು.

''ಸ್ವಾಮಿನಃ ಫಲಶ್ರುತೇಃ'' ಎಂಬ ಬ್ರಹ್ಮಸೂತ್ರವೂ ಈ ವಿಚಾರವನ್ನು ತಿಳಿಸುತ್ತದೆ. ನಮ್ಮ ದೇಹದಲ್ಲಿದ್ದು ಶ್ರೀಹರಿಸೇವಾರೂಪವಾದ ಪುಣ್ಯಕರ್ಮಗಳನ್ನು ಮಾಡಿಸುವ ದೇವತೆಗಳಿಗೆ ಪುಣ್ಯದಲ್ಲಿ ಅವರವರ ಪ್ರೇರಣೆಗೆ ಅನುಗುಣವಾಗಿ ಹೆಚ್ಚಿನ ಫಲವು ದೊರಕುತ್ತದೆ. ಜೀವನು ಆ ಕ್ರಿಯೆಯಲ್ಲಿ ತೊಡಗಿದಾಗ **ಅವನ ಶ್ರದ್ಧೆ ಮತ್ತು ಜ್ಞಾನ-ಗಳಿಗೆ ಅನುಗುಣವಾಗಿ ಫಲವು ದೊರೆಯುವುದು. ರಥವನ್ನು ಎಳೆಯುವ ಪುಣ್ಯಕಾರ್ಯದಲ್ಲಿ ನೂರಾರು ಜನ ಭಾಗಿಗಳಾಗಿದ್ದರೂ, ರಥವನ್ನು ಎಳೆಯುವ ಭಕ್ತರ ಶ್ರದ್ಧೆಗಳು ಭಿನ್ನಭಿನ್ನವಾಗಿರುತ್ತವೆ.** ಅದರಂತೆ ದೇವತೆಗಳು ನಮ್ಮ ಶರೀರದಲ್ಲಿ ಹೆಚ್ಚಿನ ಶ್ರದ್ಧಾ-ಭಕ್ತಿಗಳಿಂದ ಹರಿಪೂಜಾರೂಪವಾಗಿ ನಮ್ಮ ಕಾರ್ಯವನ್ನು ನಡೆಸು-ವುದರಿಂದ ಹೆಚ್ಚಿನ ಫಲವನ್ನು ಪಡೆಯುತ್ತಾರೆ. ಈ ಪುಣ್ಯದ ಪರಂಪರೆ ಎಲ್ಲ ವೇದಶಾಸ್ತ್ರಗಳ ಜ್ಞಾನೋಪದೇಶಕನಾದ ಚತುರ್ಮುಖ ಬ್ರಹ್ಮನಲ್ಲಿ ಅಂತಿಮವಾಗಿ ವಿಶ್ರಾಂತವಾಗುತ್ತದೆ. ಈ ವಿಚಾರವನ್ನು ಆಚಾರ್ಯ ಶ್ರೀಮಧ್ವರು ಅನುವ್ಯಾಖ್ಯಾನದಲ್ಲಿ –

**“ಪುಣ್ಯಮೇವಾಮುಮಾಪ್ನೋತಿ ನ ದೇವಾನ್ ಪಾಪಮಾಪ್ನುಯಾತ್ ।
ಇತ್ಯಾದಿಶ್ರುತಯೋ ಮಾನಮುಕ್ತೇಽರ್ಥೇ ಯುಕ್ತಯೋಽಪರಾಃ ॥**

**ಉಪಾಸನಾಧರ್ಮಫಲಂ ಯತೋ ದೇಹಾಂತರೇ ಸ್ಥಿತಿಃ ।
ವಾಸುದೇವಾಜ್ಞಯಾ ಚೈವ ಪೂರ್ವಕರ್ಮಾನುಸಾರತಃ ॥**

**ಪ್ರೇರಯಂತಿ ಹಿ ತೇ ಜೀವಾನ್ ಪುಣ್ಯಕರ್ಮೇಷು ನಿತ್ಯಶಃ ।
ಅರಾಗದ್ವೇಷತಶ್ಚೈವ ಕಥಂ ದೋಷಾನವಾಪ್ನುಯುಃ ॥**

**ಹರ್ಯಾಜ್ಞಾಕರಣಾದೇವ ಪುಣ್ಯಮೇವಾಭಿರಾಪ್ಯತೇ ।
ಹರಿಪೂಜೇತಿ ಚೋದ್ದೇಶಾತ್ ಕಥಂ ನ ಶುಭಮಾಪ್ನುಯುಃ ॥**

**ಅತೋ ಯಥಾಕ್ರಮಂ ಧರ್ಮಜ್ಞಾನಯೋಃ ಫಲಮಂಜಸಾ ।
ಸರ್ವಪ್ರಾಣಿಗತಂ ದೇವಾ ಪ್ರಾಪ್ನುವಂತ್ಯಾ ವಿರಿಂಚತಃ ॥”**

ಎಂಬಲ್ಲಿ ವಿವರಿಸಿದ್ದಾರೆ.

ಈ ಅನುಸಂಧಾನದೊಂದಿಗೆ ಜೀವನು ಯಾವ ಯಾವ ಕರ್ಮಗಳನ್ನು ಮಾಡುವನೋ ಆ ಎಲ್ಲ ಕರ್ಮಗಳನ್ನು ಶ್ರೀಹರಿಗೆ ಸಮರ್ಪಿಸಬೇಕು.

**"ಕಾಯೇನ ವಾಚಾ ಮನಸೇಂದ್ರಿಯೈರ್ವಾ**
**ಬುದ್ಧ್ಯಾತ್ಮನಾ ವಾಽನುಸೃತ ಸ್ವಭಾವಃ ।**
**ಕರೋಮಿ ಯದ್ಯತ್ಸಕಲಂ ಪರಸ್ಮೈ**
**ನಾರಾಯಣಾಯೇತಿ ಸರ್ಮರ್ಪಯಾಮಿ ॥"** ಎಂದು.

ಭಾಗವತವೂ ಸಹ ನಾವು ಮಾಡುವ ಎಲ್ಲ ಕರ್ಮಗಳನ್ನು ಭಗವಂತನಿಗೆ ಅರ್ಪಿಸಬೇಕೆಂದು ಹೇಳುತ್ತದೆ. ಮಾಡಿದ ಸಕಲ ಕರ್ಮಗಳನ್ನು ತನಗೆ ಅರ್ಪಿಸುವಂತೆ ಶ್ರೀಕೃಷ್ಣನು –

**"ಯತ್ಕರೋಷಿ ಯದಶ್ನಾಸಿ ಯುಜ್ಜುಹೋಷಿ ದದಾಸಿ ಯತ್ ।**
**ಯತ್ತಪಸ್ಯಸಿ ಕೌಂತೇಯ ತತ್ ಕುರುಷ್ವ ಮದರ್ಪಣಮ್ ॥"**

ಎಂದು ಗೀತೆಯಲ್ಲಿ ಹೇಳಿರುವನು.

ಎಲ್ಲ ಕರ್ಮಗಳನ್ನು ಶ್ರೀಹರಿಗರ್ಪಿಸಿದಲ್ಲಿ ಕರ್ಮಪಾಶ ಬಿಡುಗಡೆಯಾಗುವುದೆಂದು –

**"ದೇಹಿನಾಂ ಸ್ವಾಃ ಪ್ರವರ್ತಂತೇ ಪ್ರಾತರಾರಭ್ಯ ಯಾ ಕ್ರಿಯಾಃ ।**
**ತಾಶ್ಚ ವಿಷ್ಣ್ವರ್ಪಣಂ ಕುರ್ವನ್ ಕರ್ಮಪಾಶೈಃ ಪ್ರಮುಚ್ಯತೇ ॥"**

ಎಂದು ವಾಯುಪುರಾಣವು ಹೇಳುತ್ತಿದೆ.

ನಮ್ಮ ಎಲ್ಲ ಕರ್ಮಾನುಷ್ಠಾನವೂ ವಿಷ್ಣುಪ್ರೀತಿ ಎಂಬ ಗುರಿಯನ್ನೇ ಹೊಂದಿರ-ಬೇಕೆಂದು –

**"ವಿಷ್ಣೋರರ್ಥೇ ಕರಿಷ್ಯಾಮಿ ಚಾಹರಾಮಿ ದದಾಮಿ ಚ ।**
**ನಾತ್ಮಾರ್ಥಮಿತಿ ವೈ ಕ್ವಾಪಿ ವದೇತ್ ಕರ್ಮಕರೋ ನರಃ ॥"**

ಎಂದು ವಾಯುಪುರಾಣವೂ –

**"ನೈಷ್ಕರ್ಮ್ಯಮಪ್ಯಚ್ಯುತಭಾವವರ್ಜಿತಮ್ ನ ಶೋಭತೇ ಜ್ಞಾನಮಲಂ ನಿರಂಜನಮ್ ॥"**

ಎಂಬ ಭಾಗವತದ ಮಾತೂ ಹೇಳುತ್ತಾ ಭಗವತ್ಪ್ರೀತಿಕರವಲ್ಲದ ಕರ್ಮವಾಗಲೀ, ಕರ್ಮವಿಲ್ಲದಿರುವುದಾಗಲೀ ಜ್ಞಾನವಾಗಲೀ ಶೋಭಿಸಲಾರದೆಂದು ಹೇಳುವ ಮೂಲಕ ಕರ್ಮ ಹಾಗೂ ಜ್ಞಾನಗಳ ಅನಿವಾರ್ಯತೆಯನ್ನು ಬೋಧಿಸುತ್ತಿವೆ.





ಇಂತಹ ಕರ್ಮಗಳನ್ನಾಚರಿಸುವಾಗ ನಿಷ್ಕಾಮನೆಯಿಂದ ಮಾಡಬೇಕೆಂದು ಹೇಳುತ್ತಾ ಅವುಗಳಲ್ಲಿ ಲೋಪವಾದರೂ ಅವುಗಳನ್ನೆಣಿಸದಲೇ ಭಗವಂತನು ಸಲಹುವನೆಂದು ಹರಿಕಥಾಮೃತಸಾರದಲ್ಲಿ ಶ್ರೀದಾಸರು ಹೇಳುವ ಈ ಮಾತು ಎಷ್ಟು ಮಾರ್ಮಿಕವಾಗಿದೆ.

**"ಭಕ್ತಿಪೂರ್ವಕವಾಗಿ ಮುಕ್ತಾ- ।**
**ಮುಕ್ತನಿಯಾಮಕನ ಸರ್ವೋ-**
**ದ್ರಿಕ್ತಮಹಿಮೆಗಳನವರತ ಕೊಂಡಾಡು ಮರೆಯದಲೇ**
**ಸಕ್ತನಾಗದೆ ಲೋಕವಾರ್ತೆ ಪ್ರ ।**
**ಸಕ್ತಿಗಳನೀಡಾಡಿ ಶ್ರುತಿಸ್ಮೃತ್ಯು-**
**ಕ್ತಕರ್ಮವ ಮಾಡುತಿರು ಹರಿಯಾಜ್ಞೆಯೆಂದರಿದು ॥**
**ಲೋಪವಾದರು ಸರಿಯೆ ಕರ್ಮಜ ।**
**ಪಾಪಪುಣ್ಯಗಳೆರಡು ನಿನ್ನನು ।**
**ಲೇಪಿಸವು ನಿಷ್ಕಾಮಕನು ನೀನಾಗಿ ಮಾಡುತಿರೇ ।**
**ಸೌಪರ್ಣಿವರವಹನ ನಿನ್ನ ಮ ।**
**ಹಾಪರಾಧಗಳೆಣಿಸದಲೇ ಸ್ವ- ।**
**ರ್ಗಾಪವರ್ಗದೊಳಿಟ್ಟು ಸಲಹುವ ಸತತ ಸುಖಸಾಂದ್ರ ॥"**

(ಕರ್ಮವಿಮೋಚನಸಂಧಿ - ೧೯-೯, ೧೦, ೧೧)

ಹೀಗೆ ತಾನು ಆಚರಿಸುವ ಕರ್ಮವನ್ನು ಭಗವಂತನಲ್ಲಿ ಅರ್ಪಿಸಬೇಕೆಂಬ ವಿಚಾರವನ್ನು ಆಚಾರ್ಯರು ಸದಾಚಾರಸ್ಮೃತಿಯಲ್ಲಿಯೂ ಶ್ರೀರಾಘವೇಂದ್ರ ಗುರುಸಾರ್ವಭೌಮರು ಸರ್ವಸಮರ್ಪಣಗದ್ಯದಲ್ಲಿಯೂ ನಿರೂಪಿಸಿರುವರು.

ತಾನು ಮಾಡಿದ ಕರ್ಮದಲ್ಲಿ ಶ್ರೀಹರಿ ಹಾಗೂ ದೇವತೆಗಳ ಕರ್ತೃತ್ವದ ಅನುಸಂಧಾನ ಹಾಗೂ ಕೃತಜ್ಞತಾಭಾವದಿಂದ ಸಮರ್ಪಣೆ ಮಾಡಿದರೆ ಮಹಾಫಲ-ವೆಂದೂ ಹಾಗೆ ಮಾಡದಿದ್ದರೆ ಮಹಾಫಲದಿಂದ ವಂಚಿತರಾಗುವರೆಂದೂ **ಮಾಡಿದ ಪಾಪಕರ್ಮಗಳನ್ನೂ ಸಹ ಹರಿಯೇ ಕರ್ಮಾನುಸಾರ ಮಾಡಿಸಿದ್ದಾನೆಂದೂ ಭಾವಿಸುತ್ತ ಆ ಪಾಪವು ಹರಿದ್ವೇಷಿಗೆ ಹೋಗಲಿ ಹಾಗೂ ತನ್ನಿಂದ ಮುಂದೆ ಅಂತಹ ಪಾತಕ-ವನ್ನು ಮಾಡಿಸದಿರಲೆಂದು ವಿನಮ್ರ ಪ್ರಾರ್ಥನೆಯೊಂದಿಗೆ ಹರಿಗೆ ಸಮರ್ಪಿಸ-ಬೇಕೆಂದು ಸರ್ವಸಮರ್ಪಣಗದ್ಯದಲ್ಲಿ ಮನೋಜ್ಞವಾಗಿ ನಿರೂಪಿಸಲಾಗಿದೆ.**

ಪುಣ್ಯವನ್ನು ಶ್ರೀಹರಿಗೆ ಸಮರ್ಪಿಸದಿದ್ದಲ್ಲಿ ಒಡೆಯ ಅಥವಾ ರಕ್ಷಕರಿಲ್ಲದ ಮರಣಗಳಲ್ಲಿರುವ ಹಣ್ಣುಗಳನ್ನು ಸ್ವಚ್ಛಂದವಾಗಿ ಪುಂಡರು ಕದ್ದೊಯ್ಯುವಂತೆ ನಾವು ಮಾಡಿದ ಪುಣ್ಯವನ್ನು ದೈತ್ಯರು ಕದ್ದೊಯ್ಯುವರು. ಈ ವಿಚಾರವನ್ನು ಹರಿಕಥಾಮೃತ-ಸಾರದಲ್ಲಿ ಶ್ರೀಜಗನ್ನಾಥದಾಸರು ಮನೋಜ್ಞವಾಗಿ ವರ್ಣಿಸಿರುವರು.

**“ಒಡೆಯರಿದ್ದ ವನಸ್ಥಫಲಗಳ ।**
**ಬಡಿದು ತಿಂಬುವರುಂಟೆ ಕಂಡರೆ**
**ಹೊಡೆದು ಬಿಸುಟುವರೆಂಬ ಭಯದಿಂ ನೋಡಲಂಜುವರು ।**
**ಬಿಡದೆ ಮಾಡುವ ಕರ್ಮಗಳು ಮನೆ ।**
**ಮಡದಿ ಮಕ್ಕಳು ಬಂಧುಗಳ ಕಾ ।**
**ರೊಡಲನಾಳುಗಳೆಂದ ಮಾತ್ರದಿ ಓಡುವುದು ದುರಿತ ॥**
**ವಿಧಿನಿಷೇಧಗಳೆರಡು ಮರೆಯದೆ ।**
**ಮಧುವಿರೋಧಿಯ ಪಾದಕರ್ಪಿಸ ।**
**ಲದಿತಿಮಕ್ಕಳಿಗೀವ ಪುಣ್ಯವ ಪಾಪ ದೈತ್ಯರಿಗೆ ॥**
**ಸುದರ್ಶನಧರಗೀಯದಿರೆ ಬಂ ।**
**ದೊದಗಿ ಒಯ್ವರು ಪುಣ್ಯ ದೈತ್ಯರು ।**
**ಅಧಿಪರಿಲ್ಲದ ವೃಕ್ಷಗಳ ಫಲದಂತೆ ನಿತ್ಯದಲಿ ॥**
**ಜ್ಞಾನಕರ್ಮೇಂದ್ರಿಯಗಳಿಂದೇ ।**
**ನೇನು ಮಾಡುವ ಕರ್ಮಗಳ ಲ- ।**
**ಕ್ಷ್ಮೀನಿವಾಸನಿಗರ್ಪಿಸುತಲಿರು ಕಾಲಕಾಲದಲಿ ॥**
**ಪ್ರಾಣಪತಿಕೈಗೊಂಡು ನಾನಾ ।**
**ಯೋನಿಯೈದಿಸನೊಮ್ಮೆ ಕೊಡದಿರೆ ।**
**ದಾನವರು ಸೆಳೆದೊಯ್ಯುವರೆಲ್ಲಾ ಪುಣ್ಯರಾಶಿಗಳ ॥**
**ಇದ್ದಲೆಯು ನಿತ್ಯದಲಿ ಮೇಧ್ಯಾ-**
**ಮೇಧ್ಯವಸ್ತುಗಳುಂಡು ಲೋಪದಿ**
**ಶುದ್ಧ ಶುಚಿ ಎನಿಸಿಕೊಂಬನು ವೇದಸ್ಮೃತಿಗಳೊಳು ॥**
**ಬುದ್ಧಿಪೂರ್ವಕವಾಗಿ ವಿಬುಧರು ।**
**ಶ್ರದ್ಧೆಯಿಂದರ್ಪಿಸಿದ ಕರ್ಮ ನಿ ।**
**ಷಿದ್ಧವಾದರು ಸರಿಯೇ ಕೈಗೊಂಡುದ್ಧರಿಸುತಿಪ್ಪ ॥”**

(ಸರ್ವಸ್ವಾತಂತ್ರ್ಯಸಂಧಿ - ೧೮ - ೩೧, ೩೩, ೩೪, ೩೫)

ಹೀಗೆ ಪುಣ್ಯ-ಪಾಪಕರ್ಮಗಳ ಸಮರ್ಪಣೆಯಲ್ಲಿ ಅನುಸಂಧಾನವನ್ನು ಹೊಂದಿ ಆಯಾ ಜೀವರಾಶಿಗಳ ಸ್ವರೂಪಾಭಿವ್ಯಕ್ತಿಗಾಗಿ ಸೃಷ್ಟಿಯಲ್ಲಿ ತೊಡಗಿದ ಶ್ರೀಹರಿಯ ಸ್ವತಂತ್ರಕರ್ತೃತ್ವವನ್ನು ಸ್ಮರಿಸಿ ಕರ್ಮಸಮರ್ಪಣೆಯನ್ನು ಮಾಡಿದಾಗ ಪಾಪನಿರ್ಮುಕ್ತ-ನಾಗಿ ಸಾಧಕನು ಅನಂತಫಲವನ್ನು ಪಡೆಯುವನೆಂಬುದು ಶಾಸ್ತ್ರಸಮ್ಮತವಾದ ವಿಚಾರವನ್ನು ಶ್ರೀರಾಯರು ಸರ್ವಸಮರ್ಪಣಗದ್ಯವೆಂಬ ಪುಟ್ಟ ಕೃತಿಯ ಮೂಲಕ ಅರುಹಿ ಪರಮೋಪಕಾರ ಮಾಡಿದ್ದಾರೆ.

❑❑





ಲೇಖನಾಂಕ

# ಅಪೂರ್ವ ಯೋಗಸಿದ್ಧಿಗಳು ಮತ್ತು ಚತುಃಷಷ್ಠಿಕಲಾವಿದ್ಯೆಗಳು

■ **ವಿದ್ವಾನ್. ಕೆ.ಎಲ್. ಪುಷ್ಕರಾಚಾರ್ಯ**
ಕ್ಯಾತಸಂದ್ರ, ಹಳೇ ಪೋಸ್ಟ್ ಆಫೀಸ್ ರಸ್ತೆ, ತುಮಕೂರು - ೫೭೨ ೧೦೪

ಹಿಂದಿನ ಸಂಚಿಕೆಯಿಂದ.......

೪೨) **ಚಕ್ಷುಃಸಿದ್ಧಿ :** ತಾನಿದ್ದ ಕಡೆಯಿಂದಲೇ ಎಲ್ಲ ಕಡೆಯ ದೂರದ ದೃಶ್ಯಗಳನ್ನು ನೋಡುವಿಕೆ ಹಾಗೂ ದೃಶ್ಯಕ್ಕೆ ಬಾಧಕ ಪ್ರಸಂಗಗಳಿದ್ದರೂ ಕಾಣಿಸುವಿಕೆ, ಬೇರೊಂದು ದೃಶ್ಯಾವಳಿಯನ್ನು ತಾನಿದ್ದ ಕಡೆಗೆ ಬರಿಸುವಂತೆ ಮಾಡುವುದು ಇತ್ಯಾದಿ ಸಿದ್ಧಿಗಳಿಗೆ ಈ ಹೆಸರು. ಉದಾ : ಶ್ರೀಜಗನ್ನಾಥದಾಸರು ತಮ್ಮ ತಾಯಿಗೆ ತಮ್ಮ ಊರಲ್ಲಿಯೇ ಶ್ರೀನಿವಾಸನ ಬ್ರಹ್ಮರಥೋತ್ಸವ ದೃಶ್ಯವನ್ನು ತೋರಿಸಿದ್ದು.

೪೩) **ವೇದಸಿದ್ಧಿ :** ಪುಸ್ತಕದ ಸಹಾಯವಿಲ್ಲದೇ ತಮ್ಮ ಸ್ಮೃತಿಪಟಲದಲ್ಲಿ ವೇದಮಂತ್ರ-ಗಳನ್ನು ನೋಡುವಿಕೆ ಮತ್ತು ಆಯಾ ವೇದಾಭಿಮಾನಿದೇವತೆಗಳನ್ನು ದರ್ಶನ ಮಾಡುವಿಕೆಗೂ ಈ ಹೆಸರು.

೪೪) **ಮನಸ್ಸಿದ್ಧಿ :** ಪರರ ಮನಸ್ಸಿನಲ್ಲಿರುವ ವಿಚಾರಧಾರೆಗಳನ್ನು ಹೇಳುವಿಕೆಗೆ ಹಾಗೂ ತಾನು ಆ ವಿಚಾರಗಳನ್ನು ತಿಳಿಯುವಿಕೆಗೂ ಮತ್ತು ತನ್ನ ಮನಸ್ಸಿನ ವಿಚಾರ ಧಾರೆಗಳನ್ನು ಮತ್ತೊಬ್ಬರಿಗೆ ತಿಳಿಯದಂತೆ ಸ್ತಂಭನ ಮಾಡುವಿಕೆಗೂ ಈ ಹೆಸರು.

೪೫) **ಮೃದುಕಠಿಣಸಿದ್ಧಿ :** ಮೃದುವಸ್ತುಗಳನ್ನು ಕಠಿಣ ಮಾಡುವುದು, ಹಾಗೆಯೇ ಕಠಿಣ ವಸ್ತುಗಳನ್ನು ಸ್ಪರ್ಶಮಾತ್ರದಿಂದಲೇ ಮೆತ್ತಗೆ ಮಾಡುವಿಕೆಗೆ ಈ ಹೆಸರು. ಉದಾ : ಶ್ರೀವಿಜಯೀಂದ್ರರು - ಶ್ರೀರಾಘವೇಂದ್ರರು ಕಠಿಣಲೋಹವನ್ನು ತಮ್ಮ ಕೈಯಿಂದಲೇ (ಸ್ಪರ್ಶಮಾತ್ರದಿಂದ) ಮೆತ್ತಗೆ ಮಾಡಿ ಅನೇಕ ಪ್ರತಿಮೆ-ಗಳನ್ನು ನಿರ್ಮಿಸಿರುವುದು.

೪೬) **ಭೂಗರ್ಭಸಿದ್ಧಿ :** ಭೂಮಿಯೊಳಗಿರುವ ಗುಪ್ತತೀರ್ಥಗಳು, ಪ್ರತಿಮಾವಿಶೇಷ-ಗಳು (ಗುಪ್ತವಾದ) ರತ್ನವೈಢೂರ್ಯಾದಿ ಐಶ್ವರ್ಯ, ಆಭಿಚಾರಕ ಕೆಟ್ಟವಸ್ತುಗಳು,

ಶುಭಾಶುಭ ಅಂಶಗಳು, ಭೂ ಸಂಬಂಧ ಸರ್ವ ವಿಷಯಗಳನ್ನೂ ಯೋಗಜ್ಞಾನದಿಂದ ಹೇಳುವಿಕೆಗೆ ಈ ಹೆಸರು.

೪೭) **ಅಸ್ತ್ರಸಿದ್ಧಿ :** ಅನೇಕ ಆಯುಧಗಳಲ್ಲಿ ಮಂತ್ರಗಳ ಸಹಾಯದಿಂದ ಅಭಿಮಂತ್ರಿಸಿ, ಆಯಾ ಅಸ್ತ್ರಗಳನ್ನಾಗಿ (ನಾಗಾಸ್ತ್ರ, ಗರುಡಾಸ್ತ್ರ, ಇತ್ಯಾದಿ) ಪ್ರಯೋಗಿಸುವಿಕೆ ಮತ್ತು ಪ್ರತಿ ಅಸ್ತ್ರಗಳನ್ನು ನಿರ್ಮಿಸುವಿಕೆ, ಅಸ್ತ್ರಸ್ತಂಭನ ಮಾಡುವಿಕೆ ಹೀಗೆ ಅನೇಕ ರೀತಿಯ ಸಿದ್ಧಿಗೆ ಈ ಹೆಸರು.

೪೮) **ಮುದ್ರಾಸಿದ್ಧಿ :** ಅನೇಕ ವಿಧ ಶಸ್ತ್ರ - ಅಸ್ತ್ರ - ಭೂತ - ಪ್ರೇತ - ಪಿಶಾಚಾದಿಗಳ ಆಪತ್ತುಗಳನ್ನು ನಿವಾರಿಸಿಕೊಳ್ಳಲು ಯೋಗಿಯು ತೋರುವ ಕೈಬೆರಳುಗಳ ಸನ್ನೆಯ ಮುದ್ರೆಗಳಿಗೆ ಈ ಹೆಸರು. ಹಾಗೆಯೇ ಮುದ್ರೆಯ ಪ್ರದರ್ಶನದಿಂದಲೇ ಈ ಮೇಲಿನವುಗಳ ಸ್ತಂಭನವನ್ನೂ ಮಾಡುವಿಕೆಗೆ ಈ ಹೆಸರು.

೪೯) **ಭೂತಚೇಷ್ಟಾಸಿದ್ಧಿ :** ತನ್ನ ಯೋಗಶಕ್ತಿಯಿಂದಲೇ ದುಷ್ಟಜನರಿಗೆ ಕೆಟ್ಟ ಭೂತ-ಪ್ರೇತಗಳಂತೆ ಇರುವ ದೃಶ್ಯಗಳನ್ನು ತೋರಿಸುವಿಕೆಗೆ ಮತ್ತು ದುಷ್ಟಜನರನ್ನು ಈ ರೂಪಕ್ಕೆ ಪರಿವರ್ತಿಸುವಂತೆ ಮಾಡುವಿಕೆಗೂ ಈ ಹೆಸರು.

೫೦) **ಇಂದ್ರಜಾಲಸಿದ್ಧಿ :** ಇಲ್ಲಿ ಇಂದ್ರಜಾಲಸಿದ್ಧಿ ಎಂದರೆ ಜಾದುಗಾರ ವಿದ್ಯೆಯಲ್ಲ. **ಯಾವ ವಸ್ತುಗಳನ್ನು ಬೇಕಾದರೂ ಸತ್ಯವಾಗಿ ಸೃಷ್ಟಿಮಾಡುವಿಕೆ ಮತ್ತು ಅವುಗಳನ್ನು ಶಾಶ್ವತವಾಗಿ ಅನುಭವಿಸುವಂತೆ ಮಾಡುವಿಕೆಗೂ ಈ ಹೆಸರು.** ಆದ್ದರಿಂದ ಯೋಗಾವಲಬ್ಧ ವಸ್ತಗಳೂ ವರಬಲಾದಿಗಳಂತೆ ಕೆಲಸ ಮಾಡುವುವು. ಉದಾ : ಕರ್ದಮರು ಯೋಗಬಲದಿಂದ ನಿರ್ಮಿಸಿದ ಭೋಗವಸ್ತುಗಳಂತೆ ತಿಳಿಯಬೇಕು.

೫೧) **ಗುಪ್ತಸಿದ್ಧಿ :** ಎಷ್ಟು ದಿನ ಬೇಕಾದರೂ ಯಾರಿಗೂ ಗುರುತು ಸಿಗದಂತೆ ಇರುವಿಕೆ. ಇದು ಅಂತರ್ಧಾನ ಶಕ್ತಿಯಲ್ಲ. ನಾವು ವಸ್ತುತಃ ಇದ್ದರೂ - ಮತ್ತೊಬ್ಬರು ನಮ್ಮನ್ನು ನೋಡಿದರೂ ಗುರುತು ಅವರಿಗೆ ಆಗದಂತೆ ಇರುವಿಕೆಗೂ ಈ ಹೆಸರು.

೫೨) **ವೇದದ್ರಷ್ಟಾರಸಿದ್ಧಿ : ಯೋಗಶಕ್ತಿಯಿಂದಲೇ** ವೇದಮಂತ್ರಗಳ ದರ್ಶನ ಹಾಗೂ ಆಯಾ ಮೂಲಮಂತ್ರದ್ರಷ್ಟಾರರ ಅನುಗ್ರಹವನ್ನು ಸಂಪಾದಿಸುವಿಕೆಗೆ ಈ ಹೆಸರು. ಇಂತಹ ವೇದಮಂತ್ರದ್ರಷ್ಟಾರರಿಂದ ಮಂತ್ರೋಪದೇಶ ಪಡೆಯುವುದಕ್ಕೂ ಈ ಹೆಸರು.





೫೩) **ಅಂತರಿಕ್ಷಸಿದ್ಧಿ :** ಅಂತರಿಕ್ಷಯಾನ ಸಹಾಯವಿಲ್ಲದಲೆ ಕೇವಲ ಅಂತರಿಕ್ಷದಲ್ಲಿ ಹಕ್ಕಿಯಂತೆ ಸಂಚರಿಸುವುದು. ಉದಾ : ಶ್ರೀವಾದಿರಾಜತೀರ್ಥರು, ಯೋಗಿ ಬಸವಾಚಾರಿಗೆ ಸ್ಪರ್ಧೆ ನೀಡಿ ಆಕಾಶದಲ್ಲಿ ಸಂಚರಿಸಿದ್ದು ಮತ್ತು ಶ್ರೀವಿಜಯೀಂದ್ರರು ಅಪ್ಪಯ್ಯದೀಕ್ಷಿತರೊಡನೆ ಸ್ಪರ್ಧೆಯಲ್ಲಿ ಆಕಾಶದಲ್ಲಿ ಸಂಚರಿಸಿದ್ದು.

೫೪) **ಸಂಖ್ಯಾಸಿದ್ಧಿ :** ಒಂದು ಮುಷ್ಟಿಯಲ್ಲಿ ಮರಳನ್ನು ಅಥವಾ ಧಾನ್ಯಗಳನ್ನು ಹಿಡಿದು ಆ ಮುಷ್ಟಿಯಲ್ಲಿನ ಮರಳಿನ ಅಥವಾ ಆ ಧಾನ್ಯಗಳ ಸಂಖ್ಯೆಯನ್ನು ಹೇಳುವಿಕೆಗೆ ಈ ಹೆಸರು. ಹೀಗೆಯೇ ಇರುವೆ ಗೂಡಿನ ಜೇನುಗೂಡಿನಲ್ಲಿರುವ ಸಂಖ್ಯೆಗಳನ್ನೂ ಹೇಳುವುದಕ್ಕೂ ಈ ಹೆಸರು.

೫೫) **ದೇವತಾಹ್ವಾನಸಿದ್ಧಿ :** ದೇಹಗತನಾಡಿಗಳ ಸಿದ್ಧಿಯಿಂದ ಆಯಾ ನಾಡಿಗತ ಅಭಿಮಾನಿದೇವತೆಗಳನ್ನು ಬಹಿರಂಗವಾಗಿ ದರ್ಶನ ಕೊಡುವಂತೆ ಆಹ್ವಾನಿಸುವಿಕೆಗೆ ಈ ಹೆಸರು. ಕೆಲವೊಮ್ಮೆ ವರಬಲಾದಿಗಳಿಂದಲೂ ಈ ಶಕ್ತಿಯು ಬರುವುದುಂಟು. ಉದಾ : ದೂರ್ವಾಸ ಮುನಿಗಳು ಕುಂತಿಗೆ ಇಂತಹ ಮಂತ್ರರೂಪ ವರಗಳನ್ನು ಕೊಟ್ಟಿದ್ದನ್ನು ಭಾರತದಲ್ಲಿ ಕಾಣುತ್ತೇವೆ.

೫೬) **ವೈಶ್ವಾನರಸಿದ್ಧಿ :** ಎಷ್ಟು ಹೆಚ್ಚಿಗೆ ಭಕ್ಷ್ಯ-ಭೋಜ್ಯಗಳನ್ನು ತಿಂದರೂ ಅದನ್ನು ಜೀರ್ಣಿಸಿಕೊಳ್ಳುವಿಕೆಗೆ ಮತ್ತು ಉಂಡ ವಸ್ತುಗಳನ್ನು ಕಕ್ಕಿ ಪುನಃ ಮೊದಲಿನಂತೆ ಪೃಥಕ್ಕರಣ ಮಾಡುವಿಕೆಗೂ ಈ ಹೆಸರು. ಉದಾ : ಒಮ್ಮೆ ವ್ಯಾಸರ ಆಜ್ಞೆಯಂತೆ ಉಂಡ ಭಕ್ಷ್ಯ-ಭೋಜ್ಯಗಳನ್ನು ಪುನಃ ಉದರದಿಂದ ತೆಗೆದು ಅವುಗಳ ಪೃಥಕ್ಕರಣ ಮಾಡಿ, ಪುನಃ ನೈವೇದ್ಯ ಮಾಡಿ ಊಟ ಮಾಡಿದವರು ಶ್ರೀಪುರಂದರದಾಸರು.

೫೭) **ಯೋಗಾಗ್ನಿಸಿದ್ಧಿ :** ಕಟ್ಟಿಗೆ, ಬೆರಣಿ ಹಾಗೂ ಉರವಲ ಯಾವ ಸಾಮಗ್ರಿಗಳಿಲ್ಲದೆಯೇ ಕೇವಲ ಯೋಗಶಕ್ತಿಯಿಂದಲೇ ಅಗ್ನಿಯನ್ನು ಸೃಷ್ಟಿಸುವುದು - ಉರಿಯುವಂತೆ ಮಾಡುವ ಕ್ರಿಯೆಗೆ ಈ ಹೆಸರು. ಹಾಗೆಯೇ ಹತ್ತಿಕೊಂಡು ವಸ್ತುಗಳನ್ನು ಸುಡುವಾಗ ಅದನ್ನು ನಿಲ್ಲಿಸುವುದು, ಉರಿದ ವಸ್ತುಗಳು ಭಸ್ಮವಾದರೂ ಆ ವಸ್ತುಗಳನ್ನು ಮೊದಲಿನಂತೆಯೇ ಇರುವಂತೆ ಮಾಡುವುದು ಈ ಸಿದ್ಧಿಗೂ ಈ ಹೆಸರು. ಉದಾ : ಜನಕಮಹಾರಾಜನ ಅರಮನೆಯನ್ನು ಶ್ರೀಮತ್ ಶುಕರು ತಮ್ಮ ಯೋಗಾಗ್ನಿಯಿಂದ ಸುಟ್ಟರು. ಪುನಃ ಯಥಾರ್ಥವಾಗಿ ಆ ವಸ್ತುಗಳನ್ನು ಇರುವಂತೆ ಮಾಡಿದುದು.

೫೮) **ಹಿಮಾಂಶುಸಿದ್ಧಿ :** ನಿರ್ದಿಷ್ಟ ಜಲರಾಶಿಯನ್ನು ಸ್ಪರ್ಶಮಾತ್ರದಿಂದಲೇ ಜಡವನ್ನಾಗಿ ಅಂದರೆ ಮಂಜುಗೆಡ್ಡೆಯನ್ನಾಗಿ ಮಾಡುವಿಕೆಗೆ ಈ ಹೆಸರು. ಹಾಗೆಯೇ

ಗಡ್ಡೆಮಾಡಿದ ಜಲರಾಶಿಯ ಮೇಲೆ ಕುಳಿತು, ನದಿ-ಪ್ರವಾಹಗಳನ್ನು ದಾಟುವುದು - ಸಮುದ್ರದಲ್ಲಿ ಸಂಚರಿಸುವಿಕೆಗೂ ಈ ಹೆಸರು.

೪೯) **ಮಾರ್ಗಸೂಚಿಸಿದ್ಧಿ :** ಒಂದು ಜಾಗದಿಂದ ಮತ್ತೊಂದು ಪ್ರದೇಶಕ್ಕೆ ಹೋಗಲು ಮಾರ್ಗದ ಗೊತ್ತುವಳಿಯ ರೇಖೆಯಿಲ್ಲದೆ ಆಯಾ ಪ್ರದೇಶಗಳನ್ನು ಸ್ಫುಟವಾಗಿ ಪತ್ತೆ ಹಚ್ಚಿ ತಲುಪುವುದಕ್ಕೆ ಈ ಹೆಸರು. ಕಾಣದ - ಪರಿಚಯವಿಲ್ಲದ ಯಾವುದೇ ಸ್ಥಳದಲ್ಲಿ ಪರಿಚಯವಿದ್ದವರಂತೆ ಸಂಚರಿಸುವ ಸ್ಥಿತಿಗೂ ಈ ಹೆಸರು.

೬೦) **ಪರಿಮಳಸಿದ್ಧಿ - ಗಂಧಸ್ವೋತಕಸಿದ್ಧಿ :** ಯಾವ ಹೂವಿನ ಅಂದರೆ ಸಂಪಿಗೆ - ಮಲ್ಲಿಗೆ - ಜಾಜಿ - ಶಾವಂತಿಗೆ - ಪಾರಿಜಾತಾದಿ ಪುಷ್ಪಗಳ ಸುಗಂಧವನ್ನು ತಮ್ಮ ಹಸ್ತದಲ್ಲಿ ಉತ್ಪತ್ತಿ ಮಾಡುವಿಕೆಗೆ ಮತ್ತು ಈ ಮೇಲಿನ ಪುಷ್ಪಗಳಲ್ಲಿರುವ ಸಹಜವಾದ ಈ ಪರಿಮಳವನ್ನು ತೆಗೆದು ನಿರ್ಗಂಧ ಕುಸುಮವನ್ನಾಗಿ ಮಾಡುವಿಕೆಗೂ ಈ ಹೆಸರು. ಹೀಗೆ ನೂರಾರು ಅಪೂರ್ವ ಯೋಗಸಿದ್ಧಿಗಳನ್ನು ಸಂಗ್ರಹಿಸಿದ್ದಾರೆ. ಆದರೆ ಅವುಗಳ ಸಂಗ್ರಹವನ್ನು ವಿಸ್ತಾರ ಭಯದಿಂದ ಕೈಬಿಡಲಾಗಿದೆ. ಮುಖ್ಯ ಮುಖ್ಯವಾದವುಗಳನ್ನು ಸಂಗ್ರಹಿಸಲಾಗಿದೆ. ಈ ಮೇಲಿನ ಯೋಗಸಿದ್ಧಿಗಳಲ್ಲಿಯೇ ಕೆಲವು ಅಂತರ್ಭೂತವಾಗಿವೆ. ಅವುಗಳನ್ನು ವಿಸ್ತಾರಮಾಡಬಹುದಾಗಿದೆ. ಈ ಸಿದ್ಧಿಗಳು ಋಜುಗುಣದವರಿಂದ - ಸಾಮಾನ್ಯ ಒಬ್ಬ ಯೋಗಿಯವರೆಗೂ ಇರುವ ವ್ಯತ್ಯಾಸಗಳನ್ನೂ ತಿಳಿಸುತ್ತವೆ. ಇಂತಹ ದೈವೀಸಂಪತ್ತು ನಮ್ಮ ಪ್ರಾಚೀನ ಋಷಿ-ಮುನಿಗಳ ಸೌಭಾಗ್ಯವಾಗಿತ್ತು.

**(ಮುಂದುವರೆಯುವುದು)**

---

ಮುಂದಿನ ಸಂಚಿಕೆಯಲ್ಲಿ ೬೪ ವಿದ್ಯೆಗಳ ಆಂತರಿಕ ಪ್ರಭೇದಗಳು.

**"ಲೋಕೈರ್ಮತ್ಸರಿಭಿರ್ಗುಣಾ ವನಭುವೋ ವ್ಯಾಲೈರ್ನೃಪಾ ದುರ್ಜನೈಃ ।**
**ಅಸ್ಥೈರ್ಯೇಣ ಧೃತಿರ್ಜಗತ್ಯಪಹೃತಾ ಗ್ರಸ್ತಂ ನ ಕಿಂ ಕೇನ ವಾ ॥"**

- ವೈರಾಗ್ಯಶತಕ - 103

ಹುಟ್ಟು ಸಾವಿನಿಂದ ಆಕ್ರಮಿಸಲ್ಪಟ್ಟಿದೆ. ಹಾಗೆಯೇ ಮಿಂಚಿನಂತೆ ಚಂಚಲವಾದ ಯೌವನವು ಮುಪ್ಪಿನಿಂದಲೂ, ಸಂತೋಷವು ಹಣದಾಸೆಯಿಂದಲೂ, ಶಾಂತಿ- ಸುಖವು ಯುವತಿಯರ ವಿಲಾಸಗಳಿಂದಲೂ, ಗುಣಗಳು ಅಸಹನೆಯಿಂದ ಕೂಡಿದ ಜನಗಳಿಂದಲೂ, ಕಾಡುಪ್ರದೇಶಗಳು ದುಷ್ಟಮೃಗಗಳಿಂದಲೂ, ರಾಜರು ದುಷ್ಟರಿಂದಲೂ, ಧೈರ್ಯವು ಅಸ್ವಸ್ಥತೆಯಿಂದಲೂ ಆವರಿಸಲ್ಪಟ್ಟಿದೆ. ಈ ಜಗತ್ತಿನಲ್ಲಿ ಯಾವುದನ್ನು ಯಾವುದೂ ಆಕ್ರಮಿಸದೆ ಇಲ್ಲ ?

- ಸುಭಾಷಿತಮಂಜರೀ





॥ ಶ್ರೀಹರಿ ಸರ್ವೋತ್ತಮ ॥ ॥ ಹರೇ ಶ್ರೀನಿವಾಸ ॥ ॥ ವಾಯುಜೀವೋತ್ತಮ ॥

ನಮೋ ನಮೋ ಕಾರಣಕಾರಣಾಯ । ನಮೋ ನಮಃ ಪಾಲಕಪಾಲಕಾಯ ।
ನಮೋ ನಮಃ ಸರ್ವನಿಯಾಮಕಾಯ । ನಮೋ ನಮಃ ಸಾತ್ವಿಕಮುಕ್ತದಾಯ ।
ನಮೋ ನಮಸ್ತಾಮಸ ನಿತ್ಯದುಃಖ ಭೋಗಪ್ರದಾಯಾಖಿಲಲೋಕಪಾಯ ।

**॥ ಸರ್ವೇ ಜನಾಃ ಸುಖಿನೋ ಭವಂತು ॥**

ಯಾವುದೇ ಜಾತಕ ಅಥವಾ ವ್ಯಕ್ತಿಯ ಗ್ರಹಗತಿಗಳು ಕೇವಲ ಹರಿಚಿತ್ತದಂತೆ ನಡೆಯುತ್ತವೆಯೇ ಹೊರತು ಮನುಷ್ಯನ ಪ್ರಯತ್ನದಿಂದ ಅಲ್ಲವೇ ಅಲ್ಲ. ಆದ್ದರಿಂದ ಭಗವಂತನ ಆರಾಧನಾಕ್ರಮವನ್ನು ಬಿಟ್ಟು ಕೇವಲ ಒಬ್ಬ ವ್ಯಕ್ತಿಯು ತನ್ನ ಸ್ವಾರ್ಥಕ್ಕಾಗಿ ಮಾಡುವ ಜಪ, ತಪ, ಪೂಜೆಗಳೆಲ್ಲವೂ ವ್ಯರ್ಥ. 'ಸಕಲ ಗ್ರಹಬಲ ನೀನೇ ಸರಸಿಜಾಕ್ಷ' ಎಂಬಂತೆ ಎಲ್ಲ ಗ್ರಹಗಳ ಅಂತರ್ಯಾಮಿಯಾಗಿರುವ ಭಾರತೀರಮಣಮುಖ್ಯ-ಪ್ರಾಣಾಂತರ್ಗತನಾದ ಸಾಕ್ಷಾತ್ ಲಕ್ಷ್ಮೀನಾರಾಯಣನನ್ನು ನಿಷ್ಕಾಮ ಭಕ್ತಿಯಿಂದ 'ಒಂದು ದಳ ಶ್ರೀತುಳಸಿ ಬಿಂದು ಗಂಗೋದಕ'ದಿಂದ ಯಥಾಮತಿಯಾಗಿ ಪೂಜಿಸಿದರೂ ಸಹ ಶ್ರೀಹರಿಯು ನಮ್ಮ ಕಷ್ಟಗಳನ್ನು ದೂರಮಾಡುತ್ತಾನೆ. ಇಲ್ಲಿ ದೈವಪ್ರೇರಣೆಯಿಂದ ಜಾತಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಶಾಶ್ವತ ಪರಿಹಾರಗಳನ್ನು ಮಾಡಿಸಲಾಗು-ತ್ತದೆ. ಸರ್ವೇಂದ್ರಿಯಪ್ರೇರಕನಾದ ಶ್ರೀಹರಿಯ ಆಜ್ಞೆಯಿಂದಲೇ ಇಲ್ಲಿ ಫಲ ಹೇಳ-ಲಾಗುತ್ತದೆ. ಜೀವನದಲ್ಲಿ ನೊಂದಿರುವ ಯಾವುದೇ ವ್ಯಕ್ತಿಯು ಯಾವುದೇ ಊರಿನಲ್ಲಿರಲಿ ಅವರು ಹರಿವಾಯುಗುರುಗಳ ಭಕ್ತರಾಗಿದ್ದಲ್ಲಿ ಅವರಿಗೆ ಅನಾನುಕೂಲವಿದ್ದ ಪಕ್ಷದಲ್ಲಿ ನಾವೇ ಸ್ವತಃ ಅವರ ಜಾಗಕ್ಕೆ ಹೋಗಿ ದೈವಸಂಕಲ್ಪದಿಂದ ದೋಷಪರಿಹಾರ ಮಾಡಿಸುವ ಇಚ್ಛೆಯನ್ನು ಹೊಂದಿದ್ದೇವೆ. ಪರಿಹಾರಕ್ಕಾಗಿ ಮುಖತಃ ಭೇಟಿಮಾಡಿ ಅಥವಾ ಪತ್ರಮುಖೇನ ಜಾತಕ ಕಳುಹಿಸಿಕೊಡಬಹುದು.

ಒಂದು ಪ್ರಶ್ನೆಗೆ 30 ರೂ., ಎರಡು ಪ್ರಶ್ನೆಗೆ 50 ರೂ. ಹಾಗೂ ಮೂರು ಪ್ರಶ್ನೆಗಳಿಗೆ 60 ರೂ.ಗಳನ್ನು ಸ್ಟಾಂಪ್ ಲಗತ್ತಿಸಿದ ಸ್ವ-ವಿಳಾಸವಿರುವ ಅಂಚೆ ಲಕೋಟೆಯೊಂದಿಗೆ ''ವ್ಯವಸ್ಥಾಪಕರು'' ಎಂದು ಬರೆದು ಕೆಳಗಿನ ವಿಳಾಸಕ್ಕೆ ಮನಿ ಆರ್ಡರ್ ಮಾಡಬೇಕು.

**ಮಾಧ್ವಮಂದಿರ ಜ್ಯೋತಿಷ್ಯಾಲಯ ಮತ್ತು ಧಾರ್ಮಿಕ ಕೇಂದ್ರ**
**ಟಿ.ಆರ್. ಮಾಧವಾಚಾರ್**
**ಜ್ಯೋತಿಷ್ಕರು ಮತ್ತು ಪುರೋಹಿತರು**
ನಂ. 149, 'ಕಾನೀನ ನಿಲಯ', 5ನೇ ಅಡ್ಡರಸ್ತೆ, ಆರ್.ಕೆ. ಬಡಾವಣೆ
ಪದ್ಮನಾಭನಗರ, ಬೆಂಗಳೂರು
**ದೂರವಾಣಿ : 080-65351688, ಮೊಬೈಲ್ : 98444 75429**




ನಿಮ್ಮ ತರ್ಕಕ್ಕಾಗಿ

ಸಮಾಜದಲ್ಲಿ ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಆಗುತ್ತಿರುವ ಬದಲಾವಣೆಗಳನ್ನು ಕುರಿತ ಲೇಖನಗಳ ಬಗೆಗಿನ ಒಂದು ಇಣುಕುನೋಟ ಇದಾಗಿದೆ. ಇದನ್ನು ವಿಮರ್ಶಿಸುವ, ಪರಾಂಬರಿಸುವ ಯುಕ್ತಿ ನಿಮ್ಮದಾಗಿದೆ. ಈ ಲೇಖನವು ದಿನಪತ್ರಿಕೆಗಳಲ್ಲಿ, ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳ ಆಧಾರಿತವಾಗಿದೆ.

– ಸಂ.

# ಆರ್ಯ-ದ್ರಾವಿಡ ಯುದ್ಧಕ್ಕೆ ಯಾವ ದಾಖಲೆಯಿದೆ?

ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿಯವರು ಇಂದು ಶ್ರೀರಾಮಚಂದ್ರನ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿರುವ ಹಿನ್ನೆಲೆಯಲ್ಲಿ ೫೦ ವರ್ಷಗಳಷ್ಟು ಹಿಂದೆ 'ಪೆರಿಯಾರ್' ಎಂದು ಕರೆಯುವ ಎ.ವಿ. ರಾಮಸ್ವಾಮಿ ನಾಯ್ಕರ್‌ರಿಂದ ಆರಂಭವಾದ ದ್ರಾವಿಡ ಚಳುವಳಿಯೇ ಮೂಲವಾಗಿದೆ. ೫೦ ರ ದಶಕದಲ್ಲಿ ಪೆರಿಯಾರ್ ತಮಿಳುನಾಡಿನಲ್ಲಿ ಪ್ರಬಲವಾದ ದ್ರಾವಿಡ ಚಳುವಳಿಯನ್ನು ಆರಂಭಿಸಿದಾಗ ಅದು **ಮುಖ್ಯವಾಗಿ ಬ್ರಾಹ್ಮಣ ವಿರೋಧಿ ಚಳುವಳಿಯಾಗಿತ್ತು.** ದ್ರಾವಿಡರು ತಮಿಳುನಾಡಿನ ಮೂಲನಿವಾಸಿಗಳಾಗಿದ್ದರು. ಹತ್ತಾರು ಸಾವಿರ ವರ್ಷಗಳಷ್ಟು ಹಿಂದೆ ಹೊರಗಿನಿಂದ ಬಂದ ಆರ್ಯರು ದ್ರಾವಿಡರೊಂದಿಗೆ ಯುದ್ಧ ಮಾಡಿ ಮೂಲದ್ರಾವಿಡ ಸಂಸ್ಕೃತಿಯನ್ನು ನಾಶ ಮಾಡಿದರೆಂಬ **ಆಧಾರವಿಲ್ಲದ ಚಾರಿತ್ರಿಕ ಪರಿಕಲ್ಪನೆಯನ್ನು ಮುಂದಿಟ್ಟು** ದ್ರಾವಿಡ ಚಳುವಳಿ ಆರಂಭವಾಯಿತು. **ಬ್ರಾಹ್ಮಣರೆಲ್ಲ ಆರ್ಯರು, ಶ್ರೀರಾಮಚಂದ್ರ ಆರ್ಯರ ದೇವರೆಂದು, ಶ್ರೀರಾಮ ಮತ್ತು ಬ್ರಾಹ್ಮಣರ ವಿರುದ್ಧ ಚಳುವಳಿ ನಡೆಸುವಾಗ 'ದ್ರಾವಿಡ ಕಳಗಂ' ಎಂಬ ಪಕ್ಷವನ್ನು ಪೆರಿಯಾರ್ ಹುಟ್ಟುಹಾಕಿದರು.** ಹೆಚ್ಚಿನ ಸಂಖ್ಯೆಯಲ್ಲಿರುವ ಹಿಂದುಳಿದ ನಾಯ್ಕರ್ ಜನಾಂಗದಿಂದ ಆರಂಭವಾದ ಈ ಚಳುವಳಿಗೆ ಇನ್ನುಳಿದ ಹಲವು ಹಿಂದುಳಿದ ಜನಾಂಗಗಳು ಸೇರಿಕೊಂಡವು. ಅಂದಿನ ಚಳುವಳಿ ಎಷ್ಟು ಪ್ರಬಲವಾಯಿತೆಂದರೆ, ಆಗಿನ ಮಂದ್ರಾಸ್ ರಾಜ್ಯದಲ್ಲಿ ಹಲವಾರು ಕಡೆ **ಬ್ರಾಹ್ಮಣರ ಜುಟ್ಟು, ಜನಿವಾರಗಳನ್ನು ಕತ್ತರಿಸುವುದೂ, ಅವರ ಕಚ್ಚೆಗಳನ್ನು ಬಿಚ್ಚಿ ಸಾರ್ವಜನಿಕವಾಗಿ ಅವಮಾನಿಸಿದ ಸಾವಿರಾರು ಪ್ರಸಂಗಗಳು ನಡೆದುಹೋದವು.** ತಮಿಳುನಾಡು ಪೂರ್ತಿಯಾಗಿ ದ್ರಾವಿಡ ದೇಶ ಆಗಿರಬೇಕು ಮತ್ತು ಅದು ಭಾರತದಿಂದ ಬೇರೆಯದೇ ದೇಶವಾಗಿರಬೇಕೆಂಬ ಕ್ರಾಂತಿ





ಆರಂಭವಾಯಿತು. ಈ ಚಳುವಳಿಯಲ್ಲಿ ಸಾವಿರಾರು ನಾಯ್ಕರ್ ಜನಾಂಗದ ಪ್ರಮುಖರೂ ಸೇರಿಕೊಂಡರು. ಅವರಲ್ಲಿ ಮುಂದೆ ತಮಿಳುನಾಡು ಮುಖ್ಯಮಂತ್ರಿಯಾದ ಅಣ್ಣಾ ದುರೈ ನಾಯಕರೆನಿಸಿದರು.

ಆದರೆ ಪ್ರಮುಖವಾಗಿ **ಬ್ರಾಹ್ಮಣ ವಿರೋಧಿ ಚಳುವಳಿಯಾಗಿದ್ದ ಈ ದ್ರಾವಿಡ ಕಳಗಂ ಪಕ್ಷದ ನೇತಾರರಾಗಿದ್ದ ಪೆರಿಯಾರ್ ಒಬ್ಬ ಬ್ರಾಹ್ಮಣ ಹುಡುಗಿಯ ಪ್ರೇಮ ಪಾಶದಲ್ಲಿ ಸಿಲುಕಿ ಮೊದಲ ಪತ್ನಿಯನ್ನು ತಿರಸ್ಕರಿಸಿ ಆ ಹುಡುಗಿಯನ್ನು ವಿವಾಹವಾದದ್ದು** ಮುಂದೆ ಇದೇ ಪಕ್ಷದ ಒಡಕಿಗೆ ಕಾರಣವಾಯಿತು. ಪೆರಿಯಾರ್‌ರ ಪ್ರಮುಖ ಶಿಷ್ಯರಾಗಿದ್ದ ಅಣ್ಣಾ ದುರೈ ಈ ವಿಷಯದಲ್ಲಿ ತಮ್ಮ ಗುರುವನ್ನು ವಿರೋಧಿಸಿ ದ್ರಾವಿಡ ಕಳಗಂ ಪಕ್ಷದಿಂದ ಹೊರಬಂದು ದ್ರಾವಿಡ ಮುನ್ನೇತ್ರ ಕಳಗಂ - ಡಿ.ಎಂ.ಕೆ. ಪಕ್ಷ ಸ್ಥಾಪಿಸಿದರು. ಇದೇ ಡಿ.ಎಂ.ಕೆ. ಪಕ್ಷದ ವತಿಯಿಂದ ಅಣ್ಣಾ ದುರೈ ಆಯ್ಕೆಯಾಗಿ ತಮಿಳುನಾಡಿನ ಮುಖ್ಯಮಂತ್ರಿ ಆದರು. ಅಣ್ಣಾ ದುರೈ ಅವರ ಪಕ್ಕಾ ಶಿಷ್ಯರಾಗಿ ಎಂ.ಜಿ. ರಾಮಚಂದ್ರನ್ ಮತ್ತು ಕರುಣಾನಿಧಿ ಬೆಳೆದುಬಂದರು.

ಪೆರಿಯಾರ್ ಇ.ವಿ. ರಾಮಸ್ವಾಮಿ ನಾಯ್ಕರ್ ಅವರು ತಮ್ಮ ಚಳುವಳಿಯನ್ನು ಮುಂದುವರೆಸಿ ೬೦ ರ ದಶಕದಲ್ಲಿ ಒಂದು ದಿನ **ಶ್ರೀರಾಮನ ಫೋಟೋ ಒಂದಕ್ಕೆ ಚಪ್ಪಲಿಹಾರ ಹಾಕಿ ಅಂದಿನ ಮಂದ್ರಾಸ್‌ನ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಿದಾಗ ಶ್ರೀರಾಮನನ್ನು ದೇವರೆಂದು ಪೂಜಿಸುವ ಸಾವಿರಾರು ಜನ ಬೆಚ್ಚಿಬಿದ್ದರು.** ಶ್ರೀರಾಮನ ಚಿತ್ರಕ್ಕೆ ಚಪ್ಪಲಿಹಾರ ಹಾಕಿದ ಈ ಮೆರವಣಿಗೆ ದೃಶ್ಯವನ್ನು ಅಂದಿನ ಟೈಮ್ಸ್ ಆಫ್ ಇಂಡಿಯಾದ ವಾರಪತ್ರಿಕೆ 'ಇಲ್ಲಸ್ಟ್ರೇಟೆಡ್ ವೀಕ್ಲಿ'ಯಲ್ಲಿ ಪ್ರಕಟವಾಗುತ್ತಿದ್ದಂತೆ ಪೋಲೀಸರು ಪತ್ರಿಕೆಯ ಹಲವಾರು ಪ್ರತಿಗಳನ್ನು ಮುಟ್ಟುಗೋಲು ಹಾಕಿಕೊಂಡರು. ಆದರೆ ದೂರು ದಾಖಲಾಗಿದ್ದರೂ **ಪೋಲೀಸರು ಪೆರಿಯಾರ್ ಅವರನ್ನು ಬಂಧಿಸುವ ಧೈರ್ಯ ಮಾಡಲಿಲ್ಲ.**

ಅಣ್ಣಾ ದುರೈ ಅಕಾಲ ಮರಣದಿಂದ ಅವರ ಶಿಷ್ಯ ಎಂ.ಜಿ.ಆರ್. ತಮಿಳುನಾಡಿನ ಮುಖ್ಯಮಂತ್ರಿ ಆದಾಗ ಆಗ ಅವರ ಸಿನೆಮಾ ಗೆಳತಿಯಾಗಿದ್ದ ಜಯಲಲಿತಾ ರಾಜಕೀಯ ರಂಗ ಪ್ರವೇಶ ಮಾಡುವಂತಾಯಿತು. ಮುಂದೆ ಎಂ.ಜಿ.ಆರ್. ನಿಧನಾನಂತರ ಡಿ.ಎಂ.ಕೆ. ಯಿಂದ ಬೇರೆಯಾಗಿ ಎಐಎಡಿಎಂಕೆ ಪಕ್ಷವನ್ನು ಜಯಲಲಿತಾ ಆರಂಭಿಸಿ ಬೆಳೆಸಿದ್ದು ಇತಿಹಾಸ.

ನಂತರದ ದಿನಗಳಲ್ಲಿ ಕರುಣಾನಿಧಿ ಡಿ.ಎಂ.ಕೆ. ಪಕ್ಷವನ್ನು ಪ್ರಬಲವಾಗಿ ಬೆಳೆಸಿದ್ದು, ಜಯಲಲಿತಾ ಅವರನ್ನು ರಾಜಕೀಯ ಕಡುವೈರಿಯಾಗಿ ಕಂಡದ್ದು, ಶಾಸನಸಭೆಯಲ್ಲಿ ಜಯಲಲಿತಾಳ ವಸ್ತ್ರಾಪಹರಣಕ್ಕೆ ಪ್ರಯತ್ನ ನಡೆದಿದ್ದು, ಮುಂದೆ ಜಯಲಲಿತಾರ ತಪ್ಪುಗಳನ್ನೇ ದೊಡ್ಡದು ಮಾಡಿ ಜೈಲಿಗೆ ಕಳಿಸಿದ್ದು - ಇವೆಲ್ಲವೂ ನಡೆಯಲು **ಜಯಲಲಿತಾ ಬ್ರಾಹ್ಮಣರೆಂಬ ಕಾರಣವೇ ಪ್ರಮುಖವಾಯಿತು.** ಮುಂದೆ ರಾಜೀವ್ ಗಾಂಧಿ ಹತ್ಯೆಯ

ನಂತರ ನಡೆದ ಚುನಾವಣೆಯಲ್ಲಿ ಡಿ.ಎಂ.ಕೆ. ಪಕ್ಷದಿಂದ ಕರುಣಾನಿಧಿ ಒಬ್ಬರೇ ಆಯ್ಕೆಯಾಗಿ ಉಳಿದೆಲ್ಲರೂ ಸೋತುಹೋದರು. ನಂತರ ಅಧಿಕಾರ ಜಯಲಲಿತಾ ಹಿಡಿದಿದ್ದು ತಮಿಳು-ನಾಡಿನ ರಾಜಕೀಯದ ತಿರುವು-ಮುರುವುಗಳಲ್ಲೊಂದಾಗಿ ಮತ್ತೆ ಕರುಣಾನಿಧಿ ಜಯಲಲಿತಾರನ್ನು ಸ್ಥಾನಪಲ್ಲಟಗೊಳಿಸಿದ್ದಾರೆ.

ಶ್ರೀರಾಮನ ಬಗ್ಗೆ ಬರೆಯುವಾಗ ಇಡೀ ಉತ್ತರ ಭಾರತದಲ್ಲಿ ಸಂತ ತುಳಸೀದಾಸರು ಬಹುದೊಡ್ಡ ಧಾರ್ಮಿಕ ಚಳುವಳಿಯನ್ನೇ ನಡೆಸಿದ ಕಾರಣ, ಇಂದು ಶ್ರೀರಾಮನ ಕೋಟಿ ಕೋಟಿ ಭಕ್ತವೃಂದವೇ ಬೆಳೆದಿದೆ. ಬೆಳಗ್ಗೆ ಏಳುತ್ತ 'ರಾಮ್ ರಾಮ್', ಪರಿಚಿತರನ್ನು ಭೇಟಿ ಆದಾಗ 'ರಾಮ್ ರಾಮ್', ಜನ ಸತ್ತಾಗ 'ರಾಮ ನಾಮ ಸತ್ಯ ಹೈ' ಎಂಬ ಘೋಷಣೆ-ಯೊಂದಿಗೆ ಶವಸಂಸ್ಕಾರ, ಮನೆಯಲ್ಲಿ ಎಲ್ಲರ ಹೆಸರಿನ ಮುಂದೆಯೂ ರಾಮನ ಹೆಸರೇ - ಚಂದಿರಾಮ್, ಹಳದೀರಾಮ್, ಲಾಲಾರಾಮ್, ವಸ್ತಿರಾಮ್, ರಘುರಾಮ್..... ಮುಂತಾಗಿ. ಇಂಥ ಕೋಟಿ ಕೋಟಿ ಭಕ್ತವೃಂದವನ್ನು ಬೆಳಿಸಿದ ಸಂತ ತುಳಸೀದಾಸ್ ಧನ್ಯ. ಆದರೆ ಅದೇ ದಕ್ಷಿಣದ ತಮಿಳುನಾಡಿನಲ್ಲಿ ಶ್ರೀರಾಮನ ಫೋಟೋಗೆ ಚಪ್ಪಲಿ ಹಾರ ಹಾಕಿ ಮೆರವಣಿಗೆ ಮಾಡುವ ಚಳುವಳಿ ನಡೆದಾಗ ಶ್ರೀರಾಮನನ್ನು ದೇವರೆಂದು ಪೂಜಿಸುವ ಕೋಟಿಗಟ್ಟಲೆ ಭಕ್ತವೃಂದಕ್ಕೆ ಎಂತಹ ಘಾಸಿ! ಘಾಸಿ ಆಗಬೇಕೆಂಬ ಉದ್ದೇಶದಿಂದಲೇ ಇಂತಹ ಚಳುವಳಿ ನಡೆದಿದೆಯೇ?

ತಮಿಳುನಾಡಿನ ರಾಮೇಶ್ವರದಿಂದ ಶ್ರೀಲಂಕಾದ ತಲೈಮನ್ನಾರ್‌ವರೆಗಿನ ೩೦ ಕಿ.ಮೀ. ವರೆಗಿನ ಸಮುದ್ರದಾಳದಲ್ಲಿ ಇರುವ ಸಣ್ಣ ಗುಡ್ಡಗಳ ಸಾಲನ್ನು 'ಶ್ರೀರಾಮಚಂದ್ರ ಕಟ್ಟಿದ ರಾಮಸೇತು'ವೆಂದು ಇಡೀ ಹಿಂದೂ ಜನಾಂಗ ನಂಬಿರುವುದರಲ್ಲಿ ತಪ್ಪೇನು ಎಂದು ಕೇಳಬೇಕಾಗುತ್ತದೆ. ಸಮುದ್ರದಲ್ಲಿ ಮುಳುಗಿರುವ ಈ ಗುಡ್ಡಗಳ ಸಾಲುಗಳಿಂದ ಈ ಪ್ರದೇಶದಲ್ಲಿ ಭಾರಿ ಹಡಗುಗಳ ಸಂಚಾರಕ್ಕೆ ಅಡ್ಡಿಯಾಗಿರುವುದು ನಿಜ ಮತ್ತು ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿಯಿಂದ ಭಾರ ಹಡಗುಗಳು ಚಲಿಸುವಾಗ ಶ್ರೀಲಂಕಾವನ್ನು ಸುತ್ತುವರೆದು ಹೋಗಬೇಕಾಗುತ್ತದೆ. ಹಾಗೆ ಮಾಡುವುದರಿಂದ ಭಾರೀ ನಷ್ಟ ಅಥವಾ ಅನಾಹುತ ಏನೂ ಆಗುವುದಿಲ್ಲ. ಈ ಹಿಂದೆ ಬ್ರಿಟಿಷರು ಸಮುದ್ರದಲ್ಲಿನ ಈ ರಾಮಸೇತು-ವನ್ನು 'ಆ್ಯಡಮ್ಸ್ ಬ್ರಿಡ್ಜ್' ಎಂದು ಕರೆದಿದ್ದರು. ಅವರೂ ಈ ರಾಮಸೇತುವನ್ನು ಕತ್ತರಿಸುವ ಬಗ್ಗೆ ಸರ್ವೇ ನಡೆಸಿ ಆರ್ಥಿಕವಾಗಿ ಇದು ಲಾಭದಾಯಕವಲ್ಲ ಎಂದು ಕೈಬಿಟ್ಟಿದ್ದರು.

ಈಗಿನ ಕೇಂದ್ರ ಸರಕಾರ ಈ ಬಗ್ಗೆ ಕಾರ್ಯಪ್ರವೃತ್ತವಾಗಿ ೨,೦೦೦ ಕೋಟಿಗೂ ಮೀರಿದ ಖರ್ಚಿನ ಈ ಕೆಲಸಮಾಡುವುದರಿಂದ ನಮ್ಮ ದೇಶಕ್ಕೆ ಭಾರಿ ಅನುಕೂಲವೇನಿಲ್ಲ. ಇಷ್ಟೊಂದು ಖರ್ಚಿನ ಬಾಬ್ತಿನಿಂದ ನಮ್ಮ ದೇಶಕ್ಕೆ ಆಗುವ ಲಾಭವೇನು ಎಂದು ಕೇಳಬೇಕಾಗುತ್ತದೆ. ಆದರೆ ರಾಮಸೇತುವಿನ ಈ ಭಾಗವನ್ನು ಕತ್ತರಿಸಿ ತೆಗೆಯುವುದರಿಂದ ಕೋಟಿ ಕೋಟಿ ಜನ ಉದ್ಯೋಗ ಕಳೆದುಕೊಂಡು ಚಳವಳಿಗಿಳಿಯುವುದು ನಿಜವಾಗಿದೆ.





ಭಾರ ಹಡಗುಗಳು ಶ್ರೀಲಂಕಾವನ್ನು ಸುತ್ತುವರಿದು ಹೋಗುವುದರಲ್ಲಿ ಹೆಚ್ಚಿನ ನಷ್ಟವೇನಿಲ್ಲ. ಅನಾನುಕೂಲವೆಂದರೆ **ಈ ರಾಮಸೇತುವಿನಲ್ಲಿ ೨ ಕಿಲೋಮೀಟರ್ ದೂರದ ಭಾಗ-ವನ್ನು ಕತ್ತರಿಸಿ ತೆಗೆಯುವುದರಿಂದ ಭಾರತ ಮತ್ತು ಶ್ರೀಲಂಕಾಗೆ ಸೇರಿದ ಈ ಸಮುದ್ರವು ಅಂತಾರಾಷ್ಟ್ರೀಯ ಸಮುದ್ರವಾಗಿ ಮಾರ್ಪಡುತ್ತದೆ.** ಇದರಿಂದ ಬೇರೆ ದೇಶದ ಯುದ್ಧ ಹಡಗುಗಳು ಸಂಚರಿಸಿ ಅಥವಾ ಇಲ್ಲಿಯೇ ನೆಲೆನಿಂತು ಭಾರತದ ಭದ್ರತೆಗೆ ಅಪಾಯ ಉಂಟುಮಾಡಬಹುದು. **ಈಚೆಗೆ ಅಮೆರಿಕದ ಯುದ್ಧನೌಕೆ ಯುಎಸ್‌ಎಸ್ 'ನಿಮಿಟ್ಸ್' ಈ ಪ್ರದೇಶಕ್ಕೆ ಬಂದುಹೋಗಿದ್ದರ ಹಿನ್ನೆಲೆಯಲ್ಲಿ ಈ ಸಂಶಯ ಎದ್ದುಕಾಣುತ್ತದೆ.**

ಬಿಜೆಪಿ ಮತ್ತು ಸಂಘಪರಿವಾರದವರು ಶ್ರೀರಾಮಸೇತುವನ್ನು ಕತ್ತರಿಸುವ ಈ ಕಾರ್ಯಕ್ರಮವನ್ನು ವಿರೋಧಿಸುತ್ತಿರುವುದು ಸಹಜವಾಗಿದೆ. ಇದರಿಂದ ಜನರ ಭಾವನೆ-ಗಳನ್ನು ತಿರುಗಿಸಿ ಅವರು ಅಧಿಕಾರಕ್ಕೆ ಬರುವ ಹುನ್ನಾರ ನಡೆಸಿದ್ದಾರೆನ್ನುವುದರಲ್ಲಿ ಸತ್ಯಾಂಶ-ವಿರಬಹುದು. ಆದರೆ ಕರುಣಾನಿಧಿ ಪದೇ ಪದೇ ಶ್ರೀರಾಮನ ಬಗ್ಗೆ ಅವಹೇಳನ ಮಾಡುತ್ತಿರು-ವುದಕ್ಕೆ ಅವರ ರಾಜಕೀಯ ಮೂಲಗುರು ಪೆರಿಯಾರ್ ವಿಚಾರವೇ ಕಾರಣವಾಗಿದೆ.

ಆರ್ಯರು-ದ್ರಾವಿಡರ ಬಗೆಗಿನ ವಿವಾದವೇನೇ ಇರಲಿ. ಆದರೆ ಶ್ರೀರಾಮನ ಚಿತ್ರಕ್ಕೆ ಚಪ್ಪಲಿ ಹಾರ ಹಾಕುವ ಪ್ರವೃತ್ತಿಯನ್ನು 'ವಿಕೃತ ಮನಸ್ಸು' ಎಂದು ಕರೆಯಬೇಕಾಗುತ್ತದೆ. ಅದೇ ಶ್ರೀರಾಮನ ಬಗೆಗಿನ ಕರುಣಾನಿಧಿ ಹೇಳಿಕೆಗಳನ್ನು ವಿಕೃತ ಎಂದು ಕರೆಯಲಾಗುತ್ತಿಲ್ಲ. ಬದಲು ಆದರೆ ಅವರ ಹೇಳಿಕೆಗಳಿಂದ ಕೋಟಿ ಕೋಟಿ ರಾಮಭಕ್ತರ ಭಾವನೆಗಳಿಗೆ ಘಾಸಿಯಾಗುತ್ತಿರುವುದಾದರೆ ಅವರ ಹೇಳಿಕೆಗಳು ಅವಿವೇಕತನದಿಂದ ಕೂಡಿದೆ ಎಂದು ಹೇಳದೇ ವಿಧಿಯಲ್ಲ.

ಶ್ರೀರಾಮ ಒಂದು ಕಥೆಯ ನಾಯಕನಷ್ಟೆ. ಆದರೆ ಐತಿಹಾಸಿಕ ವ್ಯಕ್ತಿ ಅಲ್ಲ. ಹಾಗೆ ಶ್ರೀರಾಮಚಂದ್ರ ಐತಿಹಾಸಿಕ ವ್ಯಕ್ತಿ ಎಂದು ತೋರಿಸಿಕೊಡಲು ಕರುಣಾನಿಧಿ ಸವಾಲೆಸೆ-ದಿದ್ದಾರೆ. ಆದರೆ **ಹತ್ತಾರು ಸಾವಿರ ವರ್ಷಗಳ ಹಿಂದೆ ಆರ್ಯ ಜನಾಂಗದವರು ಹೊರಗಿನಿಂದ ಬಂದು ಮೂಲನಿವಾಸಿಗಳಾದ ದ್ರಾವಿಡರನ್ನು ಯುದ್ಧಮಾಡಿ ಸೋಲಿಸಿ-ದರೆಂಬ ಕಪೋಲಕಲ್ಪಿತ ವಿಚಾರಕ್ಕೆ ಯಾವ ಐತಿಹಾಸಿಕ ದಾಖಲೆ ಇದೆ ಎಂಬುದನ್ನು ಕರುಣಾನಿಧಿ ತೋರಿಸಿಕೊಡಲಿ.**

**ಕೃಪೆ : ಕೃಷ್ಣಮೂರ್ತಿ ಕೌಶಿಕ್,** ವಿಜಯಕರ್ನಾಟಕ

ಚಂದಾದಾರರಾಗಬಯಸುವವರು ಮಂತ್ರಾಲಯ ಹಾಗೂ
ಬೆಂಗಳೂರು ಕಾರ್ಯಾಲಯಗಳಿಗೆ ಹಣ ಕಳುಹಿಸಿ ಚಂದಾದಾರರಾಗಬಹುದು.
ಪತ್ರಿಕೆ ವಿತರಣೆಯ ಬಗ್ಗೆ ಯಾವುದೇ ದೂರುಗಳಿದ್ದರೂ
ಮಂತ್ರಾಲಯದ ವಿಳಾಸವನ್ನು ಸಂಪರ್ಕಿಸಿ.
ವಿಳಾಸಗಳು ಮುಖಪುಟದಲ್ಲಿವೆ.

**ಲೇಖನಾಂಕ**

# ಜೀವನ ಸಂಗ್ರಾಮದಲ್ಲಿ ಶ್ರುತಿ-ಸ್ಮೃತಿ ಮಾರ್ಗದರ್ಶನ

■ **ಕೋಟೇಶ್ವರ ಸೂರ್ಯನಾರಾಯಣರಾವ್**
'ಮಹಾಲಕ್ಷ್ಮಿ ಕೃಪಾ', ೨೫/೧, ಡಿ.ವಿ.ಜಿ. ರಸ್ತೆ, ಬಸವನಗುಡಿ, ಬೆಂಗಳೂರು - ೦೪

ಶ್ರುತಿ-ಸ್ಮೃತಿಯ ಉಕ್ತಿಗಳು, ಭಗವಂತನು ಜನಸಾಮಾನ್ಯರಿಗೆ ನೀಡಿದ ಆಣಿಮುತ್ತು-ಗಳ ಭಂಡಾರ. ಸಾಮಾನ್ಯರು ತಮ್ಮ ದೈನಂದಿನ ಬದುಕಿನಲ್ಲಿ ಸುಲಭವಾಗಿ ಆಚರಿಸಲು ಯೋಗ್ಯವಾದ ಪಥದರ್ಶನದ ಸೂಚಕ.

ಶ್ರುತಿ-ಸ್ಮೃತಿಗಳ ಶ್ಲೋಕಗಳಲ್ಲಿ ಆಚರಿಸಲು ಕಷ್ಟಸಾಧ್ಯವಾದ - ಕಬ್ಬಿಣದ ಕಡಲೆಗಳಿಲ್ಲದೆ - ಅತ್ಯಂತ ಸುಲಭವಾಗಿ ಅನುಷ್ಠಾನಗೊಳಿಸಬಲ್ಲ ಮಾರ್ಗಸೂಚಿ-ಗಳಿರುವುದು ಗಮನಾರ್ಹ. ನಮ್ಮ ದೈನಂದಿನ ಬದುಕಿನಲ್ಲಿ ಅದನ್ನು ಆಚರಿಸಿದರೆ ಸಾರ್ಥಕತೆಯ ಅನುಭವ ನಮ್ಮದಾಗುತ್ತದೆ.

**"ಶ್ರುತಿ ಸ್ಮೃತಿ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ ।**
**ಸಮ್ಯತ್ ಸಂಕಲ್ಪಜಃ ಕಾಮೋ ಧರ್ಮಮೂಲಮಿದಂ ಸ್ಮೃತಮ್ ।।"**

ಶ್ರುತಿ, ಸ್ಮೃತಿ, ಸದಾಚಾರ, ಆತ್ಮಸಾಕ್ಷಿಗೆ ಹಿತವಾದುದು, ಒಳ್ಳೆಯ ಸಂಕಲ್ಪದ ಇಚ್ಛೆ, ಇವೆಲ್ಲವೂ - ಧರ್ಮದ ಬೇರು ಎನಿಸಿಕೊಂಡಿದೆ.

**"ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ ।**
**ಹ್ರೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ।।"**

ಧೈರ್ಯ, ತಾಳ್ಮೆ, ಭಗವಂತನಲ್ಲಿ ಸಮರ್ಪಣಾಭಾವ, ಕಳ್ಳತನಮಾಡದಿರುವುದು, ಶುದ್ಧತೆ, ಇಂದ್ರಿಯನಿಗ್ರಹ, ಲಜ್ಜೆ, ವಿದ್ಯೆ, ಸತ್ಯ, ಕ್ರೋಧವಿಲ್ಲದಿರುವಿಕೆ ಇವು ಹತ್ತು ಧರ್ಮದ ಹೆಜ್ಜೆಗಳು.

**"ಪಾದಾಭ್ಯಾಂ ನ ಸ್ಪರ್ಶೇದಗ್ನಿಂ ನ ಗುರುಂ ಬ್ರಾಹ್ಮಣಂ ತಥಾ ।**
**ನ ಚ ಗಾಂ ನ ಕುಮಾರೀಂ ಚ ನ ಶಿಶುಂ ನ ಚ ದೇವತಾಮ್ ।।"**

ಅಗ್ನಿಯನ್ನು, ಗುರುಗಳನ್ನು, ವಿಪ್ರನನ್ನು, ಗೋವನ್ನು, ಕುಮಾರಿಯನ್ನು, ಮಗುವನ್ನು, ದೇವತೆಯನ್ನು ಕಾಲುಗಳಿಂದ ಸ್ಪರ್ಶಿಸಬಾರದು.

**"ಶ್ರುತಿ ಸ್ಮೃತೀ ಚಕ್ಷುಷೀ ದ್ವೇ ದ್ವಿಜಾನಾಂ ನ್ಯಾಯವರ್ತ್ಮನಾಮ್ ।**
**ಮಾರ್ಗಮುತ್ಕ್ರಾಂತಮಾಕ್ರಮ್ಯ ಪ್ರಪತಂತಿ ಪಥಶ್ಚುತಾಃ ।।"**





ಶ್ರುತಿ ಹಾಗೂ ಸ್ಮೃತಿಗಳೆರಡು ನ್ಯಾಯಮಾರ್ಗದಲ್ಲಿ ನಡೆಯುವ ಬ್ರಾಹ್ಮಣರಿಗೆ ಮಾರ್ಗದರ್ಶಿಗಳು. ಮಾರ್ಗ ತಪ್ಪಿ ನಡೆಯುವವರು ಅಧಃಪತನ ಹೊಂದುತ್ತಾರೆ.

**"ಸತ್ಯಾಮಾಚಮಾನಾಶಕ್ತೌ ಅಭಾವೇ ಸಲಿಲಸ್ಯ ಚ ।**
**ಪೂರ್ವೋಕ್ತೇಷು ನಿಮಿತ್ತೇಷು ದಕ್ಷಿಣ ಶ್ರವಣಂ ಸ್ಪೃಶೇತ್ ।।"**

ಆಚಮನ ಮಾಡಲು ಅಶಕ್ತನಾದರೆ, ನೀರೂ ಇಲ್ಲವಾದರೆ ಆಚಮನ ಮಾಡಬೇಕಾದ ಸಂದರ್ಭದಲ್ಲಿ ಬಲಗಿವಿಯನ್ನು ಮುಚ್ಚಿಕೊಂಡು ಅಮೃತಬೀಜವನ್ನು ಪಠಿಸಬಹುದು.

**"ಯಜ್ಞೋಪವೀತ ವದ್ಧಾರ್ಯಂ ವಾಸಸ್ಸರ್ವತ್ರ ಕರ್ಮಸು ।**
**ವಂದನೇ ತರ್ಪಣೇ ಶ್ರಾದ್ಧೇ ಸ್ನಾನಕಾಲೇ ಕಟೌ ಧರೇತ್ ।।"**

ಸರ್ವಕರ್ಮಗಳನ್ನು ಮಾಡುವಾಗ ಹೆಗಲಿನ ವಸ್ತ್ರವನ್ನು ಯಜ್ಞೋಪವೀತದಂತೆ ಧರಿಸಬೇಕು. ನಮಸ್ಕಾರ, ತರ್ಪಣ, ಶ್ರಾದ್ಧ, ಸ್ನಾನಮಾಡುವಾಗ ಸೊಂಟಕ್ಕೆ ಕಟ್ಟಬೇಕು.

**"ಆರ್ದ್ರವಾಸಾಸ್ತು ಯಃ ಕುರ್ಯಾತ್ ಜಪ-ಹೋಮ-ಪ್ರತಿಗ್ರಹಾನ್ ।**
**ಸರ್ವಂ ತದ್ರಾಕ್ಷಸಂ ವಿದ್ಯಾತ್ ಬಹಿರ್ಜಾನು ಚ ಯತ್ಕರಮ್ ।।"**

ಒದ್ದೆಬಟ್ಟೆಯುಟ್ಟುಕೊಂಡು ಜಪ, ಹೋಮ, ದಾನ ತೆಗೆದುಕೊಳ್ಳಬಾರದು. ಹಾಗೆ ಮಾಡಿದರೆ ಅದು ತಾಮಸ ಹಾಗೂ ರಾಕ್ಷಸ ವ್ಯವಹಾರವಾಗುತ್ತದೆ ಮತ್ತು ಮೊಣಕಾಲಿನಿಂದ ಹೊರಗೆ ಕೈಯಿಟ್ಟು ಮಾಡಿದ ಕರ್ಮವೂ ತಾಮಸವಾಗುತ್ತದೆ.

**"ಭೋಜನಾಂತೇ ಶತಪಥಂ ಗತ್ವಾ ತಾಂಬೂಲ ಭಕ್ಷಣಮ್ ।**
**ಶಯನಂ ವಾಮಕುಕ್ಷೀತು ಭೈಷಜ್ಯಾತ್ ಕಿಂ ಪ್ರಯೋಜನಮ್ ।।"**

ಉಂಡು ನೂರು ಹೆಜ್ಜೆ ನಡೆ, ತಾಂಬೂಲ ಸವಿ, ಎಡಮಗ್ಗುಲಾಗಿ ಮಲಗುವುದು ಮಾಡಿದರೆ ಔಷಧದ ಉಪಯೋಗವೇ ಬರುವುದಿಲ್ಲ.

**"ವಂದಿತ ಪೂಜಿತೋ ವಿಪ್ರಃ ದುಗ್ಧಾ ಗೌರಿವ ಸೀದತಿ ।**
**ಪುನರಾಪ್ಯಾಯತೇ ಧೇನುಃ ಸತೃಣೈಃ ಸಜಲೈರ್ಯಥಾ ।**
**ಏವಂ ಜಪಶ್ಚ ಹೋಮೈಶ್ಚ ಪುನರಾಪ್ಯಾಯತೇ ದ್ವಿಜಃ ।।"**

ಬೇರೆಯವರಿಂದ ವಂದಿಸಲ್ಪಡುವ ವಿಪ್ರನು ಹಾಲು ಕರೆದ ಗೋವಿನಂತೆ ಸತ್ವಹೀನನಾಗುತ್ತಾನೆ. ನಮಸ್ಕರಿಸಿ ಕೊಂಡಾತನಿಂದ - ನಮಸ್ಕರಿಸುವವನು ಸತ್ವ-ವನ್ನು ಪಡೆಯುತ್ತಾನೆ. ಹುಲ್ಲು - ನೀರು ಸೇವನೆಯಿಂದ ಹಸುವು ಪುಷ್ಟಿಗೊಂಡಂತೆ ಜಪ-ತಪ-ಹೋಮಗಳಿಂದ ಸತ್ವವನ್ನು ಪುನಃ ಗಳಿಸಿಕೊಳ್ಳಬೇಕು.

**(ಮುಂದುವರೆಯುವುದು)**

**ಲೇಖನಾಂಕ**

# ಹಿರಿಯರು ಹಾಕುವ ಹಾದಿ

■ ಜಯರಾಮ ಗರಗ
ವಿದ್ಯಾರ್ಥಿ, ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ

**ಕಿ**ರಿಯರನ್ನು ಯಾವಾಗಲೂ ಸನ್ಮಾರ್ಗದಲ್ಲಿ ನಡೆಸುವುದಕ್ಕೆ ಹಿರಿಯರು ಅನೇಕ ಕಾರ್ಯಗಳನ್ನು ಮಾಡುತ್ತಾರೆ. ಅದರಂತೆ ಸರ್ವೋತ್ತಮನಾದ ಶ್ರೀನಿವಾಸನು ತನ್ನ ವಿವಾಹಕಾಲದಲ್ಲಿ ಬ್ರಹ್ಮದೇವರಿಗೆ ಹೇಳುತ್ತಾನೆ. ದೇವರಿಗೆ ನೈವೇದ್ಯ ಮಾಡಿರದ ಅನ್ನವನ್ನು ಬ್ರಾಹ್ಮಣರಿಗೆ ಹಾಕಬಾರದು. ಎಂದರೆ ಬ್ರಹ್ಮನು ಹೇಳುತ್ತಾನೆ - ಯಾರಿಗೆ ನೈವೇದ್ಯ ಮಾಡಬೇಕು.

ಏಕೆಂದರೆ -

**"ಸರ್ವಜ್ಞಂ ಸರ್ವಭೋಕ್ತಾರಂ ಸರ್ವಲೋಕೇಶ್ವರೇಶ್ವರಮ್ ।**
**ತ್ವಮೇವ ವೇದ್ಮಿ ಗೋವಿಂದ! ನ ತ್ವತ್ತುಲ್ಯೋ ನ ಚಾಧಿಕಃ ॥"**

''ಸರ್ವಜ್ಞನೂ ಸರ್ವಭೋಕ್ತೃವೂ ಸರ್ವಲೋಕಕ್ಕೆ ಸ್ವಾಮಿಯೂ ಎಂದು ನಿನ್ನನ್ನೇ ತಿಳಿದಿರುತ್ತೇನೆ. ನಿನಗೆ ಸಮಾನರು ಮತ್ತು ಅಧಿಕರಾರೂ ಇಲ್ಲ. ಯಾರಿಗೆ ನೈವೇದ್ಯವನ್ನು ಮಾಡಲಿ ಅಪ್ಪಣೆ ಮಾಡಬೇಕು'' ಎಂಬ ಮಾತನ್ನು ಕೇಳಿ ಶ್ರೀನಿವಾಸನು ನುಡಿಯುತ್ತಾನೆ - ''ಅಹೋಬಲ ನೃಸಿಂಹನ ಪೂಜೆಯನ್ನು ಮಾಡಿ ನೈವೇದ್ಯವನ್ನು ಮಾಡು'' ಎಂದು ಹೇಳಿ ನೈವೇದ್ಯ ಮಾಡಿಸಿದನು. ಅದರಂತೆ - ರಾಮಾಯಣದಲ್ಲಿ ವಿಶ್ವಾಮಿತ್ರರು ರಾಮ-ಲಕ್ಷ್ಮಣರನ್ನು ಬೆಳಗಿನ ಜಾವದಲ್ಲಿ ಎಚ್ಚರಗೊಳಿಸುತ್ತಿದ್ದರು. ಅನಂತರದಲ್ಲಿ ರಾಮ-ಲಕ್ಷ್ಮಣರು ಸ್ನಾನ, ಸಂಧ್ಯಾವಂದನೆ, ಜಪ, ಮೊದಲಾದ ಆಹ್ನೀಕಗಳನ್ನು ಪೂರೈಸುತ್ತಿದ್ದರು ಎಂದಮೇಲೆ ಒಂದು ಸಂದೇಹ ಹುಟ್ಟುತ್ತದೆ. ಸ್ವತಃ ಭಗವಂತನೇ ಆದ ಶ್ರೀರಾಮನಿಗೆ ಇದರ ಅಗತ್ಯವೇನಿದ್ದೀತು?

ತನಗೆ ತಾನೇ ಅರ್ಘ್ಯವನ್ನು ಕೊಟ್ಟುಕೊಳ್ಳುವುದು ತನ್ನ ಜಪವನ್ನು ತಾನೇ ಮಾಡುವುದರಲ್ಲಿ ಏನು ಮಹತ್ವ? ಎಂಬ ಅನಂತ ಪ್ರಶ್ನೆಗಳು ಉದ್ಭವಿಸುತ್ತವೆ ಎಂದರೆ ಅದಕ್ಕೆ ಉತ್ತರರೂಪದಲ್ಲಿ ಶ್ರೀಕೃಷ್ಣಪರಮಾತ್ಮ ಗೀತೆಯಲ್ಲಿ -

**"ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ ॥"**

ಎನ್ನುವಂತೆ ಹಿರಿಯರು, ಧುರೀಣರು ಏನು ಮಾಡುತ್ತಾರೋ ಹೇಗೆ ನಡೆಯುತ್ತಾರೋ ಎಂಬುದನ್ನು ನೋಡಿ ಕಿರಿಯರು, ಜನಸಾಮಾನ್ಯರು ಅನುಸರಿಸುತ್ತಾರೆ. ಅದನ್ನೇ



ಆದರ್ಶ ಪ್ರಮಾಣವೆಂದು ಭಾವಿಸುತ್ತಾರೆ. ಫ್ಯಾಷನ್‌ದಂತಹ ವಿಷಯದಲ್ಲಿಯೂ ಇಂತಹ ಅನುಕರಣೀಯ ಉದಾಹರಣೆಗಳು ಕಾಣಿಸುತ್ತವೆ. ಆದುದರಿಂದ ಧಾರ್ಮಿಕ, ನೈತಿಕ, ರಾಜಕೀಯ ಮೊದಲಾದ ಆದರ್ಶಗಳ ವಿಷಯದಲ್ಲಿ ಸರಿಯಾದ ಹಾದಿ ಹಾಕಿಕೊಡುವ ಹೊಣೆ ಹಿರಿಯರ ಮೇಲೆ, ಧುರೀಣರ ಮೇಲೆ ವಿಶೇಷವಾಗಿದೆ. ಇಲ್ಲವಾದರೆ ಹಿರಿಯರೇ ಮಾಡಿಲ್ಲ. ಅವರೇ ಹಾಗೆ ಮಾಡಿದ್ದಾರೆ, ಇವರೇ ಹೀಗೆ ಮಾಡಿದ್ದಾರೆ ನಮಗೇನು? ನಾವು ಹಾಗೇಕೆ ಮಾಡಬಾರದು? ಎಂದು ಕಿರಿಯರು ಮತ್ತು ಜನಸಾಮಾನ್ಯರು ಕರ್ತವ್ಯಲೋಪದತ್ತ ಗಮನಹರಿಸುತ್ತಾರೆ. ಆದರ್ಶ-ಗಳಿಂದ ದೂರ ಸರಿಯುವತ್ತ ಆಕರ್ಷಿಸಲ್ಪಡುತ್ತಾರೆ. ಜನಸಾಮಾನ್ಯರು ಸಾಮಾನ್ಯವಾಗಿ ಪ್ರತಿಯೊಂದನ್ನು ವಿಚಾರಿಸಿ, ವಿಮರ್ಶಿಸಿ ಮಾಡುವುದಿಲ್ಲ. ಅವರು ಗತಾನುಗತಿಕ-ರಾಗಿರುವದೇ ಹೆಚ್ಚು ಹಿರಿಯರ ಅಂಧಾನುಕರಣೆಯೂ ಕಂಡುಬರುತ್ತದೆ. ಆದಕಾರಣ, ಶ್ರೀನಿವಾಸನು ತನ್ನ ವಿವಾಹ ಸಮಯದಲ್ಲಿ ತಾನೇ ಸರ್ವೋತ್ತಮನಾದರೂ ಲೋಕ ಶಿಕ್ಷಣಕ್ಕಾಗಿ ನೈವೇದ್ಯ ಮೊದಲಾದ ಕಾರ್ಯಗಳನ್ನು ಮಾಡಿಸಿದ್ದಾನೆ ಮತ್ತು ರಾಮಾಯಣ-ದಲ್ಲಿ ಶ್ರೀರಾಮನು ಸಂಧ್ಯಾವಂದನೆಯೇ ಮೊದಲಾದ ಕಾರ್ಯಗಳನ್ನು ಮಾಡಿ ಲೋಕಕ್ಕೇ ಮಾರ್ಗದರ್ಶಿಯಾಗಿದ್ದಾನೆ. ಆದಕಾರಣ, ಹಿರಿಯರು ಹಾಕುವ ಹಾದಿಯು ನಮ್ಮ (ಕಿರಿಯರ) ಉತ್ತಮ ಸ್ಥಾನಕ್ಕೇ ನಾಂದಿಯಾಗಿದೆ. ಆದ್ದರಿಂದ ಎಲ್ಲರೂ ಹಿರಿಯರ (ತಂದೆ-ತಾಯಿ-ಗುರುಗಳ) ಮಾತನ್ನು ಕೇಳಿ ಉತ್ತಮ ಗತಿಯನ್ನು ಹೊಂದೋಣ.

❑❑

**ಸಂಗೀತ ಸುಧಾ ಲೈವ್ ಕ್ಯಾಸೆಟ್ಸ್**

ಮುಖ್ಯರಸ್ತೆ, **ಮಂತ್ರಾಲಯ – 518 345,** ಜಿಲ್ಲಾ - ಕರ್ನೂಲು, ಆಂಧ್ರಪ್ರದೇಶ

**ದೂರವಾಣಿ : 08512-280062, 09247873202, 09441181587**

**ಶ್ರೀರಾಯರ ಆರಾಧನೆ, ಶ್ರೀಮಠದ ಪರಂಪರೆ ವಿ.ಸಿ.ಡಿ. ಯಲ್ಲಿ**

ಸುಮಾರು 15 ವರ್ಷಗಳಿಂದಲೂ ಅನೇಕ ಹರಿದಾಸರ ಕೃತಿಗಳನ್ನು ಧ್ವನಿಸುರುಳಿಗಳ ಮುಖಾಂತರ ಹೊರತಂದಿರುವ ನಾವು ಇದೀಗ ಅನೇಕ ಧಾರ್ಮಿಕ ಸಿ.ಡಿ., ವಿ.ಸಿ.ಡಿ.ಗಳನ್ನು ಬಿಡುಗಡೆ ಮಾಡಿದ್ದೇವೆ. ನಮ್ಮ ಸಂಸ್ಥೆಯಲ್ಲಿ ಅನಂತಕುಲಕರ್ಣಿ, ಪುತ್ತೂರು ನರಸಿಂಹನಾಯಕ್, ಶೇಷಗಿರಿದಾಸ್, ಮೊದಲಾದವರು ಹಾಡಿರುವ ಅನೇಕ ಹರಿದಾಸ ಕೃತಿಗಳ ಸಿ.ಡಿ., ವಿ.ಸಿ.ಡಿ., ಧ್ವನಿಸುರುಳಿಗಳು ದೊರೆಯುತ್ತವೆ.

ಪ್ರಸ್ತುತ, ಮಂತ್ರಾಲಯ ಮಠಾಧೀಶರಾದ ಶ್ರೀಶ್ರೀಮತ್ಸುಶಮೀಂದ್ರತೀರ್ಥ ಶ್ರೀಪಾದಂಗಳವರ ಹಾಗೂ ಉತ್ತರಾಧಿಕಾರಿಗಳಾದ ಶ್ರೀಶ್ರೀಮತ್ಸುಯತೀಂದ್ರತೀರ್ಥ ಶ್ರೀಪಾದಂಗಳವರ ಕೃಪಾಶೀರ್ವಾದದಿಂದ ಮಂತ್ರಾಲಯದಲ್ಲಿ ಶ್ರೀರಾಘವೇಂದ್ರಸ್ವಾಮಿಗಳವರ ಆರಾಧನಾ ಸಮಯದಲ್ಲಿ ನಡೆದ ಪೂಜಾ, ಉತ್ಸವಗಳ ವೈಭವದ ಸನ್ನಿವೇಶಗಳನ್ನು ಚಿತ್ರೀಕರಿಸಿ **'ಆರಾಧನಾ ದರ್ಶಿನೀ'** ಎಂಬ ವಿ.ಸಿ.ಡಿ. ಯನ್ನು ಬಿಡುಗಡೆ ಮಾಡಿದ್ದೇವೆ. ಇದರಂತೆಯೇ ಶ್ರೀಮಠದ ಪರಂಪರೆಯ ಎಲ್ಲಾ ಮೂಲಬೃಂದಾವನಗಳ ಇತಿಹಾಸದ ವಿವರಣೆಗಳುಳ್ಳ **'ಬೃಂದಾವನದರ್ಶನಮ್'** ಎಂಬ ಶ್ರೀಮಠದ ಅಧಿಕೃತ ವಿ.ಸಿ.ಡಿ. ಯೂ ಸಹ ನಮ್ಮಲ್ಲಿ ಲಭ್ಯವಿದೆ. ಆರಾಧನೆಯ ಜನಸಂದಣಿಯಲ್ಲಿ ನೋಡಲು ಅಸಾಧ್ಯವಾದ ಮತ್ತು ದೂರದ ಊರುಗಳಲ್ಲಿರುವ ಬೃಂದಾವನಗಳ ಪವಿತ್ರ ದೃಶ್ಯವನ್ನು ಮನೆಯಲ್ಲಿಯೇ ಕುಳಿತು ಈ ವಿ.ಸಿ.ಡಿ. ಯಲ್ಲಿ ನೋಡಿ ಆನಂದಿಸಬಹುದು.

**'ದಾಸನಾಗು ವಿಶೇಷನಾಗು', 'ಪವಮಾನ ಜಗದಾ ಪ್ರಾಣ', 'ಹರೇ ಶ್ರೀನಿವಾಸ'**
ಮುಂತಾದ ಆಡಿಯೋ ಸಿ.ಡಿ.ಗಳು ಈಗ ಬಿಡುಗಡೆಯಾಗಿವೆ.

ಉತ್ತಮ ವಸತಿ ವ್ಯವಸ್ಥೆಗೆ ಸಂಪರ್ಕಿಸಿ :
**ಪವಮಾನ ಉಡುಪಿ ಡೀಲಕ್ಸ್ ಲಾಡ್ಜ್,** ಮುಖ್ಯರಸ್ತೆ, ಮಂತ್ರಾಲಯ – 518 345,

**ಲೇಖನಾಂಕ**

# ಧರ್ಮರಾಜನ ಧರ್ಮಪ್ರಜ್ಞೆ

■ **ಪ್ರೊ. ಪಾಂಡುರಂಗ ಜೋರಾಪುರ**
ಶ್ರೀರಾಯರ ಮಠ, ಪೋಸ್ಟ್ : ಕರಜಗಿ, ಜಿಲ್ಲಾ : ಹಾವೇರಿ - ೫೮೧ ೧೧೨

**ಯ**ಕ್ಷಪ್ರಶ್ನೆಯ ಹಿನ್ನೆಲೆ ಚಿರಪರಿಚಿತ. ಯಮಧರ್ಮನ ಬುದ್ಧಿವಂತಿಕೆಯ ಪ್ರಶ್ನೆಗಳಿಗೆ, ಬುದ್ಧಿವಂತಿಕೆಯ, ಧರ್ಮನಿಷ್ಠೆಯ ಉತ್ತರಗಳನ್ನು ಕೊಡುತ್ತಾನೆ ಧರ್ಮರಾಜ. ಒಟ್ಟು ೧೨೧ ಪ್ರಶ್ನೆಗಳನ್ನು ಯಕ್ಷ ಕೇಳುತ್ತಾನೆ.

**ಪ್ರಶ್ನೆ ೧ : ಮೋಹವೆಂದರೇನು? ಉತ್ತರ : ಧರ್ಮಮೂಢತ್ವ**

ಧರ್ಮಾಚರಣೆಯ ಸರಿಯಾದ ಜ್ಞಾನವಿಲ್ಲದೆ ಮಾಡುವ ಕರ್ಮಗಳು. ''ಕಾಮಾತ್ಮಾನಃ ಸ್ವರ್ಗಪರಾ ಜನ್ಮಕರ್ಮ ಫಲಪ್ರದಾಮ್''. ಬಯಕೆಯ ಬೆನ್ನು ಹತ್ತಿದವರು ಸ್ವರ್ಗವೇ ಸರ್ವಸ್ವವೆಂದು ತಿಳಿದವರು ಜನನ-ಮರಣ ಸುಳಿಯಲ್ಲಿ ಸಿಲುಕುತ್ತಾರೆ. ಇದಲ್ಲದೇ ತಾನೇ ದೊಡ್ಡವರೆಂದು ತಿಳಿದು, ಸಂಪತ್ತಿನ ಸೊಕ್ಕಿನಲ್ಲಿ ಡಂಭಾಚಾರದಿಂದ ಯಜ್ಞ-ಯಾಗಾದಿಗಳನ್ನು ಮಾಡುತ್ತಾರೆ. ಇಂಥಹಾ ನರಾಧಮರನ್ನು ನೀಚಯೋನಿಯಲ್ಲಿ ಹಾಕುವೆ ಎಂದು ಶ್ರೀಕೃಷ್ಣ ಸಿಟ್ಟಿನಿಂದ ಹೇಳುತ್ತಾನೆ. ''ಆತ್ಮಸಂಭಾವಿತಾಃ ಸ್ತಬ್ಧಾಃ ಧನಮಾನಮದಾನ್ವಿತಾಃ ಯಜಂತೇ ನಾನು ಯಜ್ಞೈಸ್ತೇ ದಂಭೇನಾವಿಧಿಪೂರ್ವಕಂ ||'' ಇಂಥ ಮೂಢತನವನ್ನು ತಾವು ಮಾಡುವುದಿಲ್ಲವೆಂದು ಶ್ರೀಪಾದರಾಜರು ಹೇಳುತ್ತಾರೆ-''ನಾನೆ ಸಜ್ಜನನಾದರೆ ಇಂಥವು ಹೀನ ವಿಷಯಗಳಿಗೆರಗುವೆನೇನಯ್ಯ? ಹರಿಪರದೈವವೆಂದರಿತು ಭಜಿಸದೆ ಚಿತ್ತವ ಪುರುಷೋತ್ತಮನಲ್ಲಿಡದೆ, ಉತ್ತಮರಾದವರೊಡನೆ ಇರದೆ, ತತ್ವವಿಚಾರಮಾಡದೆ, ನಾನು ಉನ್ಮತ್ತರ ಸಂಗ ಮಾಡುವೆನೇನಯ್ಯ?''

**ಪ್ರಶ್ನೆ ೨ : ಆಲಸ್ಯವೆಂದರೇನು? ಉತ್ತರ : ಧರ್ಮನಿಷ್ಕ್ರಿಯತೆ**

''ಭೋಗೈಶ್ವರ್ಯ ಪ್ರಸಕ್ತಾನಾಂ ಸಮಾಧೌ ನ ವಿಧೀಯತೇ''. ಭೋಗೈಶ್ವರ್ಯ-ದಲ್ಲಿ ಮುಳುಗಿದವರಿಗೆ ತತ್ವಜ್ಞಾನ ಹೊಳೆಯುವುದಿಲ್ಲ ಎಂದು ಗೀತಾಚಾರ್ಯನು ಹೇಳುತ್ತಾನೆ (೨-೪೪).

**"ಪಶ್ಯನ್ನಪಿ ಪ್ರಸ್ಖಲತಿ, ಶೃಣ್ವನ್ನಪಿ ನ ಬುಧ್ಯತಿ ।**
**ಪಠನ್ನಪಿ ನ ಜಾನಾತಿ ದೇವಮಾಯಾವಿಮೋಹಿತಃ ॥"**

ದೇವಮಾಯೆಯಿಂದ ನೋಡಿದರೂ ಕಾಣುವುದಿಲ್ಲ, ಕೇಳಿದರೂ ತಿಳಿಯುವುದಿಲ್ಲ. ಓದಿದರೂ ಜ್ಞಾನವಾಗುವುದಿಲ್ಲ ಎಂದು ಗರುಡಪುರಾಣ ಹೇಳುತ್ತದೆ (೧೬-೩೪).



ವ್ಯಾಸರಾಯರು ಇಂಥ ಸೋಮಾರಿಗಳನ್ನು ಕಟುವಾಗಿ ಟೀಕಿಸುತ್ತಾರೆ : ''ನರಹರಿಯ ಪೂಜೆಮಾಡದವ ಕೈಮುರುಕ, ಕೃಷ್ಣಾ ಎಂದು ಕುಣಿಯದವ ಕುಂಟ, ಕಮಲನಾಭನ ಪಾಡಿ ಪೊಗಳದ ಸಂಗೀತ ಗಾರ್ದಭರೋದನ, ಸುರಧೇನು ಇರಲು ಶ್ವಾನದ ಹಾಲು ಸೇವಿಸಬೇಡ, ಪರಮಪದವೀವ ಶ್ರೀಕೃಷ್ಣನಿರಲಿಕ್ಕೆ ನರರ ಸೇವಿಸಬೇಡ''.

**ಪ್ರಶ್ನೆ ೩ : ಶೋಕ ಯಾವುದು? ಉತ್ತರ : ಅಜ್ಞಾನ**

ನಮ್ಮ ದುಃಖಕ್ಕೆ ಅಜ್ಞಾನವೇ ಕಾರಣ ಎನ್ನುತ್ತಾನೆ ಧರ್ಮರಾಜ. ಈ ಸಂಸಾರದ ಬಗ್ಗೆ, ಸಂಪತ್ತಿನ ಬಗ್ಗೆ ಇರುವ ನಮ್ಮ ತಪ್ಪು ಆಶಯ, ಅಭಿಪ್ರಾಯಗಳಿಂದ ನಾವು ಕಷ್ಟ ಅನುಭವಿಸಬೇಕಾಗುತ್ತದೆ.

**"ಅಸತ್ಯಂ ಮೇ ಕಲತ್ರಂ ಮೇ ಧನಂ ಮೇ ಬಾಂಧವಾಶ್ಚ ಮೇ ।**
**ಜಲ್ಪಂತಮಿತಿ ಮರ್ತ್ಯಾಜಂ ಹಂತಿ ಕಾಲವೃಕೋ ಬಲಾತ್ ॥"**

(ಗ.ಪು. ೧೬-೫೯)

ನನ್ನ ಮಡದಿ-ಮಕ್ಕಳು-ಮನೆ ಎಂದು ಬಡಬಡಿಸುತ್ತಿರುವವನನ್ನು ಕಾಲನೆಂಬ ತೋಳ ತಿನ್ನುತ್ತದೆ. ಪರಮಾತ್ಮ ಸರ್ವತಂತ್ರಸ್ವತಂತ್ರ. ಜೀವಿಗಳ ಪೂರ್ವಕರ್ಮಾನುಸಾರ ಪುಣ್ಯ-ಪಾಪಗಳನ್ನು ಮಾಡಿಸುವವನೂ ಅವನೇ.

**"ಸ ಯಥಾ ಕರೋತಿ ಪುರುಷಂ ತಥೈವಾಯಂ ಭವತಿ ।**
**ಸಾಧುರ್ಭವತಿ ಸಾಧುಂ ಚೇತ್ ಕರೋತಿ ಪುರುಷೋತ್ತಮಃ ।**
**ಪಾಪೋ ಭವತಿ ಪಾಪಂ ಚೇತ್ ಸ ಕರೋತಿ ಜನಾರ್ದನಃ ॥"**

ಬೃಹದಾರಣ್ಯಕ ಉಪನಿಷತ್ತಿನ ಭಾಷ್ಯಕ್ಕೆ ಶ್ರೀಮಧ್ವಾಚಾರ್ಯರು ಹೀಗೆ ಹೇಳುತ್ತಾರೆ. ಆದ್ದರಿಂದಲೇ ಶ್ರೀಜಗನ್ನಾಥದಾಸರು ಹೇಳುತ್ತಾರೆ-''ಜ್ಞಾನೇಚ್ಛಾಕ್ರಿಯಂಗಳೆಲ್ಲ ನಿನ್ನಾಧೀನ-ನಲ್ಲವೆ ಲಕ್ಷ್ಮೀನಲ್ಲ. ವಿಷಯಾಭಿಲಾಷೆ ಬಿಡಿಸೆನ್ನ ಕಾಯೋ. ವೈರಾಗ್ಯ ಪುಟ್ಟಲಿಲ್ಲ, ಘೋರ ಸಂಸಾರದೊಳು ಮಗ್ನನಾದೆ.'' ಪರಮ ದಯಾಳು ಪದ್ಮನಾಭನನ್ನು ಮರೆತು ದುಃಖಪಡುವ ದುರ್ದೈವಿಗಳನ್ನು ಕಂಡು ಕನಕದಾಸರು ಕರುಣೆಯಿಂದ ಕೇಳುತ್ತಾರೆ - ''ಅಷ್ಟೈಶ್ವರ್ಯವು ಮೃಷ್ಟಾನ್ನವಿರುತಿರೆ ಬಿಟ್ಟೆ ಕೂಳನು ತಿನ್ನಲ್ಯಾಕಯ್ಯ? ಬಲ್ಲಿದ ನೆಲೆಯಾದಿ ಕೇಶವನಿರುತಿರೆ ಚಿಲ್ಲರೆ ದೈವದ ಹಂಬಲ್ಯಾಕಯ್ಯ?''

**ಪ್ರಶ್ನೆ ೪ : ಧೈರ್ಯ ಯಾವುದು? ಉತ್ತರ : ಇಂದ್ರಿಯನಿಗ್ರಹ**

ರಣರಂಗದಲ್ಲಿ ವೈರಿಗಳೊಡನೆ ಹೋರಾಡುವುದಾಗಲೀ, ಕ್ರೂರ ಪಶುಗಳನ್ನು, ದುಷ್ಟರನ್ನು ನಿಗ್ರಹಿಸುವುದೇ ಧೈರ್ಯವಲ್ಲ ಎನ್ನುತ್ತಾನೆ ಧರ್ಮರಾಜ. ನಮ್ಮೊಳಗೆ ಇರುವ ಷಡ್ವೈರಿಗಳಿಗೆ ದಾಸರಾಗದೆ ನಡೆಸುವ ಸಾತ್ವಿಕ ಜೀವನವೇ ಧೈರ್ಯ.

**"ಉದಾಸೀನವದಾಸೀನೋ ಗುಣೈರ್ಯೋ ನ ವಿಚಾಲ್ಯತೇ ।**
**ಗುಣಾವರ್ತಂತ ಇತ್ಯೇವ ಯೋಽವತಿಷ್ಠತಿ ನೇಂಗತೇ ॥"**

(ಗೀತಾ - ೧೪-೨೩)

ಜ್ಞಾನಿಯಾದವನು ತ್ರಿಗುಣಗಳ ಪ್ರಭಾವಕ್ಕೆ ಆಳಾಗುವುದಿಲ್ಲ. ಎಲ್ಲವೂ ಪರಮಾತ್ಮನ ಪ್ರೇರಣೆಯಿಂದು ತಿಳಿಯುವನೆಂದು ಗೀತಾಚಾರ್ಯ ಹೇಳುತ್ತಾನೆ. ಶ್ರೀವಿಜಯದಾಸರು ಹರಿಭಕ್ತರ ಗುಣಗಳನ್ನು ಸರಿಯಾಗಿ ವರ್ಣಿಸುತ್ತಾರೆ - ''ಬೂದಿ ಮುಚ್ಚಿದ ಕೆಂಡ-ದಂತಿಪ್ಪರು ಈ ಧರೆಯ ಮೇಲೆ ಶ್ರೀಹರಿಭಕ್ತಜನರು. ಶತ್ರು-ಮಿತ್ರರುಗಳ ಸಮನಾಗಿ ಎಣಿಸುವರು. ಪುತ್ರ-ಮಿತ್ರ-ಭ್ರಾತೃಗಳ ನೆಚ್ಚರು. ಕಷ್ಟಸೌಖ್ಯಂಗಳನು ಕರಿವರದಗರ್ಪಿಸುವರು. ಇಟ್ಟು ತೊಟ್ಟದ್ದು ಹರಿ ತೊಟ್ಟನೆಂಬರು. ಸೃಷ್ಟೀಶ 'ಸಿರಿವಿಜಯವಿಠ್ಠಲ'ನ ಪದಪದ್ಮ ಮುಟ್ಟಿ ಭಜಿಸಿ ಮುಕ್ತಿಸಾಮ್ರಾಜ್ಯ ಪಡೆವರು''. ದುಷ್ಟರ ಮಾತಿಗೆ ದುಃಖಿಸದೆ, ಕೋಪಿಸದೆ, ಕಂಗೆಡದೆ ತಾಳಲೇಕೆಂದು ತಾಳ್ಮೆಯ ಉಪದೇಶ ನೀಡುತ್ತಾರೆ - ''ತಾಳುವಿಕೆಗಿಂತ ತಪವು ಇಲ್ಲ. ದುಷ್ಟಮನುಜರು ಪೇಳ್ದ ನಿಷ್ಠುರದ ನುಡಿ ತಾಳು. ಕಷ್ಟ ಬಂದರೆ ತಾಳು. ಕಂಗೆಡದೆ ತಾಳು. ಕಟ್ಟು ಬುತ್ತಿಯ ಮುಂದೆ ಉಣಲುಂಟು. ಅಕ್ಕಸವ ಮಾಡುವರ ಅಕ್ಕರದಿ ತಾಳು''.

**ಪ್ರಶ್ನೆ ೫ : ವಿಷ ಯಾವುದು? ಉತ್ತರ : ಪರರ ಬೇಡುವದು**

**"ವಾಸುದೇವಂ ಪರಿತ್ಯಜ್ಯ ಯೋಽನ್ಯಂ ದೇವಮುಪಾಸತೇ ।**
**ತ್ಯಕ್ತ್ವಾಽಮೃತಂ ಸ ಮೂಢಾತ್ಮಾ ಭುಂಕ್ತೇ ಹಾಲಾಹಲವಿಷಮ್ ॥"**

''ವಾಸುದೇವನನ್ನು ಬಿಟ್ಟು ಅನ್ಯದೇವರನ್ನು ಪೂಜಿಸುವುದು, ಬೇಡುವುದು, ಅಮೃತವನ್ನು ಬಿಟ್ಟು ವಿಷ ಸೇವಿಸಿದಂತೆ'' ಎಂದು ಶ್ರೀಮಧ್ವಾಚಾರ್ಯರು ಶ್ರೀಕೃಷ್ಣಾಮೃತ ಮಹಾರ್ಣವದಲ್ಲಿ ಹೇಳಿದ್ದು ಅತಿಶಯೋಕ್ತಿ ಏನಲ್ಲ (೧೪೪). ''ಪರರ ಬೇಡುವದು ಆಳುದೇಹವು ಗೇಣು ಕಿರಿದಾಗಿ, ಪಲ್ಮೊರೆದು ಖೂಳಜನರ ಮನೆಗೆ ಕೃಷ್ಣ ಹಾಳು ಒಡಲಿಗೆ, ತುತ್ತು ಕೂಳಿಗೆ ಪೋಗಿ ಅವರ ಓಲೈಸಲಾರೆನೋ ಕೃಷ್ಣ'' ಎಂದು ಶ್ರೀಪಾದರಾಜರು ಕಳವಳಿಸುತ್ತಾರೆ. ಏಕೆಂದರೆ ಮಹಾನುಭಾವನಾದ ನಿನ್ನನ್ನು ಬಿಟ್ಟು ಕ್ಷುಲ್ಲಕರ ಮತ ನಂಬಿ ಸುಖಿಸುವದೆಂದರೆ, ''ಕಲ್ಲು ಗೋವಿನ ಹಾಲು ಕರು ಬಯಸಿದಂತೆ ಹಲ್ಲು ಹೋಗುವುದು ಸರಿಯೇ?''

**ಪ್ರಶ್ನೆ ೬ : ಯೋಗ್ಯಮಾರ್ಗ ಯಾವುದು? ಉತ್ತರ : ಸಜ್ಜನರು**

''ಮಹಾಜನೋ ಯೇನ ಗತಃ ಸ ಪಂಥಾ'', ಜ್ಞಾನಿಗಳ ಆಚರಣೆಯನ್ನು ಅನುಸರಿಸಬೇಕು. ''ಪಂಡಿತಂ ಮನ್ಯಮಾನಾಃ'' ಕುರುಡರನ್ನು ನಂಬಬಾರದು. ಆದ್ದರಿಂದಲೇ ''ತ್ರಿಜಗತಿ ಸಜ್ಜನ ಸಂಗತಿರೇಕಾ ಭವತಿ ಭವಾರ್ಣವ ತಾರಣೇ ನೌಕಾ'' ಭವಸಾಗರ-



ವನ್ನು ದಾಟಿಸುವ ನೌಕೆ. ಪುಣ್ಯವಶಾತ್ ಸಜ್ಜನರ ಸಂಗ ದೊರಕುವುದು, ಪರಮಾತ್ಮ-ನಲ್ಲಿ ಭಕ್ತಿ ಹುಟ್ಟುವುದು ಎಂದು ಮುಚುಕುಂದ ಹೇಳುತ್ತಾನೆ - **"ಸತ್ಸಂಗಮೋ ಯರ್ಹಿ ತದೈವ ಸದ್ಗತೌ ಪರಾವರೇಶೇ ತ್ವಯಿ ಜಾಯತೇ ರತಿಃ"** (ಭಾಗವತ ೧೦-೫೪-೫೫) ವಿಶಾಲವಾದ ಶಾಸ್ತ್ರಶರಧಿಯನ್ನು ಮಥಿಸಿ ತತ್ವಜ್ಞಾನದ ಅಮೃತವನ್ನು ಕರುಣಿಸುವರು ಜಯತೀರ್ಥರು ಎಂದು ಶ್ರೀವ್ಯಾಸರಾಯರು ಹೊಗಳುತ್ತಾರೆ. ಆದ್ದರಿಂದಲೇ ''ಸಂಗವಾಗಲೀ ಸಾಧುಸಂಗವಾಗಲೀ ಸಂಗದಿಂದ ಲಿಂಗದೇಹಭಂಗ-ವಾಗಲಿ'' ಎಂದು ಶ್ರೀಮಹೀಪತಿದಾಸರು ಹಾರೈಸುತ್ತಾರೆ.

**ಪ್ರಶ್ನೆ ೭ : ಉತ್ತಮ ಸ್ನಾನ ಯಾವುದು? ಉತ್ತರ : ಮನಮಲತ್ಯಾಗ**

**"ಹರಿಣಾ ಮುಕ್ತಿದಾನೀಹ ಮುಕ್ತಿಸ್ಥಾನಾನಿ ಸರ್ವಶಃ ।**
**ಸ ಯಸ್ಯ ಸರ್ವಭಾವೇಷು ತಸ್ಯ ತೈಃ ಕಿಂ ಪ್ರಯೋಜನಮ್ ॥"**

(ಕೃ.ಮ. ೧೪೨)

ಎಲ್ಲೆಲ್ಲೂ ಹರಿಯ ಸಾನ್ನಿಧ್ಯವಿರುವುದೆಂದು ನಂಬಿರುವವರಿಗೆ ತೀರ್ಥಸ್ನಾನಾದಿ-ಗಳು ಏಕೆ? ''ಊರೂರ ನದಿಗಳಲಿ ಬಾರಿ ಬಾರಿ ಮುಳುಗಿದರೇನು? ಹರಿಯ ಪದ ನಂಬು. ಸುಟ್ಟುಹೋಗುವುದು ಕಷ್ಟರಾಶಿಗಳು'' ಎಂದು ಪುರಂದರದಾಸರು ಹೇಳಿದರೆ, ''ಛಳಿಗಂಜದೆ ನಿತ್ಯಜಲದಿ ಮುಳುಗಿ ಕರ್ಮ ತಿಳಿಯದೆ ನೀ ಮಾಡುವಿ. ಒಳಹೊರಗೆ ಎಲ್ಲಾ ಹೊಳೆವ ಹರಿಮೂರ್ತಿ ತಿಳಿ''ಯೆಂದು ಶ್ರೀಗುರುಜಗನ್ನಾಥದಾಸರು ಉಪದೇಶಿಸುತ್ತಾರೆ.

**ಪ್ರಶ್ನೆ ೮ : ಅಹಂಕಾರ ಯಾವುದು? ಉತ್ತರ : ಅಜ್ಞಾನ**

''ಅಂತರಂಗದಲಿ ಹರಿಯ ಕಾಣದವ ಹುಟ್ಟುಕುರುಡ'' ಎಂದು ವ್ಯಾಸರಾಯರು ಹೇಳುತ್ತಾರೆ. ''ಸುಮ್ಮನೆ ದೊರಕುವುದೆ ಮುಕ್ತಿ? ಶ್ರೀಹರಿಯೆ ಪರದೈವವೆನಬೇಕು'' ಎಂದು ಪುರಂದರದಾಸರು ಬೋಧಿಸುತ್ತಾರೆ. ಕಲಿಯುಗದಲ್ಲಿ ಮರ್ತ್ಯರು ಕಲಿಮಲವನ್ನು ಪರಿಹರಿಸುವ ಕೃಷ್ಣನಾಮಸಂಕೀರ್ತನೆ ಮಾಡುವುದಿಲ್ಲ ಎಂದು ಶ್ರೀಮಧ್ವಾಚಾರ್ಯರು ಹೇಳುತ್ತಾರೆ (ಕೃ.ಮ. ೧೭). ನರಕದಲ್ಲಿ ದುಃಖಿಸುವವರನ್ನು ಕಂಡು ಯಮಧರ್ಮ ಕೇಳುತ್ತಾನೆ - ''ಕ್ಲೇಶನಾಶ ಮಾಡುವ ಕೇಶವನನ್ನು ಏಕೆ ಪೂಜಿಸಲಿಲ್ಲ?'' (ಪೂಜಿಸಿದ್ದರೆ ಸಂಕಟ ಪಡುತ್ತಿದ್ದಿಲ್ಲ)

**ಪ್ರಶ್ನೆ ೯ : ಕೊನೆಯಿಲ್ಲದ ರೋಗ ಯಾವುದು? ಉತ್ತರ : ಲೋಭ**

ಮಾಂಸದ ಆಶೆಯಿಂದ ಮೀನು ಕೊಕ್ಕೆಯನ್ನು ಕಾಣದೆ ಸಾವನ್ನಪ್ಪುವಂತೆ, ಮನುಷ್ಯರು ಸುಖದ ಲೋಭದಿಂದ ಯಮಬಾಧೆ ಕಾಣರು, ಎಂದು ಗರುಡಪುರಾಣ ಹೇಳುತ್ತದೆ (೧೯-೫೧) ''ಆಶಾಪಾಶಶತೈರ್ಬದ್ಧಾಃ ಕಾಮಕ್ರೋಧ ಪರಾಯಣಾಃ''

ಅನ್ಯಾಯದಿಂದ ಹಣ ಸಂಗ್ರಹಮಾಡಿ ಹಾಳಾಗುತ್ತಾರೆ ಎಂದು ಗೀತಾಚಾರ್ಯ ಹೇಳುತ್ತಾನೆ (೧೯ - ೧೨, ೧೩) ''ಬಯಸದಿರ್ಲೈಹಿಕ ಸುಖಗಳ, ಭಜಿಸು ಹರಿಯ, ತನ್ನಾರಾಧಿಪರಿಗೆ ದೂರಗೈವ ದುರಿತ'' ಎಂದು ಶ್ರೀಜಗನ್ನಾಥದಾಸರು ಉಪದೇಶಿಸುತ್ತಾರೆ.

**ಪ್ರಶ್ನೆ ೧೦ : ಲಜ್ಜೆ ಯಾವುದು? ಉತ್ತರ : ಕೆಟ್ಟ ಕೆಲಸಕ್ಕೆ ಲಜ್ಜೆ**

''ಸರ್ವಾರಂಭ ತ್ಯಾಗಿ'', ''ಶುಭಾಶುಭ ಪರಿತ್ಯಾಗಿ'', ವಿಷ್ಣುವಿಗೆ ಪ್ರೀತಿಕರ-ವಲ್ಲದ ಕಾರ್ಯಗಳನ್ನು, ಶ್ರೀಹರಿಯ ಜ್ಞಾನ-ಭಕ್ತಿಗಳಿಗೆ ಕಾರಣವಾಗದ ಕಾರ್ಯ-ಗಳನ್ನು ಬಿಟ್ಟವನು ನನಗೆ ಪ್ರಿಯ ಎಂದು ಶ್ರೀಕೃಷ್ಣ ಹೇಳುತ್ತಾನೆ. ''ಕಾಮ, ಕ್ರೋಧ ಮನದೊಳಿಟ್ಟು'' ಪೂಜೆಯ ನಾಟಕಮಾಡುವವರನ್ನು ಕಂಡು ನಗೆ ಬರುತ್ತದೆ ಎನ್ನುತ್ತಾರೆ ಪುರಂದರದಾಸರು. ''ಭ್ರಷ್ಟರಾದರು ಮನುಜರು ಅಷ್ಟಮದ ಗರ್ವದಲ್ಲಿ ಹರಿಸ್ಮರಣೆಯನು ಮರೆತು, ಹರಿಚರಿತ್ರೆಗಳನು ಜರಿದಾಡುವುವ ಭ್ರಷ್ಟ, ಕರುಣವಿಲ್ಲದ ವಿಪ್ರ ಭ್ರಷ್ಟ'' ಎನ್ನುತ್ತಾರೆ ಪುರಂದರದಾಸರು.

❑❑


॥ ಶ್ರೀಮಲಕ್ಷ್ಮೀ ಅನಂತ ಪ್ರಸನ್ನ ॥

ಶ್ರೀಅನಂತಪದ್ಮನಾಭ ಟೂರ್ಸ್ ಅಂಡ್ ಟ್ರಾವೆಲ್ಸ್

ದಕ್ಷಿಣ ಭಾರತ (ಉಡುಪಿ ಪರ್ಯಾಯ, ರಾಮೇಶ್ವರ) ಯಾತ್ರೆ

ಪ್ರತಿನಿತ್ಯ ದೇವರ ಪೂಜೆ, ನೈವೇದ್ಯ, ತೀರ್ಥಪ್ರಸಾದ, ಮಡಿಯಿಂದ ಊಟದ ವ್ಯವಸ್ಥೆ ಇದೆ.

**ದಿನಾಂಕ 30-12-2007 ರಿಂದ 19-01-2008 ರವರೆಗೆ**

**ಯಾತ್ರಾಸ್ಥಳಗಳು :**

ಶ್ರೀಶೈಲ, ಅಹೋಬಿಲ, ತಿರುಪತಿ, ಕಂಚಿ, ತಿರಕೋಯಿಲೂರು, ಚಿದಂಬರಂ, ಕುಂಭಕೋಣ, ತಂಜಾವೂರು, ದೊಡ್ಡ ಶ್ರೀರಂಗಂ, ಮಧುರೈ, ರಾಮೇಶ್ವರ, ಕನ್ಯಾಕುಮಾರಿ, ಸುಚಿಂದ್ರ, ತಿರುವನಂತಪುರಂ, ಗುರುವಾಯೂರು, ಉಡುಪಿ, ಪಾಜುಕಾಕ್ಷೇತ್ರ, ದುರ್ಗಾಬೆಟ್ಟ, ಗೋಕರ್ಣ, ಸ್ವಾದಿ, ಮಂತ್ರಾಲಯ ಇತ್ಯಾದಿ.

**ಸೀಟು ಒಂದಕ್ಕೆ ರೂ. 6,900/- ಮಾತ್ರ** (3 × 2 ಲಕ್ಷುರಿ ಬಸ್ಸಿನಲ್ಲಿ)

**ಸೀಟು ಒಂದಕ್ಕೆ ರೂ. 9,600/- ಮಾತ್ರ** (2 × 2 ಪುಷ್‌ಬ್ಯಾಕ್ ಡಿಲಕ್ಸ್ ಬಸ್ಸಿನಲ್ಲಿ)

ಈ ಸುದೀರ್ಘ ಪ್ರವಾಸದಲ್ಲಿ ಚಹಾ / ಕಾಫಿ, ಉಪಹಾರ, ವಸತಿ ಸೌಕರ್ಯ, ಬಸ್ಸು ಛಾರ್ಜುಗಳು ಸೇರಿವೆ.

ಇಂದೇ ಸೀಟು ಒಂದಕ್ಕೆ ರೂ. 3000/- ಕಳುಹಿಸಿ ನಿಮ್ಮ ಸೀಟು ರಿಜರ್ವ್ ಮಾಡಿಸಿಕೊಳ್ಳಿ.

**ಸೂಚನೆ** : 23-09-2007 ರಿಂದ 23 ದಿನಗಳ ಉತ್ತರ ಭಾರತ (ಬದರಿ) ಯಾತ್ರಾ ಪವಿತ್ರ ಪಕ್ಷಮಾಸದಲ್ಲಿ ಹೈದ್ರಾಬಾದ್ ರೈಲ್ವೆ ನಿಲ್ದಾಣದಿಂದ ಹೊರಡಲಿದೆ ಮತ್ತು ನವೆಂಬರ್ 2007 ರಲ್ಲಿ 12 ದಿನಗಳ ನೇಪಾಳ, ಕಾಶಿ ಯಾತ್ರಾ ಇದೆ.

ಹೆಚ್ಚಿನ ವಿವರಗಳಿಗೆ :

**D. Vijayeendracharya Kosgi**

S/o. D. Ananthapadmanathacharya, Flat, 102, Madhuchaitanya Aprts.,
Sai Delux Nagar, Moulali, Hyderabad - 500 040

**Ph : 040-27141716, Cell : 9440702447**






ಲೇಖನಾಂಕ

# ಗೋಮಾತೆಯ ವೈಶಿಷ್ಟ್ಯ

■ ಕಡಪ. ಶ್ರೀಕಾಂತ
ಮಂತ್ರಾಲಯ

ಕ್ಷೀರಸಮುದ್ರದಲ್ಲಿ ಸುರಾಸುರರು ಅಮೃತಮಥನ ಮಾಡುವಾಗ ಉದ್ಭವಿಸಿದ 'ಕಾಮಧೇನು' ಅತ್ಯಂತ ಪವಿತ್ರವಾದುದು. ಸುರಾಸುರರಿಂದ ನಮಸ್ಕರಿಸಲು ಯೋಗ್ಯವಾದುದು. ಎಲ್ಲರ ಮನೋರಥಗಳನ್ನು ಪೂರೈಸುವುದು. ಸರ್ವದೇವತೆಗಳ ಸನ್ನಿಧಾನ ಧೇನುವಿನಲ್ಲಿದೆ. ಎಲ್ಲರೂ ಗೋಮಾತೆಯನ್ನು ಪೂಜಿಸಿ, ಗೋಸೇವೆಯನ್ನು ಮಾಡಿ ಗೋಪಾಲಕೃಷ್ಣನ ಅನುಗ್ರಹಕ್ಕೆ ಪಾತ್ರರಾಗಬೇಕು.

**"ಗವಾಂ ದೃಷ್ಟ್ವಾ ನಮಸ್ಕೃತ್ಯ ಕೃತ್ವಾ ಚೈವ ಪ್ರದಕ್ಷಿಣಮ್ ।**
**ಪ್ರದಕ್ಷಿಣೀಕೃತಾ ತೇನ ಸಪ್ತದ್ವೀಪಾ ವಸುಂಧರಾ ॥"**

ಗೋವುಗಳನ್ನು ನೋಡಿ ನಮಸ್ಕರಿಸಿ ಪ್ರದಕ್ಷಿಣೆ ಮಾಡಿದರೆ ಸಪ್ತದ್ವೀಪಗಳ ಸಹಿತವಾದ ಭೂಪ್ರದಕ್ಷಿಣ ಮಾಡಿದಂತೆಯೇ.

**"ಗೋಗ್ರಾಸಸ್ಯ ವಿಶೇಷೋಽಸ್ತಿ ಹಸ್ತಸಂಪೂರ್ಣಮಾತ್ರತಃ ।**
**ಶತಬ್ರಾಹ್ಮಣಭುಕ್ತೇನ ಸಮಮಾಹುರ್ಯುಧಿಷ್ಠಿರ ॥"**

ನೂರು ಮಂದಿ ಬ್ರಾಹ್ಮಣರಿಗೆ ಭೋಜನಮಾಡಿಸಿದರೆ ಯಾವ ಫಲವಿದೆಯೋ ಅದೇ ಫಲ ಕೈಯ್ಯ ತುಂಬ ಕೊಟ್ಟ ಗೋಗ್ರಾಸಕ್ಕೆ (ಗೋವುಗಳಿಗೆ ಕೊಟ್ಟ ಆಹಾರಕ್ಕೆ) ಇದೆ.

**"ಗೋಮೂತ್ರಂ ಗೋಮಯಂ ಕ್ಷೀರಂ ದಧಿಸರ್ಪಿಸ್ತಥೈವ ಚ ।**
**ಗವಾಂ ಯಸ್ಯ ಪವಿತ್ರಾಣಿ ಪುನಂತಿ ಸಕಲಂ ಜಗತ್ ॥"**

ಗೋಮೂತ್ರ, ಗೋಮಯ (ಸಗಣಿ), ಗೋಕ್ಷೀರ (ಹಾಲು), ಮೊಸರು, ಗೋಘೃತ (ತುಪ್ಪ) ಈ ಐದು ಪದಾರ್ಥಗಳಿಗೆ 'ಪಂಚಗವ್ಯ' ಎಂಬ ಹೆಸರಿದೆ. ಇವು ಅತ್ಯಂತ ಶ್ರೇಷ್ಠವಾದ ಪದಾರ್ಥಗಳು. ಸಕಲ ಜಗತ್ತನ್ನು ಪವಿತ್ರವನ್ನಾಗಿ ಮಾಡುತ್ತವೆ.

**"ಯತ್ತ್ವಗಸ್ಥಿಗತಂ ಪಾಪಂ ದೇಹೇ ತಿಷ್ಠತಿ ಮಾಮಕೇ ।**
**ಪ್ರಾಶನಂ ಪಂಚಗವ್ಯಸ್ಯ ದಹತ್ಯಗ್ನಿರಿವೇಂಧನಮ್ ॥"**

ಅಗ್ನಿದೇವನು ಕಟ್ಟಿಗೆಗಳನ್ನು ಹೇಗೆ ಭಸ್ಮಮಾಡುವನೋ ಅದರಂತೆ ಪಂಚಗವ್ಯ ಪ್ರಾಶನವು ನಮ್ಮ ದೇಹದಲ್ಲಿರುವ ಪಾಪಗಳನ್ನು ಭಸ್ಮಮಾಡುತ್ತದೆ.

**"ಹರಂತಿ ಸ್ಪರ್ಶನಾತ್ಪಾಪಂ ಪಯಸಾ ಪೋಷಯಂತಿ ಯಾಃ ।**
**ಪ್ರಾಪಯಂತಿ ದಿವಂ ದತ್ತಾಃ ಪೂಜ್ಯಾಃ ಗಾವಃ ಕಥಂ ನ ತಾಃ ॥"**

ಗೋವುಗಳನ್ನು ಸ್ಪರ್ಶಮಾಡುವುದರಿಂದ ಪಾಪಗಳು ನಶಿಸುತ್ತವೆ. ಗೋವುಗಳು ಹಾಲು ಕೊಟ್ಟು ನಮ್ಮನ್ನೆಲ್ಲಾ ಪೋಷಿಸುತ್ತವೆ. ಗೋದಾನ ಮಾಡಿದರೆ, ಆ ಗೋವುಗಳು ನಮ್ಮನ್ನು ಸ್ವರ್ಗವನ್ನು ಹೊಂದಿಸುತ್ತವೆ. ಅಂತಹ ಗೋವುಗಳು ಹೇಗೆ ಪೂಜ್ಯವಾಗಲಾರವು ? (ಪೂಜ್ಯವೇ).

## ಪಂಚವಿಧ ಗೋದಾನಗಳು

೧. ಕಾಯಾ - ವಾಚಾ - ಮನಸಾ ಮಾಡಿದ ಪಾಪಗಳನ್ನು ಕಳೆದುಕೊಳ್ಳಲು ಕಪ್ಪುಬಣ್ಣದ ಗೋದಾನ (ಪಾಪಾಪನೋದಧೇನುದಾನಮ್) ಮಾಡಬೇಕು.

೨. ಸಕಲ ಪಾಪಗಳು ನಾಶವಾಗುವ ಮೂಲಕ ಸುಖವಾಗಿ ಪ್ರಾಣಬಿಡಲು (ಉತ್ಕ್ರಾಂತಿಧೇನುದಾನಮ್).

೩. ಮಹಾಘೋರವಾದ ಯಮನ ದ್ವಾರದಲ್ಲಿರುವ ವೈತರಣೀ ನದಿಯನ್ನು ದಾಟಲು, ಉತ್ತಮವಾದ ಪುಣ್ಯಲೋಕ ಪ್ರಾಪ್ತಿಗಾಗಿ (ವೈತರಣೀಧೇನುದಾನಮ್)

೪. ಈ ಲೋಕದಲ್ಲಿ - ಪರಲೋಕದಲ್ಲಿ ಏಳು ಜನ್ಮಗಳಲ್ಲಿ ಮಾಡಿದ 'ಋಣ'ವೆಂಬ ಪಾತಕವನ್ನು ಹೋಗಲಾಡಿಸಲು (ಋಣಧೇನುದಾನಮ್)

೫. ಮೋಕ್ಷಪ್ರದನಾದ ವಾಸುದೇವನ ಪ್ರೀತಿಗಾಗಿ ಹಾಗೂ ಮೋಕ್ಷಪ್ರಾಪ್ತಿಗಾಗಿ (ಮೋಕ್ಷಧೇನುದಾನಮ್)

❑❑

**ವಿಳಾಸ ಬದಲಾವಣೆ ಮಾಡುವವರು ತಮ್ಮ ಹಳೆಯ ವಿಳಾಸ ಮತ್ತು ಬದಲಾದ ವಿಳಾಸಗಳನ್ನು ಪತ್ರಮೂಲಕವೇ ಕಳುಹಿಸತಕ್ಕದ್ದು (ದಾಖಲೆಗಾಗಿ).**

**ಪತ್ರಿಕೆಯ ಬಗೆಗಿನ ದೂರು, ಸಲಹೆಗಳಿಗೆ 93413-87714, 099857-03033 ಸಂಖ್ಯೆಯನ್ನು ಸಂಪರ್ಕಿಸಿ. ಈ ಸಂಖ್ಯೆಯಲ್ಲಿ ಕೇವಲ ಲೇಖನಗಳ ಹಾಗೂ ಪತ್ರಿಕೆಯ ತಪ್ಪು-ಒಪ್ಪುಗಳ ಬಗೆಗಿನ ಅಭಿಪ್ರಾಯಗಳನ್ನು ಮಾತ್ರ ಸ್ವೀಕರಿಸಲಾಗುವುದು.**





**ಲೇಖನಾಂಕ**

# ಜ್ಞಾನ ಮತ್ತು ಭಕ್ತಿ

■ ಹೆಚ್.ಜಿ. ಬದರೀನಾಥಾಚಾರ್ಯ
ಹಳೇ ಪೋಸ್ಟ್ ಆಫೀಸ್ ರಸ್ತೆ, ಶ್ರೀರಾಘವೇಂದ್ರಸ್ವಾಮಿ ಮಠ, ಶ್ರೀರಂಗಪಟ್ಟಣ

ಶ್ರೀಮದಾಚಾರ್ಯರು ಬ್ರಹ್ಮಮೀಮಾಂಸಾಶಾಸ್ತ್ರವಾದ ಬ್ರಹ್ಮಸೂತ್ರಕ್ಕೆ ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನ, ನ್ಯಾಯವಿವರಣ ಮತ್ತು ಅಣುಭಾಷ್ಯ ಎಂಬ ನಾಲ್ಕು ಅನರ್ಘ್ಯವಾದ ಗ್ರಂಥಗಳನ್ನು ಕೊಟ್ಟಿದ್ದಾರೆ. ಶ್ರೀಬ್ರಹ್ಮಸೂತ್ರ ಅಣುಭಾಷ್ಯದಲ್ಲಿ -

**"ಶುಭೇನ ಕರ್ಮಣಾ ಸ್ವರ್ಗಂ ನಿರಯಂ ಚ ವಿಕರ್ಮಣಾ ।**
**ಮಿಥ್ಯಾಜ್ಞಾನೇನ ಚ ತಮೋ ಜ್ಞಾನೇನೈವ ಪರಂ ಪದಮ್ ॥**
**ಯಾತಿ ತಸ್ಮಾದ್ ವಿರಕ್ತಃ ಸನ್ ಜ್ಞಾನಮೇವ ಸಮಾಶ್ರಯೇತ್ ।"**

ದೇವತೆಗಳು, ಗಂಧರ್ವರು, ಮುಕ್ತಿಯೋಗ್ಯ ಮನುಷ್ಯೋತ್ತಮರು ಮುಕ್ತಿಯನ್ನು ಪಡೆಯಲು ಅರ್ಹರು. ಈ ಮುಕ್ತಿಯು ಶ್ರೀಹರಿಯ ಪರಮಾನುಗ್ರಹ ದ್ವಾರಾ ಮಾತ್ರ ಪ್ರಾಪ್ತಿಯು. ಶ್ರೀಹರಿಯ ಪರಮಾನುಗ್ರಹವಾಗಬೇಕಾದರೆ ಶ್ರೀಮದಾಚಾರ್ಯರು ಮೇಲಿನ ಶ್ಲೋಕಗಳಲ್ಲಿ **ಜ್ಞಾನದಿಂದಲೇ ಪರಮಪದವು ಪ್ರಾಪ್ತಿ** ಎಂದು ಸಿದ್ಧಪಡಿಸಿದ್ದಾರೆ. ಸೋಮಯಾಗ ಮುಂತಾದ ಕಾಮ್ಯಕರ್ಮದಿಂದ ಅಲ್ಪ ಸ್ವರ್ಗಾದಿ ಲೋಕಗಳು ಮಾತ್ರ ಪ್ರಾಪ್ತಿ. ಆದ್ದರಿಂದ ''ವಿರಕ್ತಃ ಸನ್'' ವೈರಾಗ್ಯಾದಿ ಸಾಧನಾನುಷ್ಠಾನ ಅಗತ್ಯ. ಆ ನೈಜ ವೈರಾಗ್ಯ ಪ್ರಾಪ್ತಿಗೆ ಜ್ಞಾನ ಅತ್ಯಗತ್ಯವೆಂದು ಪ್ರತಿಪಾದಿಸಿದ್ದಾರೆ.

**"ಸರ್ವದೇಶೇಷು ಕಾಲೇಷು ಸ ಏಕಃ ಪರಮೇಶ್ವರಃ ।**
**ತದ್ಭಕ್ತಿತಾರತಮ್ಯೇನ ತಾರತಮ್ಯಂ ವಿಮುಕ್ತಿಗಮ್ ॥"**

ಪರಮಾತ್ಮನ ರೂಪಗಳು ಸ್ಥಾನಭೇದ, ಕಾಲಭೇದ ಇತ್ಯಾದಿಗಳಿಂದ ಭಿನ್ನವಲ್ಲ. ಅವನ ರೂಪಗಳು ಪರಸ್ಪರವಾಗಿಯೂ ಮೂಲರೂಪದಿಂದಲೂ ಅಭಿನ್ನವಾದವುಗಳು. ಜ್ಞಾನಾನಂದಾತ್ಮಕವಾದ ಅಪ್ರಾಕೃತನು ಪರಮಾತ್ಮನು. ಜೀವರು ಪರಮಾತ್ಮನ ಪ್ರತಿಬಿಂಬದಂತೆ ಭಿನ್ನಾಂಶರು. ಜೀವ ಪರಮಾತ್ಮನಿಗೆ ಭೇದವಿದೆ. ಪರಮಾತ್ಮನಲ್ಲಿ ಭಕ್ತಿ ಅವಶ್ಯ. ಭಕ್ತಿಯು ತಾರತಮ್ಯಯುತವಾಗಿದೆ ಎಂದು ಅಪ್ಪಣೆ ಕೊಟ್ಟಿದ್ದಾರೆ.

ವೇದಾಂತಗಳಾದ ಉಪನಿಷತ್‌ಗಳಲ್ಲಿಯೂ ಜ್ಞಾನದಿಂದಲೇ ಮೋಕ್ಷ- ವೆಂದು ಸಿದ್ಧಪಡಿಸುವ ಮಂತ್ರಗಳು ಇವೆ.

**"ತಮೇವಂ ವಿದ್ವಾನಮೃತ ಇಹ ಭವತಿ...."** (ತೈ. ಅರಣ್ಯಕ)

**"ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ।**
**ಸೋಽಶ್ನುತೇ ಸರ್ವಾನ್ ಕಾಮಾನ್ ಸಹ । ಬ್ರಹ್ಮಣಾ ವಿಪಶ್ಚಿತೇತಿ ॥"**

(ತೈ. ಉಪನಿಷತ್)

**"ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಮ್ ।**
**ತದಾ ವಿದ್ವಾನ್ ಪುಣ್ಯ ಪಾಪೇ ವಿಧೂಯ ನಿರಂಜನಂ ಪರಮಂ ಸಾಮ್ಯಮುಪೈತಿ ॥"**

(ಅಥರ್ವಣೋಪನಿಷತ್)

ಶ್ರೀಭಗವದ್ಗೀತೆಯಲ್ಲಿ 'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೆ' ಜ್ಞಾನಕ್ಕೆ ಸಮನಾದ ಪವಿತ್ರವಾದದ್ದು ಇಲ್ಲ ಎಂದು ಹೇಳಿದೆ. ಆದ್ದರಿಂದ ಪವಿತ್ರವಾದ ಜ್ಞಾನ-ದಿಂದಲೇ ಮೋಕ್ಷವು ಸಾಧ್ಯ.

ಶ್ರೀಮದಾಚಾರ್ಯರು ಸೂತ್ರಭಾಷ್ಯದಲ್ಲಿ ಜ್ಞಾನಕ್ಕೆ ಪ್ರಧಾನ್ಯವನ್ನು ಕೊಟ್ಟಿದ್ದಾರೆ –

**"ಯತ್ರ ಜ್ಞಾನಂ ತತ್ರ ಮೋಕ್ಷ ಇತಿ ನಾತ್ರ ಕಾರ್ಯಾ ವಿಚಾರಣಾ ।"**

**"ಯೇಷಾಂ ಜ್ಞಾನಂ ಸಮುತ್ಪನ್ನಂ ತೇಷಾಂ ಮೋಕ್ಷೋ ವಿನಿಶ್ಚಿತಃ ।**
**ಜ್ಞಾನೇನೈವ ಮೋಕ್ಷೇ ನಿಯತಃ ।**
**ಜ್ಞಾನಾನ್ಮೋಕ್ಷೋ ಭವತ್ಯೇವ ಸರ್ವಕಾರ್ಯಕೃತೋಽಪಿ ತು ॥"**

ಎಲ್ಲಿ ಜ್ಞಾನವಿದೆಯೋ ಅಲ್ಲಿ ಮೋಕ್ಷ ಸಿದ್ಧ. ಇದರಲ್ಲಿ ಬೇರೆ ವಿಚಾರವೇ ಇಲ್ಲ. ಯಾರು ಜ್ಞಾನದಿಂದ ಭೂಷಿತರಾಗುತ್ತಾರೋ ಅವರಿಗೆ ಮೋಕ್ಷ ನಿಶ್ಚಿತ ಎಂದು ಪ್ರತಿಪಾದಿಸಿದ್ದಾರೆ. ಎಲ್ಲಾ ಕಾರ್ಯಗಳಲ್ಲಿ ಜ್ಞಾನ ಒಂದರಿಂದಲೇ ಮೋಕ್ಷಪ್ರಾಪ್ತಿಯೆಂದಿದ್ದಾರೆ.

ಅನುವ್ಯಾಖ್ಯಾನದಲ್ಲಿ **"ಜಿಜ್ಞಾಸೋತ್ಥ ಜ್ಞಾನಜಾತತ್ತ್ಪ್ರಸಾದಾದೇವ ಮುಚ್ಯತೇ"** ಜಿಜ್ಞಾಸಾದಿಂದ ಜ್ಞಾನ, ಜ್ಞಾನದಿಂದ ಭಗವತ್ಪ್ರಸಾದ ಉಂಟಾಗುತ್ತದೆ. ಅದರಿಂದ ಮೋಕ್ಷವೆಂದು ಜ್ಞಾನವು ಅವಶ್ಯಕ ಎಂದಿದ್ದಾರೆ.

ಈ ವಿಚಾರಗಳು ಜ್ಞಾನ ಒಂದರಿಂದಲೇ ಭಗವತ್ಪ್ರಸಾದ ಉಂಟಾಗಿ ಮೋಕ್ಷಪ್ರಾಪ್ತಿ-ಯಾಗುತ್ತದೆಂದು ತೋರುತ್ತದೆ. ಶ್ರುತಿಗಳಲ್ಲಿ ಭಕ್ತಿಯೂ ಅವಶ್ಯಕ ಎಂದು ಹೇಳಿರು-ವುದು ಕಂಡುಬಂದಿದೆ.





**"ಭಕ್ತಿರೇವೈನಂ ನಯತಿ ಭಕ್ತಿರೇವೈನಂ ದರ್ಶಯತಿ ।**
**ಭಕ್ತಿವಶಃ ಪುರುಷೋ ಭಕ್ತಿರೇವ ಭೂಯಸೀತಿ ॥"**

(ಮಾಠರ ಶ್ರುತಿಃ)

**"ನಾಯಮಾತ್ಮಾ ಪ್ರವಚನೇನ ಲಭ್ಯಃ**
**ನ ಮೇಧಯಾ ನ ಬಹುನಾ ಶ್ರುತೇನ ।**
**ಯಮೇವೈಷ ವೃಣುತೇ ತೇನ ಲಭ್ಯ**
**ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥"**

(ಕಾಠಕೋಪನಿಷತ್)

ಈಗ ನಾವು ಜ್ಞಾನ ಮತ್ತು ಭಕ್ತಿಯ ಸ್ಥಾನಗಳನ್ನು ನೋಡೋಣ.

ಶ್ರೀಮದ್ ಟೀಕಾಚಾರ್ಯರು ಶ್ರೀಮನ್ನ್ಯಾಯಸುಧಾಗ್ರಂಥದಲ್ಲಿ ೩ನೇ ಅಧ್ಯಾಯ ೪ನೇ ಪಾದದಲ್ಲಿ –

**"ಅಸ್ಮಿನ್ ಶಾಸ್ತ್ರೇ ಯತ್ರ ಯತ್ರ ಜ್ಞಾನಸ್ಯ ಮೋಕ್ಷಸಾಧನತ್ವಮುಚ್ಯತೇ**
**ತತ್ರ ತತ್ರ ಜ್ಞಾನಪದೇನ ಭಕ್ತಿಃ ಲಕ್ಷ್ಯತೇ ।**

ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಎಲ್ಲೆಲ್ಲಿ ಜ್ಞಾನವು ಮೋಕ್ಷಸಾಧನೆ ಎಂದು ಹೇಳಿದೆಯೋ ಅಲ್ಲಲ್ಲಿ ಜ್ಞಾನಪದದಿಂದ ಭಕ್ತಿಯನ್ನು ಎಂದು ಲಕ್ಷಣಯಾ ತೆಗೆದು-ಕೊಳ್ಳಬೇಕು. ಜ್ಞಾನವು ಭಕ್ತಿಯ ಅಂಗ. ಶ್ರೀಹರಿಯ ಜ್ಞಾನ ಮತ್ತು ಸ್ನೇಹಗಳ ಸಮುದಾಯವೇ ಭಕ್ತಿ. ಜ್ಞಾನ ವಿಶೇಷವು ಯಾವಾಗ ಸ್ನೇಹಸಹಿತವಾಗಿ ಅಸಾಧಾರಣ ಧರ್ಮವಾಗುತ್ತದೆಯೋ ಆವಾಗಲೇ ಅದು ನೈಜವಾದ ಭಕ್ತಿ. ಜ್ಞಾನವಿಶೇಷ, ಜ್ಞಾನ ಹಾಗೂ ಸ್ನೇಹ ಇವೆರಡು ಭಕ್ತಿಯ ಅಂಶಗಳು.

## ಅನುವ್ಯಾಖ್ಯಾನ

**"ಜ್ಞಾನಸ್ಯ ಭಕ್ತಿಭಾಗತ್ವಾದ್ಭಕ್ತಿರ್ಜ್ಞಾನಮಿತೀರ್ಯತೇ"**

**"ಜ್ಞಾನಸ್ಯೈವ ವಿಶೇಷೋ ಯದ್ಭಕ್ತಿರಿತ್ಯಭಿಧೀಯತೇ"**

**"ಜ್ಞಾನಂ ಸ್ನೇಹಶ್ಚ ಭಕ್ತೇರಂಶೌ ತತ್ರೈಕೇನಾಂಶೇನ**
**ಅಂಶಾಂತರಸ್ಯ ಉಪಲಕ್ಷಣಮ್ ।**
**ತಥಾ ಚ ಜಹಲ್ಲಕ್ಷಣಯಾ ಭಕ್ತಿರೇವ ಸಿದ್ಧ್ಯತೀತಿ ।"**

ಜ್ಞಾನದಿಂದ ಮೋಕ್ಷವೆಂದರೆ ಅಜಹಲ್ಲಕ್ಷಣದಿಂದ ಭಕ್ತಿಯಿಂದಲೂ ಮೋಕ್ಷ-ವೆಂದು ಸಿದ್ಧಿಸುತ್ತದೆ. ಅಜಹಲ್ಲಕ್ಷಣವೆಂದರೆ ಲಕ್ಷಣವನ್ನು ಬಿಡದೆ ಅದಕ್ಕೆ ಸಮಾನ-

ವಾದ ಇನ್ನೊಂದನ್ನು ಗ್ರಹಣಮಾಡುವುದು. ಜ್ಞಾನ ಮತ್ತು ಭಕ್ತಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಶ್ರೀಹರಿಯ ಪ್ರಸಾದಕ್ಕೆ ಒಂದಕ್ಕೊಂದು ಪೂರಕ.

ಅನುವ್ಯಾಖ್ಯಾನದಲ್ಲಿ ಭಕ್ತಿಯಿಂದಲೇ ಭಗವತ್ಪ್ರಸಾದ ಎಂದು ನಿರ್ಣಯಿಸಿ-ಬಿಟ್ಟಿದ್ದಾರೆ.

**"ಭಕ್ತ್ಯಾ ಪ್ರಸನ್ನೋ ಭಗವಾನ್ ದದ್ಯಾಜ್ಜ್ಞಾನಮನಾಕುಲಮ್"**

**"ಭಕ್ತ್ಯೈವ ತುಷ್ಟಿಮಭ್ಯೇತಿ ವಿಷ್ಣುರ್ನಾನ್ಯೇ ಕೇನಚಿತ್ ॥"**

ಶ್ರೀಹರಿಯ ಪ್ರಸಾದಕ್ಕೆ ಜ್ಞಾನ, ಅದರಿಂದ ಉಂಟಾದ ಸ್ನೇಹಪೂರ್ವಕವಾದ ಭಕ್ತಿ ಇವೆರಡರ ಸಮಾಗಮದಿಂದ ಉಂಟಾದ ಅಸಾಧಾರಣವಾದ ನೈಜ ವೈರಾಗ್ಯ ಸಾಧನ ತ್ರಯಗಳು ಶ್ರೀಮದಾಚಾರ್ಯರು ಭಕ್ತಿಯೆನ್ನುವುದನ್ನು ಸ್ಪಷ್ಟಪಡಿಸಿದ್ದಾರೆ.

**"ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ ।**
**ಸ್ನೇಹೋ ಭಕ್ತಿರಿತಿ ಪ್ರೋಕ್ತಃ ತಯಾ ಮುಕ್ತಿರ್ನಚಾನ್ಯಥಾ ॥"**

ಮಾಹಾತ್ಮ್ಯಜ್ಞಾನಪೂರ್ವಕವಾದ ಸುದೃಢವಾದ, ಎಲ್ಲ ವಸ್ತುಗಳಿಗಿಂತಲೂ ಅಧಿಕವಾದ ಸ್ನೇಹವೇ ಭಕ್ತಿ.

ಮಹಾತ್ಮ್ಯಜ್ಞಾನವೆಂದರೆ ಸೃಷ್ಟಿ, ಸ್ಥಿತಿ, ಪಾಲನ ಮುಂತಾದ ಅಷ್ಟಕರ್ತೃತ್ವವೂ ಶ್ರೀಹರಿಯ ಅಧೀನವೆಂಬ ನಿಶ್ಚಿತ ಜ್ಞಾನ ಮತ್ತು ಶ್ರೀವ್ಯಾಸರಾಜರು ಅಪ್ಪಣೆ ಕೊಡಿಸಿದಂತೆ –

**"ಶ್ರೀಮನ್ಮಧ್ವಮತೇ ಹರಿಃಪರತರಃ ಸತ್ಯಂ ಜಗತತ್ತ್ವತೋ**
**ಭೇದೋ ಜೀವಗಣಾಃ ಹರೇರನುಚರಾಃ ನೀಚೋಚ್ಚಭಾವಂ ಗತಾಃ ।**
**ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ**
**ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ ॥"**

ಶ್ರೀಮಾಧವನ ಮತದಲ್ಲಿ ಶ್ರೀಹರಿಸರ್ವೋತ್ತಮ ಜಗತ್ತು ಸತ್ಯವಾದದ್ದು. ತಾತ್ವಿಕವಾಗಿ ಭೇದಗಳಿವೆ. ಜೀವರಾಶಿಗಳು ಭಿನ್ನರಾಗಿದ್ದಾರೆ. ಎಲ್ಲಾ ಜೀವರಾಶಿಗಳೂ ಶ್ರೀಹರಿಯ ಅನುಚರರು, ಈ ಜೀವರಾಶಿಗಳು ಗುಣ ಮತ್ತು ಯೋಗ್ಯತೆಯಲ್ಲಿ ತಾರತಮ್ಯಯುತರಾಗಿದ್ದಾರೆ. ಜೀವರ ನೈಜಸ್ಥಾನ ಮುಕ್ತಿಯನ್ನು ಪಡೆಯಲು ಭಕ್ತಿಯೇ ಸಾಧನ. ಪ್ರತ್ಯಕ್ಷ, ಅನುಮಾನ ಮತ್ತು ಆಗಮವೆಂದು ಪ್ರಮಾಣಗಳು ಮೂರು





ಎಲ್ಲದಕ್ಕೂ ಶ್ರೀಹರಿಯೇ ನಿಯಾಮಕ ಮತ್ತು ನಾಯಕ. ಈ ರೀತಿ ತತ್ವಜ್ಞಾನದ ನಿಶ್ಚಿತ ಜ್ಞಾನ ಪ್ರಾಪ್ತಿಯಾಗಬೇಕು. ನವವಿಧವಾದ ದ್ವೇಷದ ಜ್ಞಾನವೂ ನಿಶ್ಚಿತವಾಗಿರಬೇಕು.

**"ಜೀವಾಭೇದೋ ನಿರ್ಗುಣತ್ವಮಪೂರ್ಣಗುಣತಾ ತಥಾ ।**
**ಸಾಮ್ಯಾಧಿಕ್ಯೋ ತದನ್ಯೇಷಾಂ ಭೇದಸ್ತದಂತ ಏವ ಚ ।**
**ಪ್ರಾದುರ್ಭಾವ ವಿಪರ್ಯಾಸಸ್ತದ್ಭಕ್ತ ದ್ವೇಷ ಏವ ಚ ।**
**ತತ್ಪ್ರಮಾಣಸ್ಯ ನಿಂದಾ ಚ ದ್ವೇಷಾ ಏತೇಽಖಿಲಾ ಮತಾಃ ॥"**

ಏತೈರ್ವಿಹಿನಾ ಯಾ ಭಕ್ತಿಃ ಸಾ ಭಕ್ತಿರಿತಿ ನಿಶ್ಚಿತಾ. ೧) ಜೀವ ಈಷ ಅಭೇದ ಅಥವಾ ಸಾಮ್ಯ ಚಿಂತನೆ ಮಾಡುವುದು ದ್ವೇಷ, ೨) ಜ್ಞಾನಾನಂದಾದಿ ಗುಣಶೂನ್ಯ ನಿರ್ಗುಣ ಅಥವಾ ಅಪೂರ್ಣ ಎಂಬುವುದು ದ್ವೇಷ, ೩) ಶ್ರೀಹರಿಯು ರಮಾ-ಬ್ರಹ್ಮಾದಿಗಳಿಗೆ ಸಮನೆಂಬುದು ದ್ವೇಷ, ೪) ಶ್ರೀಹರಿಗಿಂತಲೂ ಅನ್ಯರು ಅಧಿಕ-ರೆಂಬುದು ದ್ವೇಷ, ೫) ಶ್ರೀಹರಿಯ ರೂಪಗಳಿಗೂ ಆ ರೂಪಗಳ ಕರಚರಣಾದಿ ಅವಯವಗಳಿಗೆ ಭೇದವಿದೆ ಎಂಬುವುದು ದ್ವೇಷ, ೬) ಶ್ರೀಹರಿಯ ಅವತಾರ ರೂಪಗಳು ಪ್ರಾಕೃತ ದೇಹಯುತವೆಂದು ಭಾವಿಸುವುದು ದ್ವೇಷ, ೭) ಶ್ರೀಹರಿಗೂ ಮತ್ತು ಅವನ ಅವತಾರಗಳಿಗೂ ಭೇದವಿದೆ ಎಂಬುವುದಕ್ಕೆ ದ್ವೇಷ, ೮) ಶ್ರೀಹರಿಯ ಭಕ್ತರನ್ನು ದ್ವೇಷಿಸುವುದು, ೯) ವೇದಾದಿ ಪ್ರಮಾಣಗಳಾದ ವೇದ, ಮಹಾಭಾರತ, ರಾಮಾಯಣ, ಪಾಂಚರಾತ್ರ, ಉಪನಿಷತ್, ಬ್ರಹ್ಮಸೂತ್ರ ಮತ್ತು ಶ್ರೀಭಗವದ್ಗೀತಾ ಮುಂತಾದ ಸಚ್ಛಾಸ್ತ್ರಗಳ ನಿಂದಾ. ಇಂತಹ ನವವಿಧ ದ್ವೇಷವು ಅಂಧಂತಮಸ್ಸಿಗೆ ಕಾರಣವೆಂಬ ಜ್ಞಾನವೂ ಇರಬೇಕು. ಆಗ ಹಿಂದೆ ಹೇಳಿದ ನಿಜವಾದ ಜ್ಞಾನ, ಭಕ್ತಿ, ವೈರಾಗ್ಯಗಳಿಂದ ಭಗವತ್ಪ್ರಸಾದ. ಇದರಿಂದ ಮೋಕ್ಷವು ಲಭ್ಯ.

❑❑

ಬೆಂಗಳೂರಿನಲ್ಲಿ ವಿಪರೀತವಾದ ಮಳೆಯ ಕಾರಣ ವಿದ್ಯುದಭಾವ-ವಾದುದರಿಂದ ಹಾಗೂ ನಮ್ಮ ಕೆಲವು ತಾಂತ್ರಿಕ ಅಡಚಣೆಗಳಿಂದ ಈ ಮಧ್ಯೆ ಪತ್ರಿಕೆಗಳು ಸ್ವಲ್ಪ ಆಲಸ್ಯವಾಗಿ ಬಂದವು. ಈ ವಿಧವಾದ ತೊಂದರೆಯು ಆಗದಂತೆ ಪರ್ಯಾಯ ವ್ಯವಸ್ಥೆಯನ್ನು ನಾವು ಮಾಡಿಕೊಂಡಿದ್ದೇವೆ. ಸದಸ್ಯರಿಗಾದ ತೊಂದರೆಗೆ ವಿಷಾದಿಸುತ್ತೇವೆ. ಮುಂದಿನ ಸಂಚಿಕೆಗಳೂ ಸಹ ಈಗಾಗಲೇ ಬೇಗನೆ ತಮಗೆ ತಲುಪಿರಬಹುದು. ಎಂದಿನಂತೆ ತಮ್ಮ ಸಹಕಾರವನ್ನು ಅಪೇಕ್ಷಿಸುತ್ತೇವೆ. ಅಭಿಮಾನವಿರಲಿ.

**– ಸಂ.**

**ಲೇಖನಾಂಕ**

# ತಮಿಳುನಾಡಿನ ನವಗ್ರಹ ದೇವಾಲಯಗಳು – ೯

ಸಂಗ್ರಹ : **ಸೂರೀಂದ್ರ**
ಬೆಂಗಳೂರು

ಗ್ರಹಗಳು ಪ್ರತಿಯೊಬ್ಬನ ಜನನಕಾಲದಿಂದಲೇ ಸಂಚರಿಸಲು ಪ್ರಾರಂಭವಾಗುತ್ತವೆ. ಭಾರತದಲ್ಲಿಯೇ ಅಪರೂಪವಾದ ನವಗ್ರಹಗಳ ದೇವಾಲಯವು ತಮಿಳುನಾಡಿನಲ್ಲಿರುವುದು ಎಷ್ಟೋ ಜನರಿಗೆ ತಿಳಿಯದ ವಿಷಯವಾಗಿದೆ. ಪ್ರತಿಯೊಂದು ಗ್ರಹವೂ ನಮ್ಮ ಮೇಲೆ ಅದರದೇ ಆದ ಪರಿಣಾಮವನ್ನು ಬೀರುತ್ತದೆ. ಗ್ರಹಗಳು ಬೀರುವ ದುಷ್ಪರಿಣಾಮಗಳನ್ನು ಪರಿಹರಿಸಿಕೊಳ್ಳುವುದಕ್ಕೋಸ್ಕರ ಅನೇಕ ವಿಧವಾದ ಶಾಂತಿಗಳನ್ನು ಮಾಡಿಸುವುದು, ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವುದು ಸಾಮಾನ್ಯ. ಅಷ್ಟೇ ಅಲ್ಲದೆ, ಬಾಧಿತರು ತಮ್ಮ ಕಷ್ಟಗಳಿಗೆ ತಮಿಳುನಾಡಿನಲ್ಲಿರುವ ಈ ನವಗ್ರಹ ದೇವಾಲಯಗಳನ್ನು ಸಂದರ್ಶಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ. ಶ್ರೀಗುರುಸಾರ್ವಭೌಮ ಮಾಸಪತ್ರಿಕೆಯ ಮೂಲಕ ''ತಮಿಳುನಾಡಿನ ನವಗ್ರಹ ದೇವಸ್ಥಾನಗಳು'' ಎಂಬ ಸರಮಾಲೆಯಲ್ಲಿ ಒಂಭತ್ತು ನವಗ್ರಹ ದೇವಸ್ಥಾನಗಳ ಬಗ್ಗೆ, ಅವುಗಳು ನಿರ್ಮಾಣವಾಗಿರುವ ಜಾಗದ ಹೆಸರುಗಳು, ಕ್ಷೇತ್ರದ ಇತಿಹಾಸ, ದೇವಸ್ಥಾನಗಳ ನಕ್ಷೆ – ವಿನ್ಯಾಸ, ಅಲ್ಲಿನ ಪವಿತ್ರ ತೀರ್ಥಗಳು, ಪವಿತ್ರ ವೃಕ್ಷಗಳ ಬಗ್ಗೆ ತಿಳಿಸಿಕೊಡಲಿದ್ದೇವೆ.

ಈ ಎಲ್ಲ ದೇವಸ್ಥಾನಗಳು ಕುಂಭಕೋಣದ ಆಸುಪಾಸಿನಲ್ಲಿವೆ. ಭಕ್ತರು ಕುಂಭಕೋಣದಲ್ಲಿರುವ ಸೋಲೆಯಪ್ಪನ್ ರಸ್ತೆಯಲ್ಲಿನ ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿ ವಾಸ್ತವ್ಯ ಮಾಡಿ, ಸುತ್ತಮುತ್ತಲಿನ ಈ ಎಲ್ಲಾ ನವಗ್ರಹ ದೇವಸ್ಥಾನಗಳನ್ನು ಸಂದರ್ಶಿಸಬಹುದಾಗಿದೆ. ಶ್ರೀಮಠದಲ್ಲಿ ವಸತಿ ಹಾಗೂ ಊಟದ ವ್ಯವಸ್ಥೆಯು ಇರುತ್ತದೆ. ಕುಂಭಕೋಣದಲ್ಲಿನ ವ್ಯವಸ್ಥೆಗಾಗಿ ಅಲ್ಲಿನ ಶ್ರೀಮಠಕ್ಕೆ ಈ ಕೆಳಗಿನ ದೂರವಾಣಿ ಸಂಖ್ಯೆಯ ಮೂಲಕ ಸಂಪರ್ಕಿಸಬಹುದಾಗಿದೆ. **0435-2425448.**

## 9. ಮಂಗಳ

ಕುಂಭಕೋಣದಿಂದ ೩೪ ಕಿ.ಮೀ. ಕ್ರಮಿಸಿದರೆ ಕದಿರಾಂ ಮಂಗಲಂ ಎಂಬ ಗ್ರಾಮ ಸಿಗುವುದು. ಈ ದೇವಾಲಯವು ವೈದೀಸ್ವಾಮಿ ದೇವಾಲಯವೆಂದು ಪ್ರಸಿದ್ಧಿ





ಪಡೆದಿರುವುದರಿಂದ ಈ ಊರನ್ನು ವೈದೀಶ್ವರನ್ ಎಂದು ಕರೆಯುವುದುಂಟು. ದೇವಸ್ಥಾನವು ಅತ್ಯಂತ ಸುಂದರವಾದ ಪ್ರಾಚೀನ ವಾಸ್ತುಶಿಲ್ಪದೊಂದಿಗೆ ಇದ್ದು, ಗುಡಿಯ ದ್ವಾರದಲ್ಲಿ ಕಲ್ಲಿನಿಂದ ತೆಂಗಿನಕಾಯಿ ಮತ್ತು ಹೂವುಗಳನ್ನು ಕೆತ್ತಿರುವುದು ಈ ದೇವಸ್ಥಾನದ ವಿಶೇಷವೆನಿಸಿದೆ. ಇಲ್ಲಿ ದೇವಸ್ಥಾನದ ಆಸುಪಾಸಿನಲ್ಲಿರುವ ಅಂಗಡಿಗಳಲ್ಲಿ ಉಪ್ಪು, ಬೆಲ್ಲ, ಸಾಸುವೆ ಮತ್ತು ಮೆಣಸುಗಳನ್ನು ಮಾರಾಟ ಮಾಡಲಾಗುತ್ತದೆ. ಇವುಗಳನ್ನು ಕೊಂಡು ಬೆಲ್ಲ – ಉಪ್ಪನ್ನು ದೇವಸ್ಥಾನಕ್ಕೂ, ಸಾಸುವೆ ಮತ್ತು ಮೆಣಸನ್ನು ದೇವಸ್ಥಾನದಲ್ಲಿರುವ ಕೊಳದಲ್ಲಿ ಹಾಕುವುದು ಇಲ್ಲಿನ ಸಂಪ್ರದಾಯ. ಇದನ್ನು ಮಾಡುವುದರಿಂದ ಚರ್ಮರೋಗಗಳು ವಾಸಿಯಾಗುತ್ತವೆಂಬುದು ನಂಬಿಕೆ.

ದೇವಸ್ಥಾನದ ಪೂರ್ವದ ಬಾಗಿಲಿನ ಮೂಲಕ ಪ್ರವೇಶಿಸಿದರೆ ಮಂಗಳ ಗ್ರಹದ ಗರ್ಭಗುಡಿಯು ಗೋಚರವಾಗುತ್ತದೆ. ಈ ಪ್ರಾಕಾರದಲ್ಲಿಯೇ ಚಿತ್ರಾಮಿರ್ಥ ತೀರ್ಥಂ ಎಂಬ ಕೊಳವಿದೆ. ಇಲ್ಲಿ ನವಗ್ರಹಗಳು ಒಂದೇ ಸಾಲಿನಲ್ಲಿವೆ (ಇತರ ದೇವಸ್ಥಾನಗಳಂತಿಲ್ಲ). ಇಲ್ಲಿ ಪೂಜೆ ಸಲ್ಲಿಸುವವರು ಪವಿತ್ರ ಕೊಳದಲ್ಲಿ ಸ್ನಾನಮಾಡಿ ಪೂಜೆ ಸಲ್ಲಿಸಬೇಕು. ಇದರಿಂದ ಚರ್ಮರೋಗವೇ ಮುಂತಾದ ರೋಗಗಳು ವಾಸಿಯಾಗುವುದೆಂದು ವಾಡಿಕೆ. ಮಂಗಳ ಗ್ರಹವು ಧಾನ್ಯಾಧಿಪತಿಯಾಗಿದ್ದು, ಮನೆ – ಭೂಮಿ – ಸಾಲಗಳಿಗೆ ಸಂಬಂಧಪಟ್ಟವನೆಂದೂ, ನರಗಳ ದೌರ್ಬಲ್ಯವನ್ನು ನಿರ್ಮೂಲನ ಮಾಡುವವನೆಂದೂ ಹೇಳುವರು. ಮಂಗಳ ದೋಷ ನಿವಾರಣೆಗಾಗಿ ಹವಳವನ್ನು ಧರಿಸಬೇಕು.

ಒಂಭತ್ತು ತಿಂಗಳುಗಳಿಂದ ಕುಂಭಕೋಣದ ಆಸುಪಾಸಿನಲ್ಲಿರುವ ನವಗ್ರಹ ದೇವಸ್ಥಾನಗಳನ್ನು ನಮಗೆ ದೊರೆತ ಮಾಹಿತಿಯನುಸಾರ ನಿಮಗೆ ಪರಿಚಯ ಮಾಡಿಕೊಟ್ಟಿದ್ದೇವೆ. ಈ ದೇವಸ್ಥಾನಗಳನ್ನು ಸಂದರ್ಶಿಸುವುದರಿಂದ ನಿಮ್ಮ ಮನಸ್ಸಿಗೆ ಶಾಂತಿ-ಸುಖಗಳುಂಟಾಗಲೆಂಬುದೇ ನಮ್ಮ ಉದ್ದೇಶವಾಗಿದೆ. ನವಗ್ರಹಗಳು ಹಾಗೂ ಅವರವರ ಜನ್ಮನಕ್ಷತ್ರಗಳ ಆಧಾರದ ಮೇಲೆ ಆಯಾ ಗ್ರಹಗಳ ದೋಷಗಳನ್ನು ತಿಳಿದುಕೊಂಡು ಆಚರಿಸುವುದು ಸೂಕ್ತ. ಈ ನಮ್ಮ ಪ್ರಯತ್ನ ನಿಮ್ಮ ಮನಸ್ಸಿಗೆ ಮುದವನ್ನು ನೀಡಿರಬಹುದೆಂದು ನಾನು ಆಶಿಸುತ್ತಾ ವಿರಮಿಸುತ್ತೇನೆ.

**"ಧರಣೀಗರ್ಭಸಂಭೂತಂ ವಿದ್ಯುತ್ಕಾಂತಿ ಸಮಪ್ರಭಮ್ ।**
**ಕುಮಾರಂ ಶಕ್ತಿಹಸ್ತಂ ತಂ ಮಂಗಲಂ ಪ್ರಣಮಾಮ್ಯಹಮ್ ॥"**

**(ಮುಗಿದುದು)**

# ನವಗ್ರಹಸ್ತೋತ್ರಮ್

ಜಪಾಕುಸುಮಸಂಕಾಶಂ ಕಾಶ್ಯಪೇಯಂ ಮಹದ್ಯುತಿಮ್ ।
ಧ್ವಾಂತಾರಿಂ ಸರ್ವಪಾಪಘ್ನಂ ಪ್ರಣತೋಽಸ್ಮಿ ದಿವಾಕರಮ್ ॥ (ಸೂರ್ಯನಿಗೆ)

ದಧಿಶಂಖತುಷಾರಾಭಂ ಕ್ಷೀರೋದಾರ್ಣವಸಂಭವಮ್ ।
ನಮಾಮಿ ಶಶಿನಂ ಭಕ್ತ್ಯಾ ಶಂಭೋರ್ಮುಕುಟಭೂಷಣಮ್ ॥ (ಚಂದ್ರನಿಗೆ)

ಧರಣೀಗರ್ಭಸಂಭೂತಂ ವಿದ್ಯುತ್ಕಾಂಚನಸನ್ನಿಭಮ್ ।
ಕುಮಾರಂ ಶಕ್ತಿಹಸ್ತಂ ಚ ಮಂಗಳಂ ಪ್ರಣಮಾಮ್ಯಹಮ್ ॥ **(ಕುಜನಿಗೆ)**

ಪ್ರಿಯಂಗುಕಲಿಕಾಭಾಸಂ ರೂಪೇಣಾಪ್ರತಿಮಂ ಬುಧಮ್ ।
ಸೌಮ್ಯಂ ಸೌಮ್ಯಗುಣೋಪೇತಂ ನಮಾಮಿ ಶಶಿನಂದನಮ್ ॥ **(ಬುಧನಿಗೆ)**

ದೇವಾನಾಂ ಚ ಋಷೀಣಾಂ ಚ ಗುರುಂ ಕಾಂಚನಸನ್ನಿಭಮ್ ।
ವಂದ್ಯಂ ಚ ತ್ರಿಷು ಲೋಕೇಷು ಪ್ರಣಮಾಮಿ ಬೃಹಸ್ಪತಿಮ್ ॥ **(ಗುರುವಿಗೆ)**

ಹಿಮಕುಂದಮೃಣಾಲಾಭಂ ದೈತ್ಯಾನಾಂ ಪರಮಂ ಗುರುಮ್ ।
ಸರ್ವಶಾಸ್ತ್ರಪ್ರವಕ್ತಾರಂ ಭಾರ್ಗವಂ ಪ್ರಣಮಾಮ್ಯಹಮ್ ॥ **(ಶುಕ್ರನಿಗೆ)**

ನೀಲಾಂಜನಗಿರಿಪ್ರಖ್ಯಂ ರವಿಪುತ್ರಂ ಯಮಾಗ್ರಜಮ್ ।
ಛಾಯಾಮಾರ್ತಾಂಡಸೂನುಂ ಚ ಪ್ರಣಮಾಮಿ ಶನೈಶ್ಚರಮ್ ॥ **(ಶನಿಗೆ)**

ಅರ್ಧಕಾಯಂ ಮಹಾವೀರ್ಯಂ ಚಂದ್ರಾದಿತ್ಯವಿಮರ್ದನಮ್ ।
ಸಿಂಹಿಕಾಗರ್ಭಸಂಭೂತಂ ತಂ ರಾಹುಂ ಪ್ರಣಮಾಮ್ಯಹಮ್ । **(ರಾಹುವಿಗೆ)**

ಪಲಾಶಪುಷ್ಪಸಂಕಾಶಂ ತಾರಕಾಗ್ರಹತಾರಕಮ್ ।
ರೌದ್ರಂ ರೌದ್ರಾತ್ಮಕಂ ಘೋರಂ ತಂ ಕೇತುಂ ಪ್ರಣಮಾಮ್ಯಹಮ್ ॥ **(ಕೇತುವಿಗೆ)**

ಅರಿಷ್ಟಾನಿ ಪ್ರಣಶ್ಯಂತು ದುರಿತಾನಿ ಭಯಾನಿ ಚ ।
ಶಾಂತಿರಸ್ತು ಶುಭಂ ನೋಽಸ್ತು ಗ್ರಹಾಃ ಕುರ್ವಂತು ಮಂಗಲಮ್ ॥

❑❑





**ಪರ್ಯಟನೆ**

## ಅನಂತಪುರ ಶಾಖಾಮಠದಲ್ಲಿ ನೂತನ ರಜತ ರಥ ಸಮರ್ಪಣೆ

ಮಂತ್ರಾಲಯ ಶ್ರೀರಾಘವೇಂದ್ರಸ್ವಾಮಿಗಳವರ ಮಠಾಧೀಶರಾದ ಶ್ರೀಮತ್ಸುಶಮೀಂದ್ರತೀರ್ಥ ಶ್ರೀಪಾದಂಗಳವರು ಹಾಗೂ ಉತ್ತರಾಧಿಕಾರಿಗಳಾದ ಶ್ರೀಮತ್ಸುಯತೀಂದ್ರತೀರ್ಥ ಶ್ರೀಪಾದಂಗಳವರು ಇಲ್ಲಿನ ಶಾಖಾಮಠದಲ್ಲಿ ನೂತನವಾಗಿ ನಿರ್ಮಿಸಿದ **'ರಜತ ರಥ'**ವನ್ನು ಶ್ರೀಗುರುರಾಜರಿಗೆ ಸಮರ್ಪಿಸಿದರು. ಎಂ.ಎಲ್.ಎ. ಶ್ರೀ ಬಿ. ನಾರಾಯಣ ರೆಡ್ಡಿ, ಶ್ರೀ ಕೆ. ಶ್ರೀನಿವಾಸಾಚಾರ್ಯ, ಶ್ರೀ ತಿಕ್ಕಾರೆಡ್ಡಿಯವರು ಇನ್ನು ಮುಂತಾದ ಅನೇಕ ಭಕ್ತರ ಸಹಾಯದೊಂದಿಗೆ ರಜತ ರಥ ನಿರ್ಮಾಣ ಮಾಡಿ ಸಮರ್ಪಿಸಲಾಯಿತು. ಈ ರಥಕ್ಕೆ ೮೦ ಕೆ.ಜಿ. ಬೆಳ್ಳಿಯನ್ನು ಉಪಯೋಗಿಸಲಾಗಿದೆ. ಇದೇ ಸಂದರ್ಭದಲ್ಲಿ ಶ್ರೀಮಠದಲ್ಲಿರುವ ರುದ್ರದೇವರಿಗೆ ಏಳು ಕೆ.ಜಿ. ಯ ಬೆಳ್ಳಿಯ ಕವಚವನ್ನೂ ಉಭಯ ಶ್ರೀಪಾದರು ಸಮರ್ಪಿಸಿದರು.

## ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರಿಗೆ ಮುತ್ತಿನ ಅಭಿಷೇಕ

ಅನಂತಪುರಕ್ಕೆ ರಜತ ರಥ ಸಮರ್ಪಣೆಗಾಗಿ ಆಗಮಿಸಿದ ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನಾಧೀಶ್ವರರಾದ ಶ್ರೀಮತ್ಸುಶಮೀಂದ್ರತೀರ್ಥ ಶ್ರೀಪಾದಂಗಳವರಿಗೆ ಭಕ್ತರಿಂದ ಸಂಗ್ರಹೀತವಾದ ಎರಡು ಕೆ.ಜಿ. ಮುತ್ತುಗಳಿಂದ ಅವರ ಉತ್ತರಾಧಿಕಾರಿಗಳಾದ ಶ್ರೀಮತ್ಸುಯತೀಂದ್ರತೀರ್ಥ ಶ್ರೀಪಾದಂಗಳವರು ಅಭಿಷೇಕವನ್ನು ನೆರವೇರಿಸಿದರು. ನಂತರ ಉಭಯ ಶ್ರೀಪಾದಂಗಳವರು ಸಭೆಯನ್ನುದ್ದೇಶಿಸಿ ಮಾತನಾಡಿ ರಾಯರ ಮಹಿಮೆ- ಯನ್ನು ಭಕ್ತಜನತೆಗೆ ತಿಳಿಸಿದರು.

ಇದೇ ಸಂದರ್ಭದಲ್ಲಿ ಅನಂತಪುರ ಶ್ರೀಮಠದಲ್ಲಿ, ಮಂತ್ರಾಲಯ ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದ ಅಧ್ಯಾಪಕರಾದ ವಿದ್ವಾನ್ ಶ್ರೀ ಜಿ.ವಿ. ರಮಣರಾವ್ ರವರು ತಾವು ಒಂದು ವರ್ಷಗಳ ಕಾಲ ನಡೆಸಿದ ಶ್ರೀಮದ್ಭಾಗವತ ಪ್ರವಚನದ ಮಂಗಳ ಮಹೋತ್ಸವವನ್ನು ಉಭಯ ಶ್ರೀಗಳವರ ಸಮ್ಮುಖದಲ್ಲಿ ನೆರವೇರಿಸಿದರು. ಇದೊಂದು ವಿಶೇಷ ಕಾರ್ಯಕ್ರಮವಾಗಿದ್ದು, ಇದರಂತೆ ಒಂದು ವರ್ಷಗಳ ಕಾಲ (೦೯-೦೯-೨೦೦೭ ರಿಂದ ೧೦-೦೯-೨೦೦೭) 'ಮಹಾಭಾರತ ತಾತ್ಪರ್ಯ ನಿರ್ಣಯ' ಗ್ರಂಥದ ಪ್ರವಚನವನ್ನು ಶ್ರೀಮಠದಿಂದ ಹಮ್ಮಿಕೊಂಡಿರುವುದಾಗಿಯೂ ಈ ಎಲ್ಲ ಕಾರ್ಯಕ್ರಮಗಳನ್ನು ಶ್ರೀಶ್ರೀಪಾದಂಗಳವರ ಆಪ್ತಕಾರ್ಯದರ್ಶಿಗಳಾದ ರಾಜಾ. ಎಸ್. ರಾಜಗೋಪಾಲಾಚಾರ್ಯರ ಮಾರ್ಗದರ್ಶನದಲ್ಲಿ ನಡೆಸಲಾಗುವುದೆಂದು ಶ್ರೀಮಠದ ವ್ಯವಸ್ಥಾಪಕರಾದ ಶ್ರೀ ಹೆಚ್. ಮೋಹನರಾವ್ ರವರು ತಿಳಿಸಿದರು.

**ವರದಿ : ಪಿ.ವಿ. ಹರಿನಾಥ್**